ಜನಶಕ್ತಿ

ದುಡಿಯುವ ಜನರ ಪ್ರಾಣಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 8 ಸಂಚಿಕೆ 41


ಅಕ್ಟೋಬರ್ 12, 2014

ಪುಟ 16 ರೂ. 10/-

Blog :janashakthi.wordpress.com e-mail : js_weekly@yahoo.com



ಅಸ್ಪೃಶ್ಯತೆ-ಜಾತಿಯತೆಗಳು ಮುಸ್ಲಿಮರ ಕೊಡುಗೆಯಂತೆ !!
ಆರೆಸ್ಸೆಸ್‌ನ 'ಹೊಸ ಇತಿಹಾಸ' !!!





'ಮೇಕ್ ಇನ್ ಇಂಡಿಯಾ' ಎಂದರೆ 'ಅಗ್ಗದ ವೇತನಕ್ಕೆ ಕಾರ್ಮಿಕರ ಸುಲಿಗೆ'




ಸ್ವಾತಂತ್ರ್ಯದ 67 ವರ್ಷಗಳ ಬಳಿಕವೂ ತುಂಡು ಭೂಮಿಗಾಗಿ ಬಡವರ ಬಡಿದಾಟ



ವಿಳಂಬವಾದರೂ ತಕ್ಕುದಾದ ತೀರ್ಪು



ಸ್ಕಾಟ್ಲೆಂಡ್‌ನಲ್ಲಿ ಸ್ವಾತಂತ್ರ್ಯದ ವಿರುದ್ಧ ಮತ



ಭಾರತದ, ಅದರಲ್ಲೂ ಆಧುನಿಕ ಭಾರತದ ಇತಿಹಾಸ ರಚನೆಗೆ ಬಹು ಮಹತ್ವದ ಕೊಡುಗೆ ನೀಡಿದ ಹಿರಿಮೆ ಖ್ಯಾತ ಇತಿಹಾಸಕಾರ ಬಿಪನ್ ಚಂದ್ರ ಅವರದು. ಇತ್ತೀಚೆಗೆ ಅವರು ಮರಣ ಹೊಂದಿದ ಸಂದರ್ಭದಲ್ಲಿ ಅವರ ಕೊಡುಗೆಯ ಕುರಿತು ಮತ್ತೊಬ್ಬ ಖ್ಯಾತ ಇತಿಹಾಸಕಾರ ಇರ್ಫಾನ್ ಹಬೀಬ್ ಅವರು ಬರೆದ ಬರಹವಿದು.

ಆಧುನಿಕ ಭಾರತದ ಇತಿಹಾಸ ರಚನೆಗೆ ಅಮೂಲ್ಯ ಕೊಡುಗೆ ನೀಡಿದ ಇತಿಹಾಸಜ್ಞ "ಬಿಪನ್ ಚಂದ್ರ"

ಪ್ರಖ್ಯಾತ ಇತಿಹಾಸಜ್ಞ ಬಿಪನ್ ಚಂದ್ರ ಆಗಸ್ಟ್ 30,2014 ರಂದು ನಿಧನರಾದರು. ಮುಂಚೂಣಿಯ ಚರಿತ್ರಕಾರರೂ, ವೈಜ್ಞಾನಿಕ ಮನೋಭಾವ ಮತ್ತು ರಾಜಿಮಾಡಿಕೊಳ್ಳದ ಜ್ಯಾತ್ಯಾತೀತತೆಯ ಸಮರ್ಥಕರೂ ಆಗಿದ್ದ ಅವರ ನಿಧನದಿಂದ ದೇಶದ ವಿದ್ವತ್ ಲೋಕವು ಮಾತ್ರವಲ್ಲದೆ ಚಿಂತಕ ಸಮೂಹವೂ ಬಡವಾಗಿದೆಯೆಂದು ಅನೇಕ ಗಣ್ಯರು ಅವರನ್ನು ಸ್ಮರಿಸಿ ಪ್ರಶಂಸಿರುವ ಬಗ್ಗೆ ಪತ್ರಿಕೆಗಳಲ್ಲಿ ಮತ್ತು ದೃಶ್ಯ ಮಾಧ್ಯಮಗಳಲ್ಲಿ ಸಾಕಷ್ಟು ವರದಿಗಳು ಬಂದಿವೆ.

ಬಿಪನ್ ಚಂದ್ರ 1928ರಲ್ಲಿ ಕಾಂಗ್ರದಲ್ಲಿ(ಈಗ ಹಿಮಾಚಲ ಪ್ರದೇಶದಲ್ಲಿದೆ) ಜನಿಸಿದರು. ಆಗ ಪಂಜಾಬಿನಲ್ಲಿದ್ದ ವಾಡಿಕೆಯಂತೆ ಅವರು ಪ್ರಾಥಮಿಕ ಶಿಕ್ಷಣ ಪಡೆದದ್ದು ಉರ್ದು ಭಾಷೆಯಲ್ಲಿ. ಮುಂದೆ ಲಾಹೋರಿನ ಫಾರ್ಮನ್ ಕ್ರೈಸ್ತ ಕಾಲೇಜಿನಲ್ಲಿ ಪದವಿ ಪಡೆದರು. ದೇಶದ ವಿಭಜನೆಯ ಕಾರಣದಿಂದ ಅವರು ಲಾಹೋರನ್ನು ಬಿಡಬೇಕಾಯ್ತು. ನಂತರ ಅಮೆರಿಕದ ಸ್ಟ್ಯಾನ್‌ಫೋರ್ಡ್ ವಿಶ್ವ ವಿದ್ಯಾಲಯದಲ್ಲಿ ಉನ್ನತ ವ್ಯಾಸಂಗ ಮಾಡಿದರು. ಆಗ ಅವರು ಕಮ್ಯೂನಿಸ್ಟ್‌ರ ಸಂಪರ್ಕ ಹೊಂದಿದ್ದರು. ಆ ಕಾರಣಕ್ಕಾಗಿ ಅವರನ್ನು ಅಮೆರಿಕದಿಂದ ಗಡಿಪಾರು ಮಾಡಿ ಭಾರತಕ್ಕೆ ಕಳಿಸಲಾಯ್ತು. (1950ರ ದಶಕದ ಕೊನೆಯಲ್ಲಿ ಅಮೆರಿಕ ಕಮ್ಯೂನಿಸಂನ ಪ್ರಭಾವದ ಭಯದಿಂದ ತತ್ತರಿಸಿತ್ತು. ಅಮೆರಿಕದ ಬಂಡವಾಳಶಾಹಿಗಳಿಗೆ ಕಮ್ಯೂನಿಸಂ ಸಿಂಹ ಸ್ವಪ್ನವಾಗಿತ್ತು. ಅದು ಸಹಜವೂ ಆಗಿತ್ತು. ಆಗ ಕಮ್ಯೂನಿಸ್ಟ್-ವಿರೋಧಿಗಳ ಕ್ಯಾಂಪಿನ ಪ್ರಮುಖನಾಗಿದ್ದ 'ಮೆಕ್ಯಾರ್ತಿ' ಎಂಬ ಹೆಸರಿನ ಅಮೆರಿಕದ ಸೆನೆಟ್‌ನ ಒಬ್ಬ ಸದಸ್ಯ ಪ್ರತಿಪಾದಿಸುತ್ತಿದ್ದ ಕಮ್ಯೂನಿಸ್ಟ್-ವಿರೋಧಿ ನಿಲುವುಗಳು 'ಮೆಕ್ಯಾರ್ತಿಸಂ' ಎಂದು ಕರೆಯಲಾದ ಒಂದು ಸಿದ್ಧಾಂತದ ಸ್ವರೂಪವನ್ನೇ ಪಡೆದು ಅಮೆರಿಕವು ಸಮರೋಪಾದಿಯಲ್ಲಿ ಕಮ್ಯೂನಿಸ್ಟ್-ವಿರೋಧಿ ಕಾರ್ಯಾಚರಣೆ ನಡೆಸಿತ್ತು. ಹೇಗಾದರೂ ಸರಿ, ಕಮ್ಯೂನಿಸ್ಟ್‌ರನ್ನು ಸದೆ ಬಡಿಯಲೇಬೇಕು ಸಾಧ್ಯವಾದರೆ ಮುಗಿಸಲೇಬೇಕೆಂಬ ಮೆಕ್ಯಾರ್ತಿಯ ನಿಲುವನ್ನು ಅಮೆರಿಕ ಅಕ್ಷರ ಸಹ ಪಾಲಿಸುತ್ತಿತ್ತು.)

ಭಾರತಕ್ಕೆ ಮರಳಿದ ಬಿಪನ್ ಚಂದ್ರ ದೆಹಲಿಯ ಹಿಂದೂ ಕಾಲೇಜಿನಲ್ಲಿ ಉಪನ್ಯಾಸಕರಾಗಿ ಸೇರಿಕೊಂಡರು. ಕೆಲವು ಮಾರ್ಕ್ಸ್‌ವಾದಿ ವಿದ್ವಾಂಸರ ಜೊತೆಗೂಡಿ ಚರಿತ್ರೆಗೆ ಸಂಬಂಧಿಸಿದ ಒಂದು ಅನ್ವೇಷಣಾ ನಿಯತಕಾಲಿಕ ಪತ್ರಿಕೆ ಹೊರ ತರಲು ಬೆಂಬಲ ಪಡೆಯುವ ಸಲುವಾಗಿ ಅವರು ಅಲಿಘಢಕ್ಕೆ ಬಂದಿದ್ದಾಗ ನಾನು ಅವರನ್ನು ಭೇಟಿಯಾಗಿದ್ದೆ. ಮಾರ್ಕ್ಸ್‌ವಾದಿ ಆಲೋಚನೆ ಅಥವಾ ವಾಲಿಕೆ/ನಿಲುವುಗಳ ಆಧಾರಿತ ಲೇಖನಗಳೇ ಅಲ್ಲದೆ ಸಮಾಜ ವಿಜ್ಞಾನಕ್ಕೆ ಸಂಬಂದಿಸಿದ ಯಾವುದೇ ಗಂಭೀರ ವಿಷಯ ಕುರಿತಾದ ಲೇಖನಗಳಿಗೂ ನಿಯತಕಾಲಿಕದಲ್ಲಿ ಪ್ರಕಟಗೊಳ್ಳುವ ಅವಕಾಶವಿತ್ತು.

ಬಿಪನ್ ಚಂದ್ರ ಉಪನ್ಯಾಸಕರಾಗಿ ಕೆಲಸಮಾಡುತ್ತಿದ್ದ ಸಮಯದಲ್ಲಿ, ತಮ್ಮ ಸಂಶೋಧನಾ ಪ್ರಬಂಧಕ್ಕಾಗಿ ಅವರು ಆಯ್ಕೆ ಮಾಡಿಕೊಂಡ '1880-1905ರ ಕಾಲಾವಧಿಯಲ್ಲಿ ಭಾರತದ ಆರ್ಥಿಕ ರಾಷ್ಟ್ರೀಯತೆಯ ಬೆಳವಣಿಗೆ' ವಿಷಯ ಕುರಿತು ರಚಿಸಿದ ಮಹಾ ಪ್ರಬಂಧವು ಒಂದು ಮೇರು ಕೃತಿ. ಬ್ರಿಟಿಷ್ ಸಾಮ್ರಾಜ್ಯವಾದದ ಆರ್ಥಿಕ ನೀತಿಗಳ ಬಗ್ಗೆ ಅವರು ಅನೇಕ ಭಾಷೆಗಳ ಪತ್ರಿಕೆಗಳೂ ಸೇರಿದಂತೆ ಬೇರೆ ಬೇರೆ ಮೂಲಗಳಿಂದ ಸಂಗ್ರಹಿಸಿದ ಮಾಹಿತಿ, ಅದರ ವಿಶ್ಲೇಶಣೆ ಮತ್ತು ಅದನ್ನು ಪ್ರಸ್ತುತಪಡಿಸಿದ ರೀತಿ ಹಾಗು ಅವರ ಸಾಮರ್ಥ್ಯ ನಿಬ್ಬೆರಗಾಗುವಂತಿದೆ. ಖ್ಯಾತ ವಿಮರ್ಶಕರೂ ಆಗಿದ್ದ ಕಾಂ. ಇ.ಎಂ. ಎಸ್.ನಂಬೂದಿರಿಪ್ಪಾಡ್ ಅವರು ಬಿಪನ್ ಚಂದ್ರ ಅವರ ಮಹಾ ಪ್ರಬಂಧವನ್ನು 14.08.1966ರ ಪೀಪಲ್ಸ್ ಡೆಮಾಕ್ರಸಿ ವಾರಪತ್ರಿಕೆಯಲ್ಲಿ ವಿಮರ್ಶಿಸಿ ಅದನ್ನು ಪ್ರಶಂಶಿಸಿದ್ದರು. ರಾಷ್ಟ್ರೀಯ ಚಳುವಳಿಯು, ಅನೇಕ ಸಂದರ್ಭಗಳಲ್ಲಿ ವರ್ಗದ ಆಧಾರದ ಮೇಲೆ ತೆಗೆದುಕೊಂಡ ನಿಲುವುಗಳ ಬಗ್ಗೆ ಬಿಪನ್ ಚಂದ್ರ ಅವರು ಸಾಕಷ್ಟು ಗಮನ ಹರಿಸಿಲ್ಲವೆಂಬ ಟಿಪ್ಪಣಿಯನ್ನೂ ಇ.ಎಂ.ಎಸ್. ಮಾಡಿದ್ದರು. ರಾಷ್ಟ್ರೀಯವಾದಿಗಳು ಬ್ರಿಟಿಷ್ ಸಾಮ್ರಾಜ್ಯವಾದದ ಆರ್ಥಿಕ ನೀತಿಗಳ ವಿರುದ್ಧ ಮಧ್ಯಮ ವರ್ಗದ ಜನರನ್ನು ಮಾತ್ರವಲ್ಲದೆ ಭಾರತದ ಎಲ್ಲ ಭಾಷೆ, ಧರ್ಮ ಮತ್ತು ಪ್ರದೇಶಗಳ ಬಡ ಜನರನ್ನೂ ಆಕರ್ಷಿಸಿ ಅವರನ್ನು ಆಂದೋಲನಕ್ಕೆ ತೊಡಗಿಸುವಲ್ಲಿ ಸಫಲರಾದರು ಎಂದು ತೋರಿಸುವುದು ಬಿಪನ್ ಚಂದ್ರ ಅವರ ಮುಖ್ಯವಾದ ಉದ್ದೇಶವಾಗಿತ್ತು. ಇಂತಹ ಅಂಶಗಳ ದಾಖಲೆಗಳು ಕೊಡುವ ಸಂದೇಶಗಳಿಂದಾಗಿ ಈ ಪುಸ್ತಕ ಮುಖ್ಯವಾಗುತ್ತದೆ.

ವಸಾಹತುವಾದವು ದೇಶದ ಕೈಗಾರಿಕೀಕರಣವನ್ನು ನಶಿಸುವಂತೆ ಮಾಡಿದ್ದುದು ಭಾರತದ ರಾಷ್ಟ್ರೀಯತೆಗೆ ಆತಂಕವನ್ನುಂಟುಮಾಡಿತ್ತು. ಈ ಬಗ್ಗೆ ಅಮೆರಿಕದ ಒಬ್ಬ ವಿದ್ವಾಂಸ ಮಾರಿಸ್ ಡಿ. ಮಾರಿಸ್ ಅನುಮಾನ ವ್ಯಕ್ತಪಡಿಸಿದಾಗ ಬಿಪನ್ ಚಂದ್ರ ಅವರಿಗೆ ಚುರುಕು ಮುಟ್ಟಿಸುವಂತಹ ಉತ್ತರ ಕೊಟ್ಟಿದ್ದರು. ನನ್ನ ಮಟ್ಟಿಗೆ ಹೇಳುವುದಾದರೆ, ಹತ್ತೊಂಭತ್ತನೇ ಶತಮಾನದ ಆರ್ಥಿಕ ಚರಿತ್ರೆ ಬಗ್ಗೆ ಇಷ್ಟೊಂದು ಪ್ರಭಾವಶಾಲಿಯಾದ ಮತ್ತು ಸ್ಫೂರ್ತಿದಾಯಕವಾದ ಹಾಗೂ ಸ್ವಂತಿಕೆಯುಳ್ಳ ಲೇಖನ ಬೇರೆ ಯಾವುದೂ ಇಲ್ಲ.

ಬಿಪನ್ ಚಂದ್ರ ಅವರು ಜವಹರ್‌ಲಾಲ್ ನೆಹರೂ ವಿಶ್ವ ವಿದ್ಯಾಲಯ ಆರಂಭವಾಗುತ್ತಿದ್ದಂತೆಯೇ ಅಲ್ಲಿನ ಚಾರಿತ್ರಿಕ ಅಧ್ಯಯನ ಕೇಂದ್ರದಲ್ಲಿ ಪ್ರಾಧ್ಯಾಪಕರಾಗಿ ಸೇರಿದರು. ಜೆ.ಎನ್.ಯು. ಮೇಲೆ ತಮಗಿರುವ ಬಯಕೆಯ ಬಗ್ಗೆ

ಅವರು ನನಗೊಮ್ಮೆ ಹೀಗೆ ಹೇಳಿದ್ದರು: "ಅಲ್ಲಿ ಪ್ರಾಧ್ಯಾಪಕ ಮತ್ತು ಜವಾನ ಒಂದೇ ಟೇಬಲ್‌ನಲ್ಲಿ ಒಟ್ಟಿಗೆ ಕುಳಿತುಕೊಳ್ಳುವಂತಾಗುವುದನ್ನು ನಾನು ನೋಡಬೇಕು". ನಿಜ ಜೀವನವು ನಮ್ಮ ಕನಸುಗಳಿಗಿಂತಲೂ ಬಹಳ ಸಂಕೀರ್ಣವಾಗಿದೆ. ಆದರೆ, ಜೆ.ಎನ್.ಯು. ನಲ್ಲಿರುವಷ್ಟು ಮುಕ್ತವಾದ ವಾತಾವರಣ, ಎಲ್ಲರೂ ಸಮಾನರೆಂಬ ಭಾವ, ಬೇರೆ ಯಾವುದೇ ಅಂತಹ ಸಂಸ್ಥೆಯಲ್ಲಿ ಇಲ್ಲವೆಂದೇ ಹೇಳಬೇಕು. ಈ ಕೀರ್ತಿ ಬಿಪನ್ ಚಂದ್ರ ಮತ್ತು ಆದರ್ಶದೃಷ್ಟಿಯ ಅವರ ತಲೆಮಾರಿನವರಿಗೆ ಸಲ್ಲುತ್ತದೆ.

1970ರ ದಶಕದಲ್ಲಿ ಬಿಪನ್ ಚಂದ್ರ ಅವರು ಕೈ ಹಾಕಿದ ಒಂದು ದೊಡ್ಡ ಸಾಹಸವೆಂದರೆ ಅವರು ಎನ್.ಸಿ.ಈ.ಅರ್.ಟಿ. ಆಶ್ರಯದಲ್ಲಿ ರಚಿಸಿದ ಶಾಲಾ ಮಕ್ಕಳ ಪಠ್ಯ ಪುಸ್ತಕ: 'ಆಧುನಿಕ ಭಾರತದ ಇತಿಹಾಸ'. ಅದರಲ್ಲಿ ವಸಾಹತುವಾದ ಮತ್ತು ರಾಷ್ಟ್ರೀಯ ಚಳುವಳಿಗಳ ಚಿತ್ರಣ ಸ್ಪಷ್ಟವಾಗಿವೆ. ಚರಿತ್ರೆಯ ಬೇರೆ ಆಯಾಮಗಳು, ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಅಂಶಗಳನ್ನೊಳಗೊಂಡ, ಯಾವುದೇ ಪ್ರದೇಶವನ್ನು ಕಡೆಗಣಿಸದ ಒಂದು ಸಮಗ್ರ ಚಿತ್ರಣವೂ ಇದೆ. 1977ರಲ್ಲಿ ಪ್ರಕಟವಾದ ಈ ಪುಸ್ತಕವನ್ನು ಆರ್.ಎಸ್.ಎಸ್. ತೀವ್ರವಾಗಿ ವಿರೋಧಿಸಿತು. 2001ರಲ್ಲಿ ಮೊದಲ ಬಿ.ಜೆ.ಪಿ. ಸರ್ಕಾರವು ಈ ಪುಸ್ತಕವನ್ನು ಪಠ್ಯಕ್ರಮದಿಂದ ಕಿತ್ತು ಹಾಕಿತು. 2009 ರಲ್ಲಿ ಅದನ್ನು ಪುನಃ ಪ್ರಕಟಿಸಲಾಗಿದೆ.

1970ರ ದಶಕದಲ್ಲಿ ಬೆಳೆಯುತ್ತಿದ್ದ ಕೋಮುವಾದದ ಬಗ್ಗೆ ಅವರು ನೊಂದಿದ್ದರು. 'ಆಧುನಿಕ ಭಾರತದಲ್ಲಿ ಕೋಮುವಾದ' ಎಂಬ ಪ್ರಬಂಧ ಸಂಕಲನವನ್ನು 1984ರಲ್ಲಿ ಪ್ರಕಟಿಸಿದರು. ಅದರ ಜೊತೆಯಲ್ಲೆ ಅವರು ರಾಷ್ಟ್ರೀಯ ಚಳುವಳಿಯ ಮರು ವ್ಯಾಖ್ಯಾನ ಮಾಡಲು ಆರಂಭಿಸಿದರು. ಅಮೃತಸರದಲ್ಲಿ 1985ರಲ್ಲಿ ನಡೆದ 'ಇಂಡಿಯನ್ ಹಿಸ್ಟರಿ ಕಾಂಗ್ರೆಸ್'ನ ತಮ್ಮ ಅಧ್ಯಕ್ಷ ಭಾಷಣದಲ್ಲಿ ಗಾಂಧಿಯವರ ರಾಜಿ- ಸಂಧಾನಗಳ ಬಗ್ಗೆ ಕಮ್ಯೂನಿಸ್ಟ್‌ರ ವಿಮರ್ಶೆಯನ್ನು ಬಿಪನ್ ಚಂದ್ರ ವಿರೋಧಿಸಿದರು. ಇದು ಅವರು ಎಡಪಂಥದಿಂದ ದೂರ ಸರಿಯಲು ಆರಂಭಿಸಿದ ಕಾಲವೂ ಆಗಿತ್ತು.

ಜೆ.ಎನ್.ಯು. ಪ್ರಕಟಿಸಿದ 'ದಿ ಲೆಫ್ಟ್ ಇನ್ ಇಂಡಿಯಾ' ಸಂಪುಟದಲ್ಲಿ ಅವರು ಭಾರತದ ಕಮ್ಯೂನಿಸ್ಟರ ಚರಿತ್ರೆಯ ವಿಮರ್ಶೆಯನ್ನು ತೀಕ್ಷ್ಣವಾಗಿ ಮಾಡಿದ್ದಾರೆ. ಒಮ್ಮೆ ಅವರ ಮನೆಗೆ ಔತಣಕ್ಕೆ ಹೋಗಿದ್ದಾಗ ನಾನು ಈ ವಿಷಯವನ್ನು ಪ್ರಸ್ತಾಪಿಸಿ, ಕಮ್ಯೂನಿಸ್ಟ್‌ರ ನಿಲುವುಗಳನ್ನು ವಿವರಿಸಲು ಅವರಲ್ಲೊಬ್ಬ ವಿದ್ವಾಂಸರಿಗೆ ನೀವು ಅವಕಾಶ ಕೊಡಬೇಕಿತ್ತು ಎಂದಾಗ ಅವರು ನನ್ನೊಂದಿಗೆ, ಸೌಜನ್ಯದ ಕಾರಣದಿಂದಾಗಿ, ಮಾತು ಮುಂದುವರಿಸಲಿಲ್ಲ. ಹೇಗಾದರೂ, ಅವರು ತಮ್ಮ ಮುಂದಿನ ಪುಸ್ತಕ 'ಇಂಡಿಯಾಸ್ ಸ್ಟ್ರಗ್ಲ್ ಫಾರ್ ಇಂಡಿಪೆಂಡೆನ್ಸ್'ನಲ್ಲಿ ಒಂದು ಸಮತೋಲನದ ನಿಲುವನ್ನು ತಳೆದಿದ್ದಾರೆ. 1987ರಲ್ಲಿ ಪ್ರಕಟವಾದ ಈ ಪುಸ್ತಕವು ಸುಲಭವಾಗಿ ಓದಿಸಿಕೊಂಡು ಹೋಗುವ ಶೈಲಿಯಲ್ಲಿದೆ.

ಬಿಪನ್ ಚಂದ್ರ ಅವರು ಹಿಂದಿನದ್ದನ್ನು ಇಂದಿಗೆ ಸಂಬಂಧ ಕಲ್ಪಿಸುತ್ತಿದ್ದರು. ಹಾಗಾಗಿ ಸಮಕಾಲೀನ ಘಟನೆಗಳಿಗೆ ಬಹಳ ಸೂಕ್ಷ್ಮವಾಗಿ ಸಂವೇದಿಸುತ್ತಿದ್ದರು. ಇಂದಿರಾ ಗಾಂಧಿಯವರು 1975ರಲ್ಲಿ ಹೇರಿದ್ದ ತುರ್ತು ಪರಿಸ್ಥಿತಿಯ ಬಗ್ಗೆ ಮತ್ತು ಅದೇ ಸಮಸಯದಲ್ಲೇ ಜಯ ಪ್ರಕಾಶ ನಾರಾಯಣರ ಸಂಪೂರ್ಣ ಕ್ರಾಂತಿಯ ಅಸಂವೈಧಾನಿಕ ನೆಲೆ ಮತ್ತು ಅದು ಕೋಮುವಾದಿ ಶಕ್ತಿಗಳ ಬೆಂಬಲ ಪಡೆ- ಯುತ್ತಿದ್ದುದರ ಬಗ್ಗೆ ಯಾತನೆಗೊಳಗಾಗಿದ್ದರು. ಆದ್ದರಿಂದ ಅವರನ್ನು ಕಾಂಗ್ರೆಸ್ ಪಕ್ಷದ ಸಮರ್ಥಕರೆಂದು ಕರೆಯುವುದು ತಪ್ಪಾಗುತ್ತದೆ. ಕೋಮುವಾದಿಗಳಿಗೆ ಕೊಟ್ಟ ಪ್ರತಿಯೊಂದು ರಿಯಾಯ್ತಿಯನ್ನು ಅವರು ವಿರೋಧಿಸಿದರು.

2004ರಲ್ಲಿ ನ್ಯಾಷನಲ್ ಬುಕ್ ಟ್ರಸ್ಟ್‌ನ ಅ ಧ್ಯಕ್ಷರಾಗಿ ನೇಮಕಗೊಂಡ ಅವರು 2012ರವರೆಗೂ ಆ ಹುದ್ದೆಯಲ್ಲಿದ್ದರು. ಭಾರತ ಸರ್ಕಾರವು ಅವರಿಗೆ ಪದ್ಮ ಭೂಷಣ ಪ್ರಶಸ್ತಿ ನೀಡಿ ಗೌರವಿಸಿತ್ತು. ಅವರು ಉತ್ಸಾಹದ ಚಿಲುಮೆಯಾಗಿದ್ದರು. ಅಸಾಧಾರಣ ಹಾಸ್ಯ ಪ್ರಜ್ಞೆಯೂ ಅವರಿಗಿತ್ತು. ಒಮ್ಮೆ ಅವರೊಡನೆ ಸ್ನೇಹ ಬೆಳೆಯಿತೆಂದರೆ ಭಿನ್ನಾಭಿಪ್ರಾಯದ ಕಾರಣದಿಂದ ಅದು ಮುರಿಯುತ್ತಿರಲಿಲ್ಲ.

ಆಧುನಿಕ ಭಾರತದ ಚರಿತ್ರೆಯನ್ನು ವಸಾಹತುವಾದ ಕಣ್ಣೋಟದ ಮೂಲಕ ಮಾಡುವ ವ್ಯಾಖ್ಯಾನವನ್ನು ಮತ್ತು ಮಾರ್ಕ್ಸ್‌ವಾದದ ಅವಹೇಳನವನ್ನು ಅವರು ವಿರೋಧಿಸುತ್ತಿದ್ದರು. ಅವರ ಕೊನೆಗಾಲದಲ್ಲಿ ಬಂದ ಕೆಲವು ಭಿನ್ನಾಭಿಪ್ರಾಯಗಳು ಮುಖ್ಯವಲ್ಲ. ಅವರನ್ನು ಅವರ ಕೊಡುಗೆಯನ್ನು ನೆನೆಸಿಕೊಂಡು ನಮನ ಸಲ್ಲಿಸೋಣ.

ಕನ್ನಡಕ್ಕೆ – ಕೆ.ಎಂ. ನಾಗರಾಜ್

ಸಂಪಾದಕೀಯ



ಕರ್ನಾಟಕವನ್ನು ಒಡೆಯಬೇಕೆನ್ನುವವರ ಉದ್ದೇಶವಾದರೂ ಏನು?

▌ನಿತ್ಯಾನಂದಸ್ವಾಮಿ

ಹಲವು ವರ್ಷಗಳ ಹಿಂಸಾತ್ಮಕ ಚಳುವಳಿಯ ನಂತರ ವಿಶಾಲ ಆಂಧ್ರ ಒಡೆದು ಎರಡು ರಾಜ್ಯಗಳಾಗಿವೆ. ಅದಕ್ಕಾಗಿಯೇ ಒಂದು ರಾಜಕೀಯ ಪಕ್ಷವನ್ನು ಹುಟ್ಟುಹಾಕಿ ಚಳುವಳಿಗೆ ನೇತೃತ್ವ ನೀಡಿದ ವ್ಯಕ್ತಿ ತೆಲಂಗಾಣ ರಾಜ್ಯದ ಮುಖ್ಯಮಂತ್ರಿ ಆಗಿದ್ದಾರೆ. ಇನ್ನುಳಿದವರು ಮಂತ್ರಿಗಳಾಗಿದ್ದಾರೆ. ಬೇರೆ ಬೇರೆ ಪ್ರಾಂತ್ಯಗಳಲ್ಲಿ ಹರಿದು ಹಂಚಿಹೋಗಿದ್ದ ಒಂದು ಭಾಷೆ ಮಾತನಾಡುವ ಜನರನ್ನು ಒಗ್ಗೂಡಿಸುವ ಭಾಷಾವಾರು ಪ್ರಾಂತ್ಯ ರಚನೆಯ ಹೋರಾಟಕ್ಕೆ ನೇತೃತ್ವ ನೀಡಿದ ರಾಜ್ಯ-ಆಂಧ್ರಪ್ರದೇಶ ಇಂದು ಒಡೆದು ಹೋಗಿದೆ. ಒಂದೇ ತಾಯಿಯ ಮಕ್ಕಳಾಗಿದ್ದ ತೆಲುಗು ಜನರು ಇಂದು ದಾಯಾದಿಗಳಾಗಿದ್ದಾರೆ.

ರಾಜ್ಯ ಛಿದ್ರವಾದರೂ ಚಿಂತೆ ಇಲ್ಲ, ನಮಗೆ ಅಧಿಕಾರ ಸಿಕ್ಕರೆ ಸಾಕು ಎನ್ನುವ ಸ್ವಾರ್ಥಿ ರಾಜಕಾರಣಿಗಳು ಕೆಟ್ಟ ಕನಸು ಕಾಣುವಂತಾಗಿದ್ದಾರೆ. ಕರ್ನಾಟಕವನ್ನು ಕತ್ತರಿಸಿ ತಮ್ಮ ದುರಾಸೆಯನ್ನು ಈಡೇರಿಸಿಕೊಳ್ಳಲು ಹೊರಟಿದ್ದಾರೆ. ಹೈದರಾಬಾದ್ ಕರ್ನಾಟಕದ ಭಾಗದಲ್ಲಿ ಎದ್ದ ಪ್ರತ್ಯೇಕ ರಾಜ್ಯದ ಕೂಗು ತಣ್ಣಗಾಗುತ್ತಿದ್ದಂತೆ ಮುಂಬಯಿ ಕರ್ನಾಟಕ ಪ್ರದೇಶದಲ್ಲಿ ಮತ್ತೊಮ್ಮೆ ಅದೇ ಕೂಗು ಕೇಳಿ ಬರುತ್ತಿದೆ. ಬಿಜೆಪಿಯ ಮಾಜಿ ಸಚಿವ ಉಮೇಶ್ ಕತ್ತಿಯವರ ಪ್ರಸ್ತಾವವನ್ನು ಬಿಜೆಪಿ ಒಂದು ರಾಜಕೀಯ ಪಕ್ಷವಾಗಿ ವಿರೋಧಿಸಿಲ್ಲ. ಉತ್ತರ ಕರ್ನಾಟಕದ ಅಭಿವೃದ್ಧಿಗೆ ಪ್ರತ್ಯೇಕ ರಾಜ್ಯ ನಿರ್ಮಾಣ ಒಂದೇ ಪರಿಹಾರ ಆಗಿರುವುದಾದರೆ ಎಲ್ಲರೂ ಅದನ್ನು ಬೆಂಬಲಿಸಬೇಕು. ಆದರೆ ಅದನ್ನು ಖಚಿತ ಪಡಿಸುವವರು ಯಾರು?.

ಒಂದು ಪ್ರದೇಶದ ಅಭಿವೃದ್ಧಿ ಆ ದೇಶದ ಸರ್ಕಾರದ ಧೋರಣೆಯನ್ನು ಅವಲಂಭಿಸಿದೆ. ಒಂದು ಬಂಡವಾಳಶಾಹಿ ಸಮಾಜ ವ್ಯವಸ್ಥೆಯಲ್ಲಿ, ಪ್ರಾದೇಶಿಕ ಅಸಮಾನತೆ ಕಟ್ಟಿಟ್ಟ ಬುತ್ತಿ. ಬಂಡವಾಳಶಾಹಿ ಆರ್ಥಿಕತೆಗೆ ತನ್ನ ಅಭಿವೃದ್ಧಿಯೊಂದೇ ಆದ್ಯತೆ ಆಗಿರುತ್ತದೆಯೇ ಹೊರತು ಜನಪ್ರದೇಶಗಳ ಅಭಿವೃದ್ಧಿ ಅಲ್ಲ. ಉತ್ತರ ಕರ್ನಾಟಕ ಪ್ರತ್ಯೇಕ ರಾಜ್ಯವಾದರೂ ಅಲ್ಲಿ ಪ್ರಾದೇಶಿಕ ಅಸಮಾನತೆ ಇದ್ದೇ ಇರುತ್ತದೆ.

ಯಾವುದೇ ಒಂದು ಪ್ರದೇಶದ ಅಭಿವೃದ್ಧಿ ಸ್ಥಳೀಯ ಚುನಾಯಿತ ಪ್ರತಿನಿಧಿಗಳ ಮೇಲೂ ಅವಲಂಭಿಸಿರುತ್ತದೆ. ಆದರೆ ಸ್ವಾರ್ಥಿ ರಾಜಕಾರಣಿಗಳು ಅಧಿಕಾರದಲ್ಲಿದ್ದಾಗ ತಮ್ಮ ಅಭಿವೃದ್ಧಿ ಮಾಡಿಕೊಳ್ಳುವುದರಲ್ಲಿ ಮಗ್ನರಾಗಿರುತ್ತಾರೆಯೇ ಹೊರತು ತಮ್ಮ ಕ್ಷೇತ್ರ, ತಮ್ಮ ಜನರ ಅಭಿವೃದ್ಧಿ ಕುರಿತಾಗಿ ಅಲ್ಲ. ಉತ್ತರ ಕರ್ನಾಟಕದ ಹಿಂದುಳಿಯುವಿಕೆಗೂ ಇದು ಅನ್ವಯಿಸುತ್ತದೆ. ಕತ್ತಿ ಅಂತಹ ರಾಜಕಾರಣಿಗಳು ಅಧಿಕಾರದಲ್ಲಿದ್ದಾಗ ತಮ್ಮ ಪ್ರದೇಶದ ಅಭಿವೃದ್ಧಿ ಬಗ್ಗೆ ಕಿಂಚಿತ್ತೂ ಗಮನ ನೀಡದೆ ಅಧಿಕಾರ ಕಳೆದುಕೊಂಡ ನಂತರ ಪ್ರದೇಶದ ಅಭಿವೃದ್ಧಿ ಕುರಿತು ಮೊಸಳೆ ಕಣ್ಣೀರು ಸುರಿಸುತ್ತಾರೆ.

ಚಿಕ್ಕ ರಾಜ್ಯಗಳ ನಿರ್ಮಾಣ ಅಭಿವೃದ್ಧಿಯ ಸೋಪಾನ ಎಂದು ಬಿಂಬಿಸುವವರು ಹೊಸತಾಗಿ ನಿರ್ಮಾಣಗೊಂಡ ಉತ್ತರಖಂಡ, ಜಾರ್ಖಂಡ, ಛತ್ತೀಸ್‌ಗಢ್‌ಗಳತ್ತ ಸ್ವಲ್ಪ ಗಮನಹರಿಸುವುದು ಲೇಸು. ಆ ರಾಜ್ಯಗಳ ಜನಗಳ ಪರಿಸ್ಥಿತಿ ಕಿಂಚಿತ್ತಾದರೂ ಬದಲಾಗಿದೆಯಾ? ಮಾನವ ಅಭಿವೃದ್ಧಿ ಮತ್ತು ಶಿಕ್ಷಣ ಸೂಚ್ಯಾಂಕಗಳಲ್ಲಿ ಇವತ್ತಿಗೂ ಈ ಹೊಸರಾಜ್ಯಗಳು ಅತ್ಯಂತ ಹಿಂದುಳಿದಿರುವುದು ಯಾಕೆ?

ಭಾರತ ಒಂದು ಗಣರಾಜ್ಯವಾಗಿದ್ದರೂ ಅಧಿಕಾರ ಬಹುತೇಕವಾಗಿ ಕೇಂದ್ರದಲ್ಲಿ ಕೇಂದ್ರಿಕೃತವಾಗಿದೆ. ಸಣ್ಣ ರಾಜ್ಯಗಳ ನಿರ್ಮಾಣದಿಂದಾಗಿ ಕೇಂದ್ರ ಮತ್ತಷ್ಟು ಬಲಿಷ್ಠವಾಗುತ್ತದೆ. ರಾಜ್ಯಗಳು ಬಲಹೀನವಾಗುತ್ತವೆ. ಕೇಂದ್ರ ಮತ್ತು ರಾಜ್ಯಗಳ ನಡುವೆ ಅಧಿಕಾರ ಮತ್ತು ಸಂಪನ್ಮೂಲಗಳ ಹಂಚಿಕೆಯ ವಿಷಯದಲ್ಲಿ ಒಂದು ಆರೋಗ್ಯಕರವಾದ ಸಮತೋಲನ ಅತ್ಯಗತ್ಯವಾಗಿದೆ. ಈ ವಿಷಯದಲ್ಲಿ ಸರ್ಕಾರಿಯ ಆಯೋಗದ ಶಿಫಾರಸುಗಳು ಕಡತಗಳಲ್ಲಿ ಧೂಳು ತಿನ್ನುತ್ತಿವೆ. ಪ್ರಾದೇಶಿಕ ಅಸಮಾನತೆಯ ವಿರುದ್ಧ ಪಕ್ಷಾತೀತ ಜನಾಂದೋಲನ ನಡೆಯಬೇಕಾಗಿದೆ. ಸ್ವಾರ್ಥಿ ರಾಜಕಾರಣಿಗಳು ಜನರನ್ನು ಅತ್ತ ಒಂದು ಆಂದೋಲನದಲ್ಲಿ ತೊಡಗಿಸುವ ಬದಲು ಭಾವನಾತ್ಮಕ ನೆಲೆಯಲ್ಲಿ ಎತ್ತಿಕಟ್ಟುತ್ತಿದ್ದಾರೆ. ಕರ್ನಾಟಕವನ್ನು ಒಡೆಯುವ ಪ್ರಸ್ತಾವದ ಹಿಂದಿನ ಸ್ವಾರ್ಥವನ್ನು ಈ ನಾಡಿನ ಜನ ಅರ್ಥಮಾಡಿಕೊಳ್ಳದೆ ಇರಲಾರರು.

ವಿಳಂಬವಾದರೂ ತಕ್ಕುದಾದ ತೀರ್ಪು

ಅತಿ ವಿಳಂಬವಾದರೂ ಅಂತೂ ನ್ಯಾಯಾಲಯ ಉತ್ತಮವಾದ ಒಂದು ತೀರ್ಪನ್ನು ನೀಡಿದೆ. ಆದಾಯಕ್ಕೆ ಮೀರಿದ ಆಸ್ತಿಗಳಿಕೆಯ ಮೊಕದ್ದಮೆಯಲ್ಲಿ ತಮಿಳುನಾಡಿನ ಮುಖ್ಯಮಂತ್ರಿಯಾಗಿದ್ದ ಜಯಲಲಿತಾರವರನ್ನು ದೋಷಿಗಳೆಂದು ಘೋಷಿಸಿ ನಾಲ್ಕು ವರುಷಗಳ ಕಾರಾಗೃಹವಾಸ ಮತ್ತು ನೂರು ಕೋಟಿ ರೂಪಾಯಿಗಳ ದಂಡ ವಿಧಿಸಿದೆ. ಅಲ್ಲದೇ ಅವರ ನೆಚ್ಚಿನ ಗೆಳತಿ ಶಶಿಕಲಾ, ಇಳವರಸಿ ಮತ್ತು ಸಾಕುಮಗ ಸುಧಾಕರನ್‌ರಿಗೂ 4 ವರುಷಗಳ ಜೈಲು ಮತ್ತು ತಲಾ 10 ಕೋಟಿ ರೂ. ದಂಡ ವಿಧಿಸಲಾಗಿದೆ. ಅಧಿಕಾರದಲ್ಲಿರುವಾಗಲೇ ಅಪರಾಧಿ ಎಂದು ಘೋಷಿಸಲ್ಪಟ್ಟ ಮೊದಲ ಮುಖ್ಯಮಂತ್ರಿ ಜಯಲಲಿತಾ. ಸಾರ್ವಜನಿಕ ಸೇವಕರು, ಜನಪ್ರತಿನಿಧಿಗಳ ಭ್ರಷ್ಟಾಚಾರದ ವಿರುದ್ಧ ಜನರ ಆಕ್ರೋಶ ಬೆಳೆಯುತ್ತಿರುವಾಗಲೇ ಭ್ರಷ್ಟಾಚಾರ ನಿಗ್ರಹ ಕಾಯ್ದೆಯನ್ವಯ ನೀಡಲಾಗಿರುವ ಈ ತೀರ್ಪು ಮಹತ್ವದ್ದು. ಯಾರು ಎಷ್ಟೇ ಉನ್ನತ ಸ್ಥಾನದಲ್ಲಿದ್ದರೂ ಕಾನೂನು ಎಲ್ಲರಿಗೂ ಒಂದೇ ಎಂಬ ಸಂದೇಶವನ್ನು, ಕಾನೂನು ಬದ್ಧ ಆಡಳಿತವಿನ್ನೂ ಜೀವಂತವಿದೆ ಎಂಬುದನ್ನು ತೋರಿಸಿದೆ.



ಎ.ಐ.ಎ.ಡಿ.ಎಂ.ಕೆ. ನಾಯಕಿಯೂ, ಮುಖ್ಯಮಂತ್ರಿಯೂ ಆಗಿದ್ದ ಜಯಲಲಿತಾ ತನ್ನ ಸಾಕು ಮಗ ಸುಧಾಕರನ್ ಮದುವೆಯಲ್ಲಿ ಮಾಡಿದ ವೆಚ್ಚಗಳು, ಅಲ್ಲಿ ಮೆರೆಸಲಾದ ಸಂಪತ್ತಿನ ಅಸಹ್ಯ ಪ್ರದರ್ಶನ, ಅಧಿಕಾರಸ್ಥರ ಲಂಗು ಲಗಾಮಿಲ್ಲದ ವರ್ತನೆಗಳು ತೀವ್ರವಾದ ಸಾರ್ವಜನಿಕ ಟೀಕೆಗೆ ಗುರಿಯಾಗಿತ್ತು. ಮೇಲಾಗಿ ಹಿಂದಿನ ಕೆಲ ಮೊಕದ್ದಮೆಗಳಲ್ಲಿ ಸ್ವತಃ ಜಯಲಲಿತಾರವರು ಖಾಸಗಿಯಾಗಿ ಹೊಂದಿದ ವಸ್ತ್ರ, ಒಡವೆ, ಚಪ್ಪಲಿಗಳು ಮುಂತಾದವುಗಳ ಪ್ರಮಾಣವೇ ಅಸಹ್ಯಕರ ಎನಿಸುವಂತಿದ್ದವು. ಇಂತಹ ಸ್ಥಿತಿಯಿಂದಾಗಿ ಮೊಕದ್ದಮೆ ದಾಖಲಾದವು. ಇದೀಗ 18 ವರುಷಗಳ ದೀರ್ಘ ಕಾಲದ ನಂತರ ತೀರ್ಪು ಹೊರ ಬಂದಿದೆ. 1996 ರಲ್ಲಿ ಮೊಕದ್ದಮೆ ಹೂಡಿದಾಗ 66.65 ಕೋಟಿ ರೂ. ಮೌಲ್ಯದ ಅಕ್ರಮ ಆಸ್ತಿ ಹೊಂದಿದ ಆರೋಪವಿತ್ತು. ಆಗ ಜಯಲಲಿತಾ ಸರಕಾರದಿಂದ ಕೇವಲ ರೂ.1 ನ್ನು ಮಾತ್ರ ಸಂಬಳವನ್ನಾಗಿ ತೆಗೆದುಕೊಳ್ಳುತ್ತಿದ್ದರು.



ಇಲ್ಲಿ ನ್ಯಾಯಾಲಯದ ಪ್ರಕ್ರಿಯೆಗಳು ಮತ್ತು ಅಧಿಕಾರಸ್ಥರ ಆಟಗಳನ್ನು ಗಮನಿಸುವುದು ಅಗತ್ಯವಿದೆ. ನ್ಯಾಯಾಲಯದ ತೀರ್ಪು ಬೇಗ ಹೊರಬರದಿರುವಂತೆ ಹಲವಾರು ತಂತ್ರಗಳನ್ನು ಹೆಣೆಯಲಾಗಿತ್ತು. ಹಲವಾರು ಅಡ್ಡಿಗಳು ಬಂದಿದ್ದವು. ವಿಳಂಬವಾದಷ್ಟೂ ಸಾಕ್ಷಿಗಳು ನಾಶವಾಗುವುದು ಅಥವಾ ತಿರುಗಿ ಬೀಳುವುದನ್ನು ನಿರೀಕ್ಷಿಸಲಾಗಿತ್ತು. ಮೇಲಾಗಿ ಅಧಿಕಾರವನ್ನು ಬಳಸಿ ನ್ಯಾಯದಾನದ ಪ್ರಕ್ರಿಯೆಯನ್ನೇ ಪ್ರಭಾವಿಸುವ ಸಂಭವವೂ ಇತ್ತು. ಇಂತಹ ವಿದ್ಯಾಮಾನಗಳನ್ನು ಗಮನಿಸಿಯೇ ಸುಪ್ರಿಂಕೋರ್ಟ್ ತಮಿಳುನಾಡಿನ ಹೊರಗಿನ ನ್ಯಾಯಾಲಯದಲ್ಲಿ ವಿಚಾರಣೆಗೆ ವಹಿಸಬೇಕಾಯಿತು. ಹೀಗಾಗಿ ಬೆಂಗಳೂರಿನ ವಿಶೇಷ ನ್ಯಾಯಾಲಯದಲ್ಲಿ ಇದು ಇತ್ಯರ್ಥವಾಗಿದೆ.

ಬಹಳ ಮುಖ್ಯ ಅಂಶವೆಂದರೆ ಅಧಿಕಾರಸ್ಥರ ಮೇಲೆ ಹೂಡಲಾದ ಬಹಳಷ್ಟು ಪ್ರಕರಣಗಳು ಯಾವುದೋ ಕಾರಣಗಳಿಂದ ವಜಾ ಆಗಿ ನಿರ್ದೋಷಿಗಳಾಗುವ ಸಂಭವವೇ ಹೆಚ್ಚು. ಇಲ್ಲಿ ಅದು ಹಾಗಾಗಲಿಲ್ಲ. ಇಂತಹುದೇ ನಿಷ್ಠುರ ಕ್ರಮಗಳು ಮುಂದೆಯೂ ಬರಬೇಕು. ದೇಶದಲ್ಲೀಗ ಉನ್ನತ ಸ್ಥಾನದಲ್ಲಿರುವ ಬ್ರಹ್ಮಾಂಡ ಭ್ರಷ್ಟಾಚಾರದಲ್ಲಿ ಮುಳುಗೇಳುತ್ತಿರುವವರ ಸಂಖ್ಯೆ ಸಾವಿರಾರು.

ಆದ್ದರಿಂದ ಈ ತೀರ್ಪನ್ನು ಜನತೆ ಸಮಚಿತ್ತದಿಂದ ಸ್ವೀಕರಿಸುವುದು ಅತ್ಯಗತ್ಯ. ಭಾವನಾತ್ಮಕ ಪ್ರತಿಕ್ರಿಯೆಗಳು ಅನಗತ್ಯ. ಯಾಕೆಂದರೆ ಇವರೆಲ್ಲಾ ಅಕ್ರಮವಾಗಿ ಸಂಪಾದಿಸಿರುವುದು, ವೈಭೋಗಪೂರ್ಣ ಜೀವನ ನಡೆಸುತ್ತಿರುವುದು ಜನಸಾಮಾನ್ಯರ ಬೆವರಿನ ಹಣದಿಂದ, ಸಾರ್ವಜನಿಕ ಸಂಪತ್ತಿನ ಲೂಟಿಯಿಂದ. ಇದು ಜನತೆಯ ವಿಶ್ವಾಸಕ್ಕೆ ಬಗೆದ ದ್ರೋಹ. ಅಷ್ಟೆಲ್ಲಾ ಜನತೆಗೆ ಸಲ್ಲಬೇಕಾದ ಹಣ, ಅವರ ಅನ್ನ, ನೀರು, ವಸತಿ, ವಿದ್ಯೆ, ಆರೋಗ್ಯಕ್ಕೆ ಖರ್ಚು ಮಾಡಬೇಕಾದ ಹಣ. ಇಲ್ಲಿ ಬರಬೇಕಾದುದು ಕಣ್ಣೀರಲ್ಲ, ಈ ಹಣವನ್ನೆ ಇಂತಹವರು ಲೂಟಿ ಮಾಡಿ ಜನರನ್ನು ನಿರ್ಗತಿಕರನ್ನಾಗಿಸುತ್ತಿದ್ದಾರೆ ಎಂಬ ಆಕ್ರೋಶ ಹೊರತು ಭಾವೋದ್ರೇಕಕ್ಕೆ ಬಲಿಯಾಗುವುದಲ್ಲ.

ಹಾಗೆಯೇ ಇದು ಸಂಪೂರ್ಣವಾಗಿ ನ್ಯಾಯಾಂಗದ ತೀರ್ಪು. ಇಲ್ಲಿ ಕನ್ನಡ, ತಮಿಳು ಎಂಬ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಆದರೆ ಕೆಲವರು ಇಂತಹ ಸಂಕುಚಿತ ಬಾವನೆಗಳನ್ನು ಕೆರಳಿಸಿ ಜನತೆಯ ಐಕ್ಯತೆ, ಸೌಹಾರ್ದತೆಯನ್ನು ನಾಶ ಮಾಡಲು ಯತ್ನಿಸುತ್ತಿದ್ದಾರೆ. ಎರಡೂ ರಾಜ್ಯಗಳ ಜನತೆ ಇದ-ಕ್ಕೆ ಬಲಿ ಬೀಳದೇ ಇಂತಹ ಸಂಕುಚಿತ ಮನೋಭಾವವನ್ನು ತಿರಸ್ಕರಿಸಿ ಶಾಂತಿ, ಸೌಹಾರ್ದತೆ ಕಾಪಾಡಬೇಕು.

ಈ ತೀರ್ಪು ಉದಾರೀಕರಣದ ಪ್ರಕ್ರಿಯೆಯಲ್ಲಿ ಇಂತಹ ನೂರಾರು ಪ್ರಕರಣಗಳ ಮೂಲಗಳನ್ನು ಅರಿಯುವ, ಅದರ ವಿರುದ್ಧ ಹೋರಾಡುವ ಮನೋಭಾವವನ್ನು ಇನ್ನಷ್ಟೂ ಬೆಳೆಸಲಿ.

ಕರ್ನಾಟಕ ವಿ.ವಿ. ಪರೀಕ್ಷಾ ಶುಲ್ಕ ಹೆಚ್ಚಳ ಖಂಡಿಸಿ ವಿದ್ಯಾರ್ಥಿ ಪ್ರತಿಭಟನೆ

ಕರ್ನಾಟಕ ವಿಶ್ವ ವಿದ್ಯಾಲಯ ಪ್ರಸಕ್ತ ವರ್ಷದ 1–2–3 ನೇ ಸೆಮಿಸ್ಟರ್‌ನ ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕ ಏರಿಕೆ ಮಾಡಿರುವುದನ್ನು ವಿರೋಧಿಸಿ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ) ಹಾವೇರಿ ಜಿಲ್ಲಾ ಸಮಿತಿ ನೇತೃತ್ವದಲ್ಲಿ ಹಾವೇರಿ ನಗರದ ಜಿ.ಎಚ್. ಕಾಲೇಜು ಮುಂಭಾಗದಲ್ಲಿ ನೂರಾರು ವಿದ್ಯಾರ್ಥಿಗಳು ರಾಷ್ಟ್ರೀಯ ಹೆದ್ದಾರಿ ಬಂದ್ ಮಾಡಿ ಪ್ರತಿಭಟನೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಎಸ್‌ಎಫ್‌ಐ ಜಿಲ್ಲಾಧ್ಯಕ್ಷರಾದ ರೇಣುಕಾ ಕಹಾರ ಮಾತನಾಡಿ ಕರ್ನಾಟಕ ವಿಶ್ವ ವಿದ್ಯಾಲಯವು ಪ್ರತಿ ಸೆಮಿಸ್ಟರ್‌ನಲ್ಲಿಯೂ ಪರೀಕ್ಷಾ ಶುಲ್ಕ ಏರಿಕೆ ಮಾಡುತ್ತಾ ವಿದ್ಯಾರ್ಥಿ ವಿರೋಧಿ ನೀತಿಗಳನ್ನು ಜಾರಿ ಮಾಡುತ್ತಿದೆ ಎಂದು ಖಂಡಿಸಿದರು. ವಿವಿಧ ರೀತಿಯ ಹೆಸರಿನಲ್ಲಿ ಕರ್ನಾಟಕ ವಿ.ವಿ. ವಿದ್ಯಾರ್ಥಿಗಳ ಪ್ರವೇಶಾತಿ ಸಂದರ್ಭದಲ್ಲಿ ಹೆಚ್ಚುವರಿ ಹಣವನ್ನು ವಸೂಲಿ ಮಾಡಿ ವಿದ್ಯಾರ್ಥಿಗಳನ್ನು ಸಂಕಷ್ಟಕ್ಕೆ ಗುರಿ ಮಾಡಿತ್ತು. ಮತ್ತೆ ಈಗ ಪರೀಕ್ಷಾ ಶುಲ್ಕ ಏರಿಕೆ ಮಾಡಿ ವಿದ್ಯಾರ್ಥಿಗಳನ್ನು ಬೀದಿಗಿಳಿಸಿ ತಮಾಷೆ ನೋಡುತ್ತಿದೆ ಎಂದು ಟೀಕಿಸಿದರು. ಈಗಾಗಲೇ ಕರ್ನಾಟಕ ವಿಶ್ವ ವಿದ್ಯಾಲಯ ವ್ಯಾಪ್ತಿಯಲ್ಲಿ ಬರುವ ಪದವಿ ಕಾಲೇಜುಗಳ ಪ್ರವೇಶಾತಿ ಪ್ರಾರಂಭವಾಗಿದೆ. ವಿದ್ಯಾರ್ಥಿಗಳಿಂದ ವಿವಿಧ ರೀತಿಯಲ್ಲಿ ಪರೀಕ್ಷಾ ಶುಲ್ಕದ ಹೆಸರಿನಲ್ಲಿ ಹಣ ವಸೂಲಿಗೆ ನಿಂತಿರುವುದು ತೀವ್ರ ಖಂಡನೀಯವಾದುದು. ಕಳೆದ ವರ್ಷದ 2 ಸೆಮಿಸ್ಟರ್‌ನ ಪರೀಕ್ಷಾ ಶುಲ್ಕವನ್ನು ಓಬಿಸಿ ವಿದ್ಯಾರ್ಥಿಗಳೇ ಭರಿಸಬೇಕೆಂದು ಕರ್ನಾಟಕ ವಿಶ್ವ ವಿದ್ಯಾಲಯವು ಆದೇಶ ಹೊರಡಿಸಿರುವ ಪರಿಣಾಮ ವಿದ್ಯಾರ್ಥಿಗಳು 1,070 ರೂಪಾಯಿಗಳನ್ನು ಮತ್ತು ಕಾಲೇಜು ಅಭಿವೃದ್ಧಿ ಹೆಸರಿನಲ್ಲಿ 300 ನಿಂದ 600 ರೂಪಾಯಿವರೆಗೆ ಮತ್ತು ಕಳೆದ ಬಾರಿ ಇದ್ದ ನೋದಣಿ ಶುಲ್ಕ ಈ ಬಾರಿ ಹೆಚ್ಚಳವಾಗಿದ್ದು ಇತರ ಶುಲ್ಕಗಳ ಹೆಸರಿನಲ್ಲಿ ಹಣ ವಸೂಲಿಗೆ ನಿಂತಿದ್ದು ವಿದ್ಯಾರ್ಥಿಗಳ ಪ್ರವೇಶಾತಿ ಶುಲ್ಕಕ್ಕಿಂತ ಇತರೆ ಶುಲ್ಕಗಳು ದುಪ್ಪಟ್ಟಾಗಿದ್ದವು. ವಿದ್ಯಾರ್ಥಿಗಳು ತೀವ್ರ ತೊಂದರೆಯನ್ನು ಅನುಭವಿಸುವಂತಾಗಿತ್ತು. ವಿ.ವಿ.ಯ ಈ ನಿರ್ಧಾರ ಪದವಿ ಶಿಕ್ಷಣದಿಂದ ವಿದ್ಯಾರ್ಥಿಗಳು ದೂರ ಉಳಿಯುವಂತಾಗಿದೆ. ಪ್ರತಿ ವರ್ಷದಿಂದ ವರ್ಷಕ್ಕೆ ವಿದ್ಯಾರ್ಥಿಗಳಿಂದ ಅಭಿವೃದ್ಧಿ ಹೆಸರಿನಲ್ಲಿ ಪರೀಕ್ಷಾ ಶುಲ್ಕ ಹೆಸರಿನಲ್ಲಿ ಶುಲ್ಕ ಏರಿಕೆ ಮಾಡುತ್ತಾ ಹೊರಟಿದೆ ಎಂದರು.



ಜಿಲ್ಲಾ ಕಾರ್ಯದರ್ಶಿ ಸುಭಾಸ ಎಂ. ಮಾತನಾಡಿ, ಕಳೆದ ವರ್ಷದ ಮತ್ತು ಪ್ರಸಕ್ತ ವರ್ಷದ ಓಬಿಸಿ ವಿದ್ಯಾರ್ಥಿಗಳಿಂದ ಹೆಚ್ಚಿಗೆ ಪರೀಕ್ಷಾ ಶುಲ್ಕವನ್ನು ವಸೂಲಿ ಮಾಡುವುದನ್ನು ನಿಲ್ಲಿಸಬೇಕು. ಕಾಲೇಜು ಅಭಿವೃದ್ಧಿ ಸಮಿತಿ ನೆಪದಲ್ಲಿ ವಿದ್ಯಾರ್ಥಿಗಳ ಬಳಿ ಈಗಾಗಲೇ ಪಡೆದಿರುವ ಹಣವನ್ನು ವಿದ್ಯಾರ್ಥಿಗಳಿಗೆ ಮರಳಿಸಬೇಕು. ಪದವಿ ಕಾಲೇಜಿಗೆ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಒದಗಿಸಬೇಕು. ವಿದ್ಯಾರ್ಥಿಗಳಿಂದ ಹೆಚ್ಚುವರಿಯಾಗಿ ಪಡೆದ ಹಣವನ್ನು ಕೂಡಲೇ ವಾಪಾಸ್ಸು ಮಾಡಬೇಕು. ಪ್ರತಿ ಸೆಮಿಸ್ಟರ್‌ನಲ್ಲಿ ವಿದ್ಯಾರ್ಥಿಗಳಿಂದ ಹೆಚ್ಚುವರಿಯಾಗಿ ವಿವಿಧ ತೆರನಾದ ಶುಲ್ಕಗಳ ಹೆಸರಿನಲ್ಲಿ ಹಣ ವಸೂಲಿ ಮಾಡುವುದನ್ನು ನಿಲ್ಲಿಸಬೇಕು ಎಂದರು. ಈ ಬೇಡಿಕೆಗಳನ್ನು ಕರ್ನಾಟಕ ವಿಶ್ವ ವಿದ್ಯಾಲಯದ ಕುಲಪತಿಗಳು ವಿದ್ಯಾರ್ಥಿ ಮುಖಂಡರ ಸಭೆ ಕರೆದು ಕೂಡಲೆ ಈ ಬೇಡಿಕೆಗಳನ್ನು ಈಡೇರಿಸದೇ ಹೋದಲ್ಲಿ ವಿದ್ಯಾರ್ಥಿಗಳು ಕರ್ನಾಟಕ ವಿಶ್ವ ವಿದ್ಯಾಲಯಕ್ಕೆ ಮುತ್ತಿಗೆ ಹಾಕಬೇಕಾಗುತ್ತದೆ ಎಂದು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಎಸ್‌ಎಫ್‌ಐ ಮುಖಂಡರಾದ ಮಲ್ಲಿಕಾರ್ಜುನ ಕುರುಬರ, ರಫೀಕ ನದಾಫ, ನವೀನ ದೊಡ್ಡಣ್ಣವರ, ಕಾರ್ತಿಕ, ಮಹಾಂತೇಶ ದ್ಯಾಮಣ್ಣವರ, ಯೋಗೇಶ ಹಿರೇಮಠ, ಮಹೇಶಕುಮಾರ ಎಚ್.ಎಸ್. ಮಲ್ಲಿಕಾರ್ಜುನ ದೇಸಾಯಿ, ಪ್ರಮೋದ, ಮಂಜು ಎಂ.ಟಿ, ಮಹಮ್ಮದ ರಫೀಕ ಎಮ್.ಎ., ದಾದಾಪೀರ, ಸಂತೋಷ, ಸುರೇಖಾ, ವೀಣಾ, ಶೃತಿ, ಮುಂತಾದವರಿದ್ದರು.

ಹಾನಗಲ್‌ನಲ್ಲಿ ಪ್ರತಿಭಟನೆ

ಎಸ್‌ಎಫ್‌ಐ ಹಾನಗಲ್ ತಾಲೂಕು ಸಮಿತಿ ನೇತೃತ್ವದಲ್ಲಿ ಹಾನಗಲ್ ನಗರದಲ್ಲಿ ಕುಮಾರೇಶ್ವರ ಪ್ರಥಮ ದರ್ಜೆ ಕಾಲೇಜಿನಿಂದ ಪ್ರತಿಭಟನಾ ಮೆರವಣಿಗೆ ಆರಂಭಿಸಿದ ಎಸ್‌ಎಫ್‌ಐ ಕಾರ್ಯಕರ್ತರು ನಂತರ ಗಾಂಧಿ ವೃತ್ತದ ಬಳಿ ಸಮಾವೇಶಗೊಂಡು ಪ್ರತಿಭಟನೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು. ಎಸ್‌ಎಫ್‌ಐ ಕಾರ್ಯದರ್ಶಿ ಸುಭಾಸ ಎಂ. ಮಾತನಾಡಿದರು.

ಪ್ರತಿಭಟನೆಯಲ್ಲಿ ಎಸ್‌ಎಫ್‌ಐ ಮುಖಂಡರಾದ ಹನುಮಂತ ಆರ್. ಟಿ., ಸವಿತಾ ಜಲಕಿ, ಲಕ್ಷ್ಮಿ ಪಾವಲಿ, ಪಾರ್ವತಿ, ಮಂಜುಳಾ, ಮುಕ್ತಾ, ಸಿಖಂದರ್ ಜೆ. ಎ., ಚಮನ ರಝಾ, ಕಾಶಿನಾಥ, ಪ್ರಕಾಶ ಎನ್.ಬಿ., ಪ್ರದೀಪ ಕೆ.ಎಚ್., ಆರ್. ಎಸ್. ಜಾಡರ, ಜಿ. ಎನ್. ಕಟ್ಟಿ, ವಿ. ಎಸ್. ಶೆಟ್ಟರ್, ಜಾಬೀನ ಮಕಾನದಾರ್, ಮುಬೀನಾ ಖೇಣಿ, ಹೀನಾ ಸವಣೂರು, ಅಕ್ಕಮ್ಮ ನೆಗಳೂರು, ಶಿಲ್ಪಾ. ಎಂ., ನಾಗವೇಣಿ ಇ. ಎಸ್. ಮುಂತಾದವರಿದ್ದರು. ●

ಕೋಳಿ ನುಂಗಿದ ಕಲ್ಲು,

ಮಠ ಗುಡಿಯಲ್ಲಿರುವ ವಿಫುಲ ಹಣವೆಲ್ಲ
ಕೋಳಿ ನುಂಗಿದ ಕಲ್ಲು ಇದು ಸುಳ್ಳು ಅಲ್ಲ.
ಬಡ ಮುಗ್ಧ ಜನಗಳಿಗೆ ಬಿಡಿ ಪೈಸೆ ಕೊಡ
ಖಂಡಿತವು ಸಿಗದಯ್ಯ ಸಂದೇಹ ಬೇಡ.

– ವಿಡಂಬಾರಿ

ಗಜೇಂದ್ರಗಡ: ಪದವಿ ವಿದ್ಯಾರ್ಥಿಗಳ ಹೆಚ್ಚುವರಿ ಶುಲ್ಕ ಮರುಪಾವತಿಗೆ ಆಗ್ರಹ

ಎಸ್‌ಎಫ್‌ಐ ನೇತೃತ್ವದಲ್ಲಿ ಪದವಿ ವಿದ್ಯಾರ್ಥಿಗಳು ಹಾಗೂ ಎಸ್‌ಎಫ್‌ಐ ಮುಖಂಡರು ಪ್ರತಿಭಟನೆ ನಡೆಸಿದರು. ವಿದ್ಯಾರ್ಥಿಗಳಿಗೆ ಸರಕಾರಿ ಶುಲ್ಕ ಮತ್ತು ಅರೆ ಸರಕಾರಿ ಶುಲ್ಕ ಹಾಗೂ ವಿಶ್ವವಿದ್ಯಾಲಯ ಶುಲ್ಕ ಮೂರು ಸಂಸ್ಥೆಯ ಶುಲ್ಕವನ್ನ ಎಲ್ಲಾ ವಿದ್ಯಾರ್ಥಿಗಳಿಂದ ಭರಿಸಿರುವುದು ಸರಿಯಲ್ಲ. ಕೂಡಲೆ ಹೆಚ್ಚುವರಿ ಶುಲ್ಕವನ್ನು ವಿದ್ಯಾರ್ಥಿಗಳಿಗೆ ಮರು ಪಾವತಿಸಬೇಕೆಂದು ಒತ್ತಾಯಿಸಿ ವಿಶೇಷ ತಹಶಿಲ್ದಾರರ ಮೂಲಕ ಉನ್ನತ ಶಿಕ್ಷಣ ಸಚಿವರು ಹಾಗೂ ಕರ್ನಾಟಕ ವಿ.ವಿ. ಕುಲಪತಿ ಧಾರವಾಡ ರವರಿಗೆ ಮನವಿ ಸಲ್ಲಿಸಲಾಯಿತು.



ಈ ಪ್ರತಿಭಟನೆ ಉದ್ದೇಶಿಸಿ ಡಿವೈಎಫ್‌ಐ ನ ಜಿಲ್ಲಾ ಸಂಚಾಲಕರು ಪೀರು ರಾಠೋಡ ಮಾತನಾಡಿ ಸರಕಾರದ ಹಾಗೂ ಕರ್ನಾಟಕ ವಿಶ್ವವಿದ್ಯಾಲಯದ ನಿರ್ಲಕ್ಷ್ಯದಿಂದ ವಿದ್ಯಾರ್ಥಿಗಳಿಂದ ಸ್ಥಳೀಯ ಪದವಿ ಕಾಲೇಜುಗಳು ಪಡೆದಿರುವ ಹೆಚ್ಚುವರಿ ಶುಲ್ಕವನ್ನು ಮರುಪಾವತಿಸಬೇಕು. ಸರಕಾರದ ಆದೇಶದಂತೆ ಬಿಎ/ಬಿಕಾಂ/ಬಿಬಿಎ ಪ್ರಥಮ ವರ್ಷದ ಓಬಿಸಿ ವಿದ್ಯಾರ್ಥಿಗಳಿಗೆ 1,060 ರೂ. ಶುಲ್ಕವಿರುತ್ತದೆ. ಹಾಗೂ ಬಿಎ/ಬಿಕಾಂ/ಬಿಬಿಎ ಪ್ರಥಮ ವರ್ಷದ ಪರಿಶಿಷ್ಟ ಜಾತಿ ಮತ್ತು ಪಂಗಡದ ವಿದ್ಯಾರ್ಥಿಗಳಿಗೆ 118ರೂ. ಶುಲ್ಕವಿರುತ್ತದೆ. ಹಾಗೂ ವಿದ್ಯಾರ್ಥಿನಿಯರಿಗೆ 203 ರೂ. ಶುಲ್ಕ ಇರುತ್ತದೆ. ಆದರೆ ಸರಕಾರಗಳು ಮತ್ತು ಕರ್ನಾಟಕ ವಿ.ವಿ. ಹೆಚ್ಚುವರಿ ಶುಲ್ಕ ಒಬ್ಬ ವಿದ್ಯಾರ್ಥಿಗೆ 1,500 ದಿಂದ 2,000 ರೂ. ಮರುಪಾವತಿಸಬೇಕು. ಜಿಲ್ಲೆಯಲ್ಲಿ ಅತೀವೃಷ್ಟಿ ಮತ್ತು ಅನಾವೃಷ್ಟಿಯಿಂದ ಬಡ ಮತ್ತು ಮಧ್ಯಮ ವರ್ಗದ ತತ್ತರಿಸಿದ್ದಾರೆ. ಇಂತಹ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ಶುಲ್ಕ ರಿಯಾಯಿತಿ ನೀಡುವ ಬದಲಿಗೆ ಹೆಚ್ಚುವರಿ ಶುಲ್ಕ ಪಡೆದಿರುವುದು ವಿದ್ಯಾರ್ಥಿ ಮತ್ತು ಪಾಲಕರ ವಿರೋಧಿ ನೀತಿಯಾಗಿದೆ ಎಂದು ಹೇಳಿದರು.

ಸ್ಥಳೀಯ ಎಸ್‌ಎಫ್‌ಐನ ನಗರ ಸಮಿತಿ ಕಾರ್ಯದರ್ಶಿ ಶಿವಾಜಿ ಗಡ್ಡದ ಮಾತನಾಡಿ 2014–15ನೇ ಶೈಕ್ಷಣಿಕ ವರ್ಷದ ಪದವಿ ವಿದ್ಯಾರ್ಥಿಗಳ ಪ್ರವೇಶಾತಿ ಶುಲ್ಕವನ್ನು ಸರಕಾರಿ ಆದೇಶಕ್ಕಿಂತ ಹೆಚ್ಚು ಪಡೆದಿದ್ದು ಒಂದು ವಾರದ ಒಳಗಾಗಿ ಮರುಪಾವತಿಸದಿದ್ದರೆ ಉಗ್ರಹೋರಾಟ ಮಾಡುವುದಾಗಿ ಎಚ್ಚರಿಸಿದರು.

ಈ ಪ್ರತಿಭಟನೆಯ ನೇತೃತ್ವವನ್ನು ದಾವಲಸಾಬ ತಾಳಿಕೋಟಿ, ಪ್ರಕಾಶ ಹೆಳವರ, ಮಂಜುನಾಥ ದೊಡ್ಡಮನಿ, ಚನ್ನಬಸಪ್ಪ ಗದ್ದಿ, ಪ್ರವೀಣ ಪಲ್ಲೇದ, ಮಾಂತೇಶ ಪುರ್ತಗೇರಿ, ಮಹ್ಮದೆ ಇಬ್ರಾಹಿಂ, ಜಯಶ್ರೀ ರಾಠೋಡ, ಬಸಮ್ಮ ಗುತ್ತೂರ, ಭೀಮವ್ವ ಹಡಪದ, ಸಲ್ಮಾ ಕಲಕಬಂಡಿ, ತುಳಸಾಬಾಯಿ ಹವಾಲ್ದಾರ, ಹೀರಾ ನಗರಿ, ಸುಜಾತ ತಳವಾರ, ಸುಧಾ ಸರಗಣಚಾರಿ, ಕಾವ್ಯ ಬೇಲೇರಿ, ರೂಪಾ ಅಬ್ಬಿಗೇರಿ, ಸೈಮುನ್ನಿಸಾ ಬಾಗವಾನ, ವರ್ಷಾ ಅಂಗಡಿ, ಕವಿತಾ ಚವ್ಹಾಣ, ಜ್ಯೋತಿ ಜಿಗಳೂರ ಮುಂತಾದವರು ಭಾಗವಹಿಸಿದ್ದರು. ●

ಜನಶಕ್ತಿ
ಕನ್ನಡ ವಾರಪತ್ರಿಕೆ

'ಮೇಕ್ ಇನ್ ಇಂಡಿಯ' ಎಂದರೆ ವಿದೇಶಿ ಬಂಡವಾಳದ ಲೂಟಿಗಾಗಿ ಕಾರ್ಮಿಕ ಕಾನೂನು ತಿದ್ದುಪಡಿ ಎಂದರ್ಥ"

– ಮೀನಾಕ್ಷಿ ಸುಂದರಂ

'ಭಾರತದಲ್ಲಿ ಉತ್ಪಾದಿಸಿ' (ಮೇಕ್ ಇನ್ ಇಂಡಿಯ) ಎಂಬ ಅಭಿಯಾನಕ್ಕೆ ಚಾಲನೆ ನೀಡಿ ಪ್ರಧಾನಿ ನರೇಂದ್ರ ಮೋದಿಯವರು ವಿದೇಶಿ ನೇರ ಹೂಡಿಕೆ ಶಬ್ದಕ್ಕೆ ಹೊಸ ಅರ್ಥ ನೀಡಿ 'ಫಸ್ಟ್ ಡೆವಲಪ್ ಇಂಡಿಯಾ' ಎಂಬ ಹೆಸರನ್ನು ಸೂಚಿಸಿ ದೇಶದ ಕಾನೂನುಗಳನ್ನು ತಿದ್ದುಪಡಿ ಮಾಡಿ ವಿದೇಶಿ ಹಾಗೂ ಸ್ವದೇಶಿ ಕಾರ್ಪೋರೇಟ್ ಶಕ್ತಿಗಳಿಗೆ ಲೂಟಿ ಹೊಡೆಯಲು ಅವಕಾಶ ನೀಡುತ್ತಿದ್ದಾರೆ. ಇದರಲ್ಲಿ ಕಾರ್ಮಿಕರನ್ನು ಸುಲಿಗೆ ಮಾಡುವ ಕಾರ್ಮಿಕ ವಿರೋಧಿ ನೀತಿ ಅಡಕವಾಗಿದೆ ಎಂದು ಸಿಐಟಿಯು ಕರ್ನಾಟಕ ರಾಜ್ಯ ಕಾರ್ಯದರ್ಶಿ ಮೀನಾಕ್ಷಿ ಸುಂದರಂರವರು ಹೇಳಿದರು. ಅವರು ಸೆಪ್ಟೆಂಬರ್ 26, 2014ರಂದು ಮಂಗಳೂರು ನಗರದ ಸರಕಾರಿ ನೌಕರರ ಭವನದಲ್ಲಿ ನಡೆದ ಇಪಿಎಫ್ ಪಿಂಚಣಿದಾರರ ಪ್ರಥಮ ಕರ್ನಾಟಕ ರಾಜ್ಯ ಸಮಾವೇಶವನ್ನು ಉದ್ದೇಶಿಸಿ ಮಾತನಾಡುತ್ತಿದ್ದರು.

ಅವರು ಮುಂದುವರಿದು ಪರಿಣಾಮಕಾರಿ ಆಡಳಿತದ ಮೂಲಕ ವಾಣಿಜ್ಯ ವ್ಯವಹಾರವನ್ನು ಉತ್ತೇಜಿಸುವ ನೆಪದಲ್ಲಿ ಕೈಗಾರಿಕಾ ಸಂಸ್ಥೆಗಳಲ್ಲಿ ದುಡಿಯುವ ಕಾರ್ಮಿಕರ ಕಾನೂನುಬದ್ಧ ಹಕ್ಕುಗಳನ್ನು ನುಂಗಿ ಹಾಕಿ ಕಾಮಿಕರನ್ನು ಹಿಂಡಿ ಹಿಪ್ಪೆ ಮಾಡುವ ಅಪಾಯ ಕಾದಿದೆ ಎಂದು ಹೇಳಿದರು. ಇದನ್ನು ಭಾರತದ ಕಾರ್ಮಿಕ ವರ್ಗ ಸಮರ್ಥವಾಗಿ ಐಕ್ಯತೆಯಿಂದ ಎದುರಿಸಲಿದೆ ಎಂದು ಹೇಳಿದರು. ಸಮರ್ಥ ಭಾರತವನ್ನು ಕಟ್ಟುವ ನೆಪದಲ್ಲಿ ಇನ್ನೂರರಷ್ಟು ಇರುವ ಕಾರ್ಪೋರೇಟ್ ಕಂಪನಿಗಳ ಪರವಾಗಿ ಕೋಟ್ಯಾಂತರ ಜನರನ್ನು ಕಷ್ಟಕ್ಕೀಡು ಮಾಡುವುದು ಇಂದಿನ ವ್ಯವಸ್ಥೆಯ ದುರಂತವಾಗಿದೆ ಎಂದರು. ಸಾಮಾಜಿಕ ಭದ್ರತೆಯ ಭಾಗವಾಗಿ ಇಂದು ಎಲ್ಲಾ ಕಾರ್ಮಿಕರಿಗೆ ಗ್ರಾಚ್ಯುಯಿಟಿ, ಭವಿಷ್ಯನಿಧಿ(ಪಿಎಫ್) ಮತ್ತು ಪಿಂಚಣಿ ಸೌಲಭ್ಯ ಸಿಗಬೇಕು. ಆದರೆ ಸರಕಾರಗಳು ಈ ಜವಾಬ್ದಾರಿಯನ್ನು ಹೊರುವ ಬದಲು ಈ ಸವಲತ್ತುಗಳನ್ನು ನಾಶ ಮಾಡಲು ಹೊರಟಿವೆ. 'ಎಂಪ್ಲೋಯಿ ಪ್ರೊವಿಡೆಂಟ್ ಫಂಡ್' ಅನ್ನು ಈಗ 'ಎಂಪ್ಲೋಯಿ ಪಾಪರ್ ಫಂಡ್' ಆಗಿ ಪರಿವರ್ತನೆ ಮಾಡುವ ಹುನ್ನಾರ ನಡೆಯುತ್ತಿದೆ. ಹಿರಿಯ ನಾಗರಿಕರು ಬದುಕಬೇಕಾದರೆ ಮಾಸಿಕ ಪಿಂಚಣಿ ಬೇಕೇಬೇಕು. ಸಿಐಟಿಯು



ವಸಂತ ಆಚಾರಿ



ಮಾಸಿಕ ಕನಿಷ್ಠ ಪಿಂಚಣಿ ರೂ. 3,000 ನೀಡಬೇಕೆಂದು ಒತ್ತಾಯಿಸಿದರೂ ಕೇಂದ್ರ ಸರಕಾರ ಬರಿ ರೂ. 1,000 ಮಾಸಿಕ ಪಿಂಚಣಿ ನಿಗದಿ ಪಡಿಸಿದೆ. ಅದೂ ಕೂಡ 2014ರ ಏಪ್ರಿಲ್ ತಿಂಗಳಿಂದ ನೀಡುವ ಬದಲು 2014ರ ಸೆಪ್ಟೆಂಬರ್ ತಿಂಗಳಿಂದ ಪ್ರಾರಂಭಿಸಿ 2015ರ ಮಾರ್ಚ್ ತಿಂಗಳಿಗೆ ಮಾತ್ರ. ರೂ. 15,000 ವರೆಗಿನ ಸಂಬಳ ಪಡೆಯುವ ಕಾರ್ಮಿಕರಿಂದ ಭವಿಷ್ಯ ನಿಧಿ ಕಡಿತವಾಗುತ್ತಿದ್ದರೂ ಸರಕಾರದಿಂದ ನೀಡುವ 1.67 ರೂಪಾಯಿಯನ್ನು ಇನ್ನು ಮುಂದೆ ಕಾರ್ಮಿಕರಿಂದಲೇ ಕಡಿತ ಮಾಡಬೇಕೆಂದು ತಿದ್ದುಪಡಿ ಮಾಡಿರುವುದು ಕೇಂದ್ರ ಸರಕಾರ ಕಾರ್ಮಿಕರ ಪರವಾಗಿದೆಯೇ ಎಂಬುದನ್ನು ಸ್ಪಷ್ಟವಾಗಿ ತೋರಿಸುತ್ತಿದೆ ಎಂದರು. ಯುಪಿಎ ಸರಕಾರ ಇಪಿಎಫ್ ಕಾಯ್ದೆಗೆ ತಂದಿರುವ ಕಾರ್ಮಿಕ ವಿರೋಧಿ ತಿದ್ದುಪಡಿಯನ್ನು ತೆಗೆದು ಹಾಕಲು ಎನ್‌ಡಿಎ ಸರಕಾರ ತಯಾರಿಲ್ಲ. ಈ ಸರಕಾರ ಇನ್ನೂ ಹೆಜ್ಜೆ ಮುಂದೆ ಹೋಗಿ ಕಾರ್ಮಿಕರಿಗೆ ನೀಡುವ ಪಿಂಚಣಿಯನ್ನು ಕಾರ್ಮಿಕ ಕೆಲಸ ಬಿಟ್ಟ ಹಿಂದಿನ 12 ತಿಂಗಳಿಗೆ ಲೆಕ್ಕ ಹಾಕುವ ಬದಲಿಗೆ 60 ತಿಂಗಳ ವೇತನವನ್ನು ಸರಾಸರಿಯಂತೆ ಲೆಕ್ಕ ಹಾಕಲು ಅವಕಾಶ ಕಲ್ಪಿಸಿ ಆ ಮೂಲಕ ಪಿಂಚಣಿದಾರರಿಗೆ ಪಿಂಚಣಿ ಇನ್ನೂ ಕಡಿಮೆ ನೀಡಲು ಅವಕಾಶ ನೀಡಿದೆ ಎಂದು ಆಕ್ಷೇಪಿಸಿದರು.

ಮುಖ್ಯ ಅತಿಥಿಯಾಗಿ ಭಾಷಣ ಮಾಡಿದ ಕಾರ್ಮಿಕ ಚಳುವಳಿಯ ಹಿರಿಯ ಮುಂದಾಳು ಕೆ. ಆರ್. ಶ್ರೀಯಾನ್‌ರವರು ಸಿಐಟಿಯು ಕಾರ್ಮಿಕ ವರ್ಗದ ಸಂಘಟನೆಯಾಗಿ ಕಾರ್ಮಿಕ ಪರ ಕಾನೂನುಗಳಿಗೆ ಹೋರಾಟ ಮಾಡಿದೆ. ಕರ್ನಾಟಕದ ಬಡ ಪಿಂಚಣಿದಾರರ ಕಷ್ಟಗಳಿಗೆ ಸ್ಪಂದಿಸುವುದು ಕ್ರಾಂತಿಕಾರಿ ಕಾರ್ಮಿಕ ಸಂಘಟನೆಯ ಕರ್ತವ್ಯವಾಗಿದೆ. ಈ ನಿಟ್ಟಿನಲ್ಲಿ ತೀವ್ರತರವಾದ ಹೋರಾಟ ಅನಿವಾರ್ಯ. ಸ್ವದೇಶಿ ಮಂತ್ರ ಹೇಳುತ್ತ ವಿದೇಶಿಯರಿಗೆ ಮಣೆ ಹಾಕುವ ಮೋದಿ ಸರಕಾರದ ಕಾರ್ಮಿಕ ವಿರೋಧಿ ನೀತಿಯನ್ನು ಬಯಲಿಗೆಳೆಯಬೇಕಾಗಿದೆ ಎಂದರು.

ಸಮಾವೇಶದ ಅಧ್ಯಕ್ಷತೆಯನ್ನು ಸಿಐಟಿಯು ಮುಂದಾಳು ವಸಂತ ಆಚಾರಿಯವರು ವಹಿಸಿದ್ದರು. ಸಭೆಯನ್ನು ಉದ್ದೇಶಿಸಿ ಸಿಐಟಿಯು ಮುಂದಾಲುಗಳಾದ ಜೆ. ಬಾಲಕೃಷ್ಣ ಶೆಟ್ಟಿ, ಸಯ್ಯದ್ ಮುಜೀಬ್‌ರವರು ಮಾತನಾಡಿದರು. ರಾಜ್ಯ ಮುಂದಾಳುಗಳಾದ ಮೈಸೂರಿನ ಜಯರಾಮ್, ಕುಂದಾಪುರದ ಶಂಕರ್, ತುಮಕೂರಿನ ಕೋದಂಡರಾಮ್, ಪಧ್ಮಾವತಿ ಶೆಟ್ಟಿ ಮುಂತಾದವರು ಉಪಸ್ಥಿತರಿದ್ದರು. ಪ್ರಾರಂಭದಲ್ಲಿ ಸಿಐಟಿಯು ನಾಯಕ ಸುನಿಲ್ ಕುಮಾರ್ ಬಜಾಲ್‌ರವರು ಸ್ವಾಗತಿಸಿದರು. ಸಯ್ಯದ್ ಮುಜೀಬ್ ಧನ್ಯವಾದ ನೀಡಿದರು. ●

'ಮುನಿಸಿಪಲ್ ಕಾರ್ಮಿಕರಿಗೆ ಸಮಾನ ವೇತನ ನೀಡಲು ಸರ್ಕಾರ ಬದ್ಧ' ಪೌರಾಡಳಿತ ಸಚಿವರ ಖಮರ್‌ಉಲ್ಲಾ ಇಸ್ಲಾಂ ಭರವಸೆ

ಸೆಪ್ಟೆಂಬರ್ 15, 16 2014 ರಂದು ಮುನಿಸಿಪಲ್ ನೌಕರರು ಬೆಂಗಳೂರಿನಲ್ಲಿ ನಡೆಸಿದ ಅನಿರ್ದಿಷ್ಟ ಧರಣಿ ಹೋರಾಟದ ಬಗೆಗೆ ಈಗಾಗಲೇ ಪತ್ರಿಕೆಯಲ್ಲಿ ಓದಿದ್ದೀರಿ. ಈ ಸಂದರ್ಭದಲ್ಲಿ ಸರ್ಕಾರ ನೀಡಿದ ಆಶ್ವಾಸನೆಯಂತೆ ಕರ್ನಾಟಕ ರಾಜ್ಯ ಮುನಿಸಿಪಲ್ ಕಾರ್ಮಿಕರ ಸಂಘದ ಪದಾಧಿಕಾರಿಗಳು ಹಾಗು ನಗಾರಭಿವೃದ್ಧಿ ಇಲಾಖೆ ಹಾಗು ಪೌರಾಡಳಿತ ನಿರ್ದೇಶನಾಲಯದ ಜಂಟಿ ಸಭೆಯು 22.9.2014 ರಂದು ವಿಕಾಸಸೌಧದಲ್ಲಿ ಪೌರಾಡಳಿತ ಸಚಿವರಾದ ಖಮರ್‌ಉಲ್ಲಾ ಇಸ್ಲಾಂ ರವರ ಅಧ್ಯಕ್ಷತೆಯಲ್ಲಿ ನಡೆಯಿತು.



ಸಂಘದ ಗೌರವಾಧ್ಯಕ್ಷರಾದ ಎಸ್. ಪ್ರಸನ್ನಕುಮಾರ್ ಹಾಲಿ ಗುತ್ತಿಗೆ ಆಧಾರದಲ್ಲಿ ದುಡಿಯುತ್ತಿರುವ ಎಲ್ಲಾ ಮುನಿಸಿಪಲ್ ನೌಕರರನ್ನು (ಪೌರ ಕಾರ್ಮಿಕರು, ವಾಟರ್‌ಮ್ಯಾನ್, ಡ್ರೈವರ್, ಕಂಪ್ಯೂಟರ್ ಆಪರೇಟರ್, ಎಲೆಕ್ಟ್ರಿಷಿಯನ್, ಎಸ್.ಎ.ಎಸ್. ನೌಕರರು, ಕಛೇರಿ ಸಹಾಯಕರು ಮತ್ತಿತರರು) ಸೇವೆಗಳನ್ನು ಖಾಯಂಗೊಳಿಸಬೇಕು. ಖಾಯಂಗೊಳಿಸುವ ತನಕ ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕು, ಗುತ್ತಿಗೆ ಪದ್ಧತಿಯನ್ನು ನಿಷೇದಿಸಬೇಕು ಎಂದು ಬೇಡಿಕೆ ಮಂಡಿಸಿದರು. ಇದಕ್ಕೆ ಪ್ರತಿಕ್ರಿಯಿಸಿ ಮಾತನಾಡಿದ ಪೌರಾಡಳಿತ ಸಚಿವರಾದ ಖಮರ್ ಉಲ್ ಇಸ್ಲಾಂರವರು ಸರ್ಕಾರ ಖಾಯಮಾತಿಗೆ ಸಂಬಂಧ ಇರುವ ಕಾನೂನಾತ್ಮಕ ತೊಡರುಗಳನ್ನು ಪರಿಶೀಲಿಸುತ್ತಿದೆ. ಬಜೆಟ್‌ನಲ್ಲಿ ಘೋಷಿಸಿರುವಂತೆ ಹಂತ ಹಂತವಾಗಿ ಟೆಂಡರ್ ಪದ್ಧತಿಯನ್ನು ಮುಕ್ತಾಯಗೊಳಿಸಲಾಗುವುದು ಹಾಗು ಸಮಾನ ಕೆಲಸಕ್ಕೆ ಸಮಾನ ವೇತನವನ್ನು ಕೊಡಲು ಸರ್ಕಾರ ಬದ್ಧವಾಗಿದೆ ಎಂದು ಭರವಸೆ ನೀಡಿದರು.

ಮುನಿಸಿಪಲ್ ನೌಕರರಿಗೆ ಬೆಳಗಿನ ಉಪಹಾರ ನೀಡಬೇಕು, ಹಾಗು ಸಮಾನ ವೇತನವನ್ನು ಎಲ್ಲಾ ಮುನಿಸಿಪಲ್ ನೌಕರರಿಗೂ ತಾರತಮ್ಯವಿಲ್ಲದೆ ನೀಡಬೇಕು, ಮುಖ್ಯಮಂತ್ರಿಗಳು ಪೌರ ಕಾರ್ಮಿಕರ ರಾಜ್ಯ ಸಮ್ಮೇಳನದಲ್ಲಿ ಘೋಷಣೆ ಮಾಡಿದ ವಿಷಯಗಳ ಜಾರಿಗೆ ಕ್ರಮವಹಿಸಬೇಕು ಹಾಗು ಗುತ್ತಿಗೆ ಪೌರ ಕಾರ್ಮಿಕರ ಪಿ.ಎಫ್.ನಲ್ಲಿ ನಡೆಯುತ್ತಿರುವ ಮೋಸವನ್ನು ನಿಲ್ಲಿಸಿ ಮೂಲ ಮಾಲೀಕರಿಗೆ ಉಪಕೋಡ್ ನಂಬರ್‌ನ ಅಡಿ ಪಿ.ಎಫ್.ಅನ್ನು ನಿರ್ವಹಣೆ ಮಾಡಬೇಕೆಂಬ ಬಗ್ಗೆ ಚರ್ಚೆ ನಡೆಯಿತು.

ನಗರಾಭಿವೃದ್ಧಿ ಇಲಾಖೆಯ ಕಾರ್ಯದರ್ಶಿ ಅನಿಲ್ ಕುಮಾರ್, ಕಾರ್ಯದರ್ಶಿ ಅಭಿವೃದ್ಧಿ ವಿಭಾಗ, ಜಗದೀಶ್, ಪೌರಾಡಳಿತ ನಿರ್ದೇಶಕರಾದ ಡಾ॥ಮಂಜುಳ, ಜಂಟಿ ನಿರ್ದೇಶಕರಾದ ಪ್ರಕಾಶ್ ಸರ್ಕಾರದ ಪರವಾಗಿ ಸಂಘದ ಪರವಾಗಿ ಅ ಧ್ಯಕ್ಷರಾದ ಹರೀಶ್ ನಾಯಕ್, ಪ್ರಧಾನ ಕಾರ್ಯದರ್ಶಿ ಸೈಯದ್ ಮುಜೀಬ್, ಖಜಾಂಚಿ ಸಿ.ವೆಂಕಟೇಶ್, ಹಾಸನದ ಪ್ರಕಾಶ್, ವೆಂಕಟರಮಣ, ಬೆಳಗಾಂನ ಶಾನೂರು ಗೂಡ್ಲಾರ್, ರವಿ, ಬಸವರಾಜು, ಮಯೂರ್ ಸಿಂಗ್, ಬಿಜಾಪುರದ ಲಕ್ಷ್ಮಣ್ ಹಂದ್ರಾಳ್, ಚಳ್ಳಕೆರೆಯ ಡಿ.ಬಸವರಾಜು, ಶಿವಮೊಗ್ಗದ ದಾನಮ್, ಉತ್ತರ ಕನ್ನಡ ಜಿಲ್ಲೆಯ ಡಿ.ಸ್ಯಾಮ್‌ಸನ್, ಬಾಗಲಕೋಟೆಯ ಪಕೀರಪ್ಪ ತಿಮ್ಮಣ್ಣ ಬಂಜೆತರಿ, ಮಾರುತಿ ಬೈಯಪ್ಪ, ಬೀದರ್‌ನ ಪೇಮ್‌ದಾಸ್ ಇವರು ಭಾಗವಹಿಸಿದ್ದರು.

'ಜೀವನೋಪಾಯಕ್ಕಾಗಿ ಸರಕಾರಿ ಜಮೀನಿನಲ್ಲಿ ಕೃಷಿ ಅಭಿವೃದ್ಧಿ ಪಡಿಸಿರುವ ರೈತರ ಸ್ವಾಧೀನತೆ ಸಕ್ರಮಗೊಳಿಸಿ'

ಕುಂದಾಪುರ : ಹೇರೂರು ಸಮಾವೇಶದಲ್ಲಿ ಆಗ್ರಹ



ಜೀವನೋಪಾಯಕ್ಕಾಗಿ ಗ್ರಾಮದ ಸರಕಾರಿ ಜಮೀನಿನಲ್ಲಿ ಕೃಷಿ ಅಭಿವೃದ್ಧಿ ಪಡಿಸಿಕೊಂಡು, ಸ್ಥಳ ಸ್ವಾಧೀನತೆ ಹೊಂದಿರುವ, ಅಕ್ರಮ ಸಕ್ರಮೀಕರಣ ಸಮಿತಿಗೆ ನಮೂನೆ 50 ಹಾಗೂ 53ರಲ್ಲಿ ಅರ್ಜಿ ಸಲ್ಲಿಸಿರುವ ಬಡ ರೈತ ಅರ್ಜಿದಾರರ ಬೃಹತ್ ಸಮಾವೇಶವು ಕರ್ನಾಟಕ ಪ್ರಾಂತ ರೈತ ಸಂಘ, ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ ಕುಂದಾಪುರ ತಾಲೂಕು ಸಮಿತಿಗಳ ನೇತೃತ್ವದಲ್ಲಿ ಹೇರೂರು ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ 25 ಅಕ್ಟೋಬರ್ 2014ರಂದು ಹೇರೂರು ಗ್ರಾಮದ ಸಾಕ್ಷರತಾ ಮುಂದುವರಿಕಾ ಕಲಿಕಾ ಕೇಂದ್ರದಲ್ಲಿ ಯಶಸ್ವಿಯಾಗಿ ಜರುಗಿತು.

ಅಕ್ರಮ ಸಕ್ರಮ ಅರ್ಜಿದಾರರ ಬೃಹತ್ ಸಮಾವೇಶವನ್ನು ಉದ್ಘಾಟಿಸಿ ಮಾತನಾಡುತ್ತಾ ರೈತರ ಹಾಗೂ ಕೂಲಿಕಾರರ ಹಾಗೂ ಕಾರ್ಮಿಕ ಹಾಗೂ ದಲಿತ, ಆದಿವಾಸಿ, ಮಹಿಳಾ ಮತ್ತು ಯುವಜನ ಸಂಘಗಳು ಜಂಟಿ–ಯಾಗಿ, ಎಲ್ಲಾ ನಿವೇಶನರಹಿತ ಬಡವರಿಗೆ ನಿವೇಶನಕ್ಕಾಗಿ, ಸರಕಾರಿ ಹಾಗೂ ಈಗ ಅರಣ್ಯವೆನ್ನಲಾದ ಜಮೀನಿನಲ್ಲಿ ಹಾಕಿಕೊಂಡ ಗುಡಿಸಲು ಮತ್ತು ಮನೆಗಳ ಹಕ್ಕುಪತ್ರಕ್ಕಾಗಿ ಹಾಗೂ ಸದ್ರಿ ಜಮೀನಿನಲ್ಲಿ ಸಾಗುವಳಿ ನಿರತ ಬಡ ರೈತರ ಹಕ್ಕುಪತ್ರಕ್ಕಾಗಿ, ಭೂಕಂದಾಯ ಹಾಗೂ ಅರಣ್ಯ ಕಾಯ್ದೆಗೆ ಸೂಕ್ತ ತಿದ್ದುಪಡಿ ತರಲು ಮತ್ತು ಉಚ್ಚ ನ್ಯಾಯಾಲಯಕ್ಕೆ ನೀಡಿದ ಮುಚ್ಚಳಿಕೆ ಪತ್ರ ಹಾಗೂ ಒಕ್ಕಲೆಬ್ಬಿಸುವ ಆದೇಶವನ್ನು ಹಿಂಪಡೆಯಲು ಒತ್ತಾಯಿಸಿ, ಗೇಣಿ ಹಾಗೂ ಗುತ್ತಿಗೆ ಬೇಸಾಯದಲ್ಲಿ ತೊಡಗಿದವರ ನೋಂದಣಿಗಾಗಿ, ಮತ್ತು ಬಲವಂತದ ಭೂಸ್ವಾಧೀನ ಹಾಗೂ ಭೂ ಬೆಲೆ ನಿಗದಿ ಮತ್ತು ಉದ್ಯೋಗ ನೀಡುವಲ್ಲಿ ವಂಚನೆಯನ್ನು ವಿರೋಧಿಸಿ ರಾಜ್ಯ ಹಾಗೂ ಕೇಂದ್ರ ಸರಕಾರವನ್ನು ಒತ್ತಾಯಿಸಿ ಬೆಂಗಳೂರು ವಿಧಾನಸೌಧದ ಎದುರು ಅಕ್ಟೋಬರ್ 13ರಿಂದ ಅನಿರ್ದಿಷ್ಟಕಾಲ, ಆಹೋರಾತ್ರಿ ಸಾಮೂಹಿ ಧರಣಿ ಸತ್ಯಾಗ್ರಹವನ್ನು ಹಮ್ಮಿಕೊಳ್ಳಲಾಗಿದೆ. ಈ ನ್ಯಾಯಯುತವಾದ ಹೋರಾಟವನ್ನು ಯಶಸ್ವಿಗೊಳಿಸಬೇಕೆಂದು ಕರೆ ನೀಡಿದರು.



ರೈತ ಸಂಘದ ಮುಖಂಡ ಪ್ರವೀಣ್‌ಚಂದ್ರ ಶೆಟ್ಟಿ ಸಮಾವೇಶದಲ್ಲಿ ಮಾತನಾಡಿ ಹೋರಾಟಕ್ಕೆ ಬೆಂಬಲ ಸೂಚಿಸಿದರು. ರೈತ ಮುಖಂಡರಾದ ಕೆ.ಶಂಕರ್, ಮಹಾಬಲ ವಡೇರಹೋಬಳಿ, ರಾಜೀವ ಪಡುಕೋಣೆ, ನಾಗರತ್ನ ನಾಡ ಉಪಸ್ಥಿತರಿದ್ದರು. ನಿವೃತ್ತ ಅಧ್ಯಾಪಕ ನಾರಾಯಣ ಶೆಟ್ಟಿ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಹೇರೂರು ಗ್ರಾಮ ರೈತ ಸಂಘದ ಕಾರ್ಯಕಾರಿ ಸಮಿತಿಗೆ ಬಿ.ನಾರಾಯಣ ಶೆಟ್ಟಿ ಯಡಕಂಟ(ಅಧ್ಯಕ್ಷ), ನರಸಿಂಹ ಶೆಟ್ಟಿ ರಾಗಿಹಕ್ಲು, ವೆಂಕಟ ಪೂಜಾರಿ ರಾಗಿಹಕ್ಲು, ರಾಜು ಮೇಲ್ಮನೆ, ಆನಂದ ಶೆಟ್ಟಿ 11ನೇ ಉಳ್ಳೂರು, ಸಾಧು ರಾಗಿಹಕ್ಲು, ಚಂದ್ರ ಪೂಜಾರಿ ರಾಗಿಹಕ್ಲು, ಮಂಜು ಯರುಕೋಣೆ, ಪದ್ದು ಅಂಗನವಾಡಿ ಕಾರ್ಯಕರ್ತೆ ರಾಗಿಹಕ್ಲು, ಲಲಿತಾ ಗೌಡ್ತಿ ಕೆಂಜಿ, ಗೋವಿಂದ ಶೆಟ್ಟಿ ಯರುಕೋಣೆ, ಉದಯ ಮುತ್ತ ಗೌಡ ರಾಗಿಹಕ್ಲು, ವಿನೋದ ಯಡಕಂಟ (ಸದಸ್ಯರು) ಇವರನ್ನು ಸರ್ವಾನುಮತದಿಂದ ಆಯ್ಕೆಮಾಡಲಾಯಿತು.

ಕೃಷಿ ಕೂಲಿಕಾರರ ಸಂಘದ ತಾಲೂಕು ಕಾರ್ಯದರ್ಶಿ ವೆಂಕಟೇಶ ಕೋಣಿ ಪ್ರಾಸ್ತಾವಿಕ ಭಾಷಣ ಮಾಡಿ ಕಾರ್ಯಕ್ರಮ ನಿರ್ವಹಣೆ ಮಾಡಿದರು.

ಬೀಜಾಡಿ : ನಿವೇಶನ ರಹಿತರಿಂದ ಭೂಮಿ ಹಕ್ಕಿಗಾಗಿ ಹೋರಾಟ



ಕುಂದಾಪುರ ತಾಲೂಕು ಬೀಜಾಡಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ವಸತಿ ಸಮಸ್ಯೆ ಜನಸಾಮಾನ್ಯರ ಒಂದು ಗಂಭೀರ ಸಮಸ್ಯೆಯಾಗಿದೆ. ಒಂದೇ ಮನೆಯ ಸೂರಿನಡಿಯಲ್ಲಿ 2 –3 ಕುಟುಂಬಗಳು ಒಟ್ಟಿಗೆ ವಾಸವಾಗಿರುವ ಅನಿವಾರ್ಯ ಪರಿಸ್ಥಿತಿ ಇದೆ. ಅತೀ ಚಿಕ್ಕ ಮನೆಗಳಿಗೂ ತಿಂಗಳೊಂದರ ದುಬಾರಿ ಬಾಡಿಗೆ ಕೊಡಬೇಕಾದ ಪರಿಸ್ಥಿತಿ ಇದೆ. ದಿನಬಳಕೆಯ ಆಹಾರ ವಸ್ತುಗಳ ತೀವ್ರ ಬೆಲೆ ಏರಿಕೆಯ ಈ ದಿನಗಳಲ್ಲಿ ಬಡಜನರು ತಮ್ಮ ದುಡಿಮೆಯಿಂದ ಮನೆ ಬಾಡಿಗೆ ಪಾವತಿಸಿ ತಮ್ಮ ಕುಟುಂಬದ ಆಹಾರ, ವೈದ್ಯಕೀಯ, ಶಿಕ್ಷಣ ಇತ್ಯಾದಿ ವೆಚ್ಚ ಭರಿಸುವುದು ದುಸ್ತರವಾಗಿದೆ ಎಂದು ಕೃಷಿ ಕೂಲಿಕಾರರ ಸಂಘದ ತಾಲೂಕು ಅಧ್ಯಕ್ಷ ರಾಜೀವ ಪಡುಕೋಣೆ ಹೇಳಿದರು.

ಬೀಜಾಡಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಮನೆ ನಿವೇಶನ ರಹಿತರ ಹೋರಾಟ ಸಮಿತಿ, ಹಾಗೂ ಕರ್ನಾಟಕ ಪ್ರಾಂತ ಕೃಷಿಕೂಲಿಗಾರರ ಸಂಘ ಕುಂದಾಪುರ ತಾಲೂಕು ಸಮಿತಿ ನೇತೃತ್ವದಲ್ಲಿ ಮನೆ ನಿವೇಶನ ರಹಿತರ ಬೃಹತ್ ಸಮಾವೇಶ ಉದ್ಘಾಟಿಸಿ ಅವರು ಮಾತನಾಡಿದರು. ಈ ಹಿನ್ನಲೆಯಲ್ಲಿ ಬೀಜಾಡಿ ಗ್ರಾಮ ಪಂಚಾಯತ್ ಕಛೇರಿ ಎದುರು ಮನೆ, ನಿವೇಶನ ರಹಿತರ ಅರ್ಜಿಗಳನ್ನು ಸಾಮೂಹಿಕವಾಗಿ ಕಛೇರಿಗೆ ಸಲ್ಲಿಸುವ ಸಂದರ್ಭದಲ್ಲಿ ಗ್ರಾಮ ಪಂಚಾಯತ್ ಅಧ್ಯಕ್ಷೆ ವಿಶಾಲಕ್ಷಿ ಶೆಟ್ಟಿ, ಪಂಚಾಯತ್ ಅಧಿಕಾರಿಗಳಾದ ದಿನಕರ ಬೆಂಗ್ರೆ, ನಾರಾಯಣ ಬೀಜಾಡಿ ಇವರಿಗೆ 237 ಅರ್ಜಿಗಳನ್ನು ಹಸ್ತಾಂತರಿಸಲಾಯಿತು.

ಕಾರ್ಯಕ್ರಮದಲ್ಲಿ ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘದ ತಾಲೂಕು ಕಾರ್ಯದರ್ಶಿ ವೆಂಕಟೇಶಕೋಣಿ, ಮುಖಂಡರಾದ ಕರಿಯ ದೇವಾಡಿಗ, ಕೆ.ಶಂಕರ, ಯು.ದಾಸಭಂಡಾರಿ, ಸತೀಶ ಕುಮಾರ ತೆಕ್ಕಟ್ಟೆ ಉಪಸ್ಥಿತರಿದ್ದರು. ಬೀಜಾಡಿ ಗ್ರಾಮಪಂಚಾಯತ್ ವ್ಯಾಪ್ತಿಯ ಕೃಷಿ ಕೂಲಿಕಾರರ ಸಂಘದ ಕಾರ್ಯಕಾರಿ ಸಮಿತಿಗೆ ಗಣೇಶ ಜೋಗಿ (ಅಧ್ಯಕ್ಷ), ಶಿವರಾಮ (ಕಾರ್ಯದರ್ಶಿ), ಗಣೇಶ, ಸುರೇಶ್, ಗೋಪಾಲ ಪೂಜಾರಿ, ಶಂಕರ ಪೂಜಾರಿ, ಶಾಲಿನಿಗೋಪಾಡಿ, ಸುಜಾತ, ಮಾಲಿನಿ, ನಾರಾಯಣ ಸದಸ್ಯರನ್ನೊಳಗೊಂಡಂತೆ 10 ಮಂದಿಯನ್ನು ಸರ್ವಾನುಮತದಿಂದ ಆಯ್ಕೆಮಾಡಲಾಯಿತು.

– ವೆಂಕಟೇಶ ಕೋಣಿ



'ಒಕ್ಕಲೆಬ್ಬಿಸುವುದನ್ನು ನಿಲ್ಲಿಸಿ' - ಕೆ. ಶಂಕರ್ ಒತ್ತಾಯ

ರಾಜ್ಯ ಸರಕಾರ, ಉಚ್ಚ ನ್ಯಾಯಾಲಯದ ಆದೇಶದಂತೆ, ಎ.ಟಿ. ರಾಮಸ್ವಾಮಿ ನೇತೃತ್ವದ ಸದನ ಸಮಿತಿ ಹಾಗೂ ಡಾ.ಬಾಲಸುಬ್ರಮ್ಮಣ್ಯಂ ನೇತೃತ್ವದ ಕಾರ್ಯ ಪಡೆಯ ವರದಿಯನ್ನು ಜಾರಿಗೊಳಿಸಲು, ಜಿಲ್ಲಾಧಿಕಾರಿ ಮತ್ತು ತಹಸಿಲ್ದಾರರುಗಳಿಗೆ 'ಒತ್ತುವರಿದಾರರನ್ನು ಒಕ್ಕಲೆಬ್ಬಿಸಬೇಕೆಂದು ಆದೇಶಿಸಿದ್ದು, ಈ ಸಂಬಂಧ ಜಮೀನು ತೆರವಿಗೆ ನೋಟಿಸು ಕಳುಹಿಸಲಾಗಿದೆ ಎಂದು ತಿಳಿದು ಬಂದಿದೆ.

ಸಾಮಾನ್ಯ ಮತ್ತು ಬಡ ರೈತರು ಕೃಷಿ ಮಾಡಿ ಅಭಿವೃದ್ಧಿಪಡಿಸಿರುವ ಜಮೀನನ್ನು ಯಾವುದೇ ಕಾರಣಕ್ಕೂ ಅವರಿಂದ ಕಸಿದುಕೊಳ್ಳಬಾರದು. ನೂರಾರು ಎಕರೆ ಒತ್ತುವರಿ ಮಾಡಿರುವ ಶ್ರೀಮಂತರು ಮತ್ತು ಪ್ರಭಾವಿಗಳ ಜಮೀನನ್ನು ವಶಪಡಿಸಿಕೊಳ್ಳಬೇಕು. ರಾಜ್ಯ ಸರಕಾರದ ಬಹುರಾಷ್ಟ್ರೀಯ ಸಂಸ್ಥೆಗಳ ಮತ್ತು ಭೂಗಳ್ಳ ಪಟ್ಟಭದ್ರರನ್ನು ಸಂರಕ್ಷಿಸುವ ಭೂಬಳಕೆ ಮತ್ತು ಬೇಸಾಯ ನೀತಿಯೇ ಇದಕ್ಕೆ ಕಾರಣವಾಗಿದ್ದು, ಇದನ್ನು ಸಿಪಿಐ(ಎಂ) ಜಿಲ್ಲಾ ಸಮಿತಿಯು ಖಂಡಿಸಿದೆ. ಸರಕಾರ ಶ್ರೀಮಂತರ ಪರ ನೀತಿಯನ್ನು ಕೈಬಿಡಬೇಕೆಂದು ಸಿಪಿಐ(ಎಂ) ಒತ್ತಾಯಿಸಿದೆ.

ಮನೆ–ನಿವೇಶನ ಹಾಗೂ ಭೂಮಿಯ ಹಕ್ಕಿಗಾಗಿ, ಭೂ ಕಂದಾಯ ಹಾಗೂ ಅರಣ್ಯ ಕಾಯಿದೆಗೆ ತಿದ್ದುಪಡಿ ತರಲು ಒತ್ತಾಯಿಸಿ ಬಡ–ರೈತ, ಕೂಲಿಕಾರರರು ನಡೆಸುವ ಹೋರಾಟಕ್ಕೆ ಸಿಪಿಐ(ಎಂ) ಉಡುಪಿ ಜಿಲ್ಲಾ ಸಮಿತಿ ಕಾರ್ಯದರ್ಶಿ ಕೆ.ಶಂಕರ್ ಬೆಂಬಲ ಘೋಷಿಸಿದ್ದಾರೆ.

ಜನಶಕ್ತಿ
ಕನ್ನಡ ವಾರಪತ್ರಿಕೆ



'ರಾಷ್ಟ್ರಕ್ಕಾಗಿ ಪ್ರಾಣ ತ್ಯಾಗ ಮಾಡಿದ ಮಹಾನ್ ಕ್ರಾಂತಿಕಾರಿ ಭಗತ್‌ಸಿಂಗ್'

– ಹಾವೇರಿಯಲ್ಲಿ ಬಿ.ಎಸ್.ಸೊಪ್ಪಿನ

ಭಗತ್ ಸಿಂಗ್ ಒಬ್ಬ ಕ್ರಾಂತಿಕಾರಿ, ನಿಜವಾದ ರಾಷ್ಟ್ರ ಪ್ರೇಮಿ. ತನ್ನ ರಾಷ್ಟ್ರಕ್ಕಾಗಿ ಮತ್ತು ಸಮಾಜ ಬದಲಾವಣೆಯ ಸಮಾಜವಾದಿ ಸಿದ್ಧಾಂತವನ್ನು ಪ್ರಚುರ ಪಡಿಸುವುದಕ್ಕಾಗಿ ತನ್ನ ಪ್ರಾಣವನ್ನೇ ತ್ಯಾಗ ಮಾಡಿದಂಥ ಕ್ರಾಂತಿಕಾರಿ. ಭಗತ್‌ಸಿಂಗ್ ಮತ್ತು ಆತನ ಸಂಗಾತಿಗಳು ತಮ್ಮ 23 ನೇ ವಯಸ್ಸಿನಲ್ಲಿ ಗಲ್ಲಿಗೇರಲು ತೋರಿದ ಧಿರೋದ್ಧಾತ ಮನೋಭಾವವು ವಿಶ್ವದ ಯಾವುದೇ ದೇಶದ ವಿಮೋಚನಾ ಚಳುವಳಿಯ ಇತಿಹಾಸದಲ್ಲಿಯೂ ಅಪರೂಪದ್ದು ಎಂದು ಪ್ರಗತಿಪರ ಚಿಂತಕರಾದ ಬಿ.ಎಸ್.ಸೊಪ್ಪಿನ ಹೇಳಿದರು

ಹಾವೇರಿ ನಗರದ ಟಿ.ಎಂ.ಎ.ಇ.ಎಸ್. ಕಾಲೇಜಿನಲ್ಲಿ ಭಾರತ ವಿದ್ಯಾರ್ಥಿ ಫೆಡರೆಷನ್ (ಎಸ್‌ಎಫ್‌ಐ) ಹಾವೇರಿ ಜಿಲ್ಲಾ ಸಮಿತಿಯು ಏರ್ಪಡಿಸಿದ್ದ ಭಗತ್‌ಸಿಂಗ್ ಅವರ ಜನ್ಮ ದಿನಾಚರಣೆಯ ಅಂಗವಾಗಿ 'ಸ್ವಾತಂತ್ರ್ಯ ಚಳುವಳಿಯಲ್ಲಿ ವಿದ್ಯಾರ್ಥಿಗಳ ಪಾತ್ರ' ಕುರಿತು ನಡೆದ ವಿಚಾರ ಸಂಕಿರಣದಲ್ಲಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು ಭಗತ್‌ಸಿಂಗ್ ಅವರ ಜೀವನವನ್ನು, ಹೋರಾಟದ ಹಾದಿಯನ್ನು ನೆನಪಿಸಿದರು. ಭಗತ್‌ಸಿಂಗ್ ಅವರ ಮನೆಯ ವಾತಾವರಣ, ಅವರ ತಂದೆ, ಚಿಕ್ಕಪ್ಪ, ಅಜ್ಜ ಎಲ್ಲರೂ ರಾಷ್ಟ್ರೀಯ ಚಳುವಳಿಯಲ್ಲಿ ಭಾಗವಹಿಸಿ, ಸೆರೆವಾಸ ಅನುಭವಿಸಿದ್ದರು. ಇದು ಅವರಿಗೆ ಕ್ರಾಂತಿಕಾರಿ ಚಳುವಳಿಗೆ ಮತ್ತಷ್ಟು ಪ್ರೇರೇಪಣೆ ನೀಡಿದಂತಾಗಿ–ತ್ತು. ಸ್ವಾತಂತ್ರ್ಯ ಚಳುವಳಿಯಲ್ಲಿ ಸಾವಿರಾರು ವಿದ್ಯಾರ್ಥಿಗಳು ಬೀದಿಗಿಳಿದು ಹೋರಾಡಿದ್ದಾರೆ. ಕಾರ್ಮಿಕ ವರ್ಗ, ರೈತಾಪಿ ವರ್ಗ, ಮಹಿಳೆಯರು, ಯುವಜನತೆ ಹೋರಾಟ ಮಾಡಿದ್ದಾರೆ. ಪ್ರಾಣ ಬಲಿದಾನ ಮಾಡಿದ್ದಾರೆ. ಇವುಗಳನ್ನು ಇಂದು ನಾವೆಲ್ಲಾ ನೆನೆಯಬೇಕಿದೆ. ರೌಲೆಟ್ ಕಾಯಿದೆಯ ವಿರುದ್ಧ ನಡೆದ ಹೋರಾಟದಲ್ಲಿ ಜಲಿಯನ್ ವಾಲಾಬಾಗ್‌ನಲ್ಲಿ ಸೇರಿದ್ದ ಸಾವಿರಾರು ಜನರ ಮೇಲೆ ಡಯರ್ ಎಂಬ ಬ್ರಿಟಿಷ್ ಅಧಿಕಾರಿ ಗುಂಡು ಹಾರಿಸಲು ಆದೇಶ ಮಾಡುತ್ತಾನೆ. ಇದ–ರಿಂದ ಸಾವಿರಾರು ಸಂಖ್ಯೆಯ ಜನತೆ ಬ್ರಿಟಿಷರ ಗುಂಡಿಗೆ ಪ್ರಾಣ ನೀಡುತ್ತಾರೆ. ನಂತರ ಆ ಸ್ಥಳಕ್ಕೆ ಬಂದ ಬಾಲಕ ಭಗತ್‌ಸಿಂಗ್ ರಕ್ತಸಿಕ್ತವಾಗಿದ್ದ ಮಣ್ಣನ್ನು ಊಟದ ಡಬ್ಬಿಯಲ್ಲಿ ತುಂಬಿಕೊಂಡು ಹೋಗಿ ನಿತ್ಯವೂ ಪೂಜಿಸುತ್ತಾನೆ. ಇದು ಭಗತ್‌ಸಿಂಗ್ ಮೇಲೆ ತೀವ್ರ ತೆರನಾದ ಪರಿಣಾಮ ಬೀರುತ್ತದೆ. ಕ್ರಾಂತಿಕಾರಿ ಗದ್ದರ್ ಪಾರ್ಟಿಯ 7 ಜನ ಸದಸ್ಯರನ್ನು ಬ್ರಿಟಿಷರು ಗಲ್ಲಿಗೇರಿಸುತ್ತಾರೆ. ನಂತರ ಚೌರಿಚೌರಾದಲ್ಲಿ ಬ್ರಿಟಿಷರು ನೂರಾರು ಜನರ ಮೇಲೆ ಲಾಠಿಚಾರ್ಜ್ ಮಾಡಿ ಕೊಲ್ಲುತ್ತಾರೆ. ಇಂಥ ಘಟನೆಗಳು ಭಗತ್‌ಸಿಂಗ್‌ರ ಮೇಲೆ ತೀವ್ರ ತೆರನಾದ ಪರಿಣಾಮ ಬೀರುತ್ತವೆ. ಕೆಲವೇ ಕೆಲವು ವರ್ಷಗಳಲ್ಲಿ ಭಗತ್‌ಸಿಂಗ್ ಕ್ರಾಂತಿಯ ಅಲೆಯನ್ನು ಎಬ್ಬಿಸಿ ಬ್ರಿಟಿಷರಿಗೆ ಸಿಂಹ ಸ್ವಪ್ನವಾಗಿ ಕಾಡುತ್ತಾರೆ ಎಂದರು. ಅವರು ಸಮಾಜವಾದಿಯಾಗಿ ಸಮಾನ ಭಾರತವನ್ನು ಕಟ್ಟುವುದಕ್ಕಾಗಿ 'ಹಿಂದುಸ್ತಾನ್ ಸೋಷಿಯಲಿಸ್ಟ್ ರಿಪಬ್ಲಿಕ್ ಅಶೋಷಿಯೇಶನ್'ನ್ನು ಪ್ರಾಂಭಿಸಿದರು ಎಂದರು

ಅಧ್ಯಕ್ಷತೆ ವಹಿಸಿದ್ದ ಎಸ್‌ಎಫ್‌ಐ ಜಿಲ್ಲಾಧ್ಯಕ್ಷರಾದ ರೇಣುಕಾ ಕಹಾರ ಮಾತನಾಡಿ, ಭಗತ್‌ಸಿಂಗ್ ಕನಸನ್ನು ನಾವಿಂದು ಸಾಕಾರಗೊಳಿಸಬೇಕಿದೆ. ಅಸಮಾನತೆ ಕಿತ್ತೊಗೆಯಬೇಕು. ದುಡಿಯುವ ವರ್ಗಕ್ಕೆ ನ್ಯಾಯ ಸಿಗುತ್ತಿಲ್ಲ. ರೈತ ವರ್ಗ ನರಳುತ್ತಿದೆ ಎಂದು ಭಗತ್‌ಸಿಂಗ್ ಅಂದೇ ಹೇಳಿದ್ದರು. 23ನೇ ವಯಸ್ಸಿನಲ್ಲೇ ಭಗತ್‌ಸಿಂಗ್ ನೇಣುಗಂಬವನ್ನೇರಿದರು. ಭಗತ್‌ಸಿಂಗ್‌ರವರ ದೃಷ್ಟಿಯಲ್ಲಿ 'ಸ್ವಾತಂತ್ರ್ಯ' ಎಂದರೆ ಕೇವಲ ಯಜಮಾನರ ಬದಲಾವಣೆ ಮಾತ್ರ ಅಲ್ಲ. ಪುರಾತನ ಶೋಷಣಾತ್ಮಕ ವ್ಯವಸ್ಥೆ ನಾಶವಾಗದ ಹೊರತು ಸಂಪೂರ್ಣ ಸ್ವಾತಂತ್ರ್ಯ ಸಾಧ್ಯವಿಲ್ಲ. ಎಲ್ಲರಿಗೂ ಶಿಕ್ಷಣ, ಉದ್ಯೋಗ, ಉತ್ತಮ ಆರೋಗ್ಯ ಸಿಗಬೇಕು. ಆರ್ಥಿಕ ಪರಿಸ್ಥಿತಿ ಬದಲಾಗಬೇಕು ಎಂದು ಅವರು ಬಯಸಿದ್ದರು ಎಂದರು.



ತುಮಕೂರು

ಎಸ್‌ಎಫ್‌ಐ ಜಿಲ್ಲಾ ಕಾರ್ಯದರ್ಶಿ ಸುಭಾಸ್ ಎಂ. ಪ್ರಾಸ್ತಾವಿಕವಾಗಿ ಮಾತನಾಡಿದರು. ಟಿಎಮ್‌ಎಇಎಸ್‌ನ ಪ್ರಾಂಶುಪಾಲರಾದ ಸಿ.ಜಿ.ಪೂಜಾರ ಮಾತನಾಡಿದರು. ಎಸ್.ಕೆ ಪ್ರಸಾದಿಮಠ ವೇದಿಕೆಯಲ್ಲಿದ್ದರು. ಸುನೀಲ ಅಣ್ಣಿ ನಿರೂಪಿಸಿದರು. ಸಂಕಲ್ಪ ಸ್ವಾಗತಿಸಿದರು.

'ಸಿನಿಮಾಗಳ ಹಾವಳಿ– ಅಮರ ಕ್ರಾಂತಿಕಾರಿ ನಾಯಕರುಗಳು ಯುವಜನರ ಮನಸ್ಸಿನಿಂದ ದೂರ'

–ತುಮಕೂರಿನಲ್ಲಿ ಕೆ. ಮಹಾಂತೇಶ್

ಬ್ರಿಟೀಷ್ ಸಾಮ್ರಾಜ್ಯಶಾಹಿಗಳಿಂದ ಶೋಷಣೆಗೆ ಒಳಗಾಗಿದ್ದ ದೇಶದ ಜನರನ್ನು ವಿಮೋಚನೆಗೊಳಿಸಿ ದುಡಿಯುವ ವರ್ಗದ ಕೈಗೆ ಅಧಿಕಾರ ಸಿಗಬೇಕು ಎಂದು ಹೋರಾಡಿದ ಭಗತ್‌ಸಿಂಗ್‌ರವರ ಜನ್ಮದಿನಾಚರಣೆ ಕಾರ್ಯಕ್ರಮಗಳು ಜನರ ಮಧ್ಯೆ ನಡೆಯಬೇಕಾಗಿದೆ ಎಂದು 'ಸಿಐಟಿಯು ಸಂದೇಶ' ಮಾಸ ಪತ್ರಿಕೆಯ ಕಾರ್ಯನಿರತ ಸಂಪಾದಕ ಕೆ. ಮಹಂತೇಶ್ ಅಭಿಪ್ರಾಯಪಟ್ಟರು.

ಅವರು ತುಮಕೂರು ನಗರದಲ್ಲಿ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿವೈಎಫ್‌ಐ) ಸಂಘಟನೆ ಹಮ್ಮಿಕೊಂಡಿದ್ದ ಭಗತ್‌ಸಿಂಗ್‌ರವರ ಜನ್ಮದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು. ಭಗತ್‌ಸಿಂಗ್ ಕೇವಲ ಒಂದು ಸಮುದಾಯದ ಪರವಾಗಿ ಹೋರಾಡಿದವರಲ್ಲ. ಅವರು ಎಲ್ಲಾ ವಿಭಾಗಗಳಲ್ಲೂ ಶೋಷಣೆಗೆ ಒಳಗಾದ ಜನರ ಸ್ವಾತಂತ್ರ್ಯಕ್ಕಾಗಿ ಹೋರಾಡಿದವರು. ಜಾಗತೀಕರಣದ ಪ್ರಭಾವದಿಂದ ಮೂಡಿ ಬರುತ್ತಿರುವ ಸಿನಿಮಾಗಳ ಹಾವಳಿಯಿಂದ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ನಾಯಕರುಗಳು ಜನರ ಮನಸ್ಸಿನಿಂದ ದೂರವಾಗುತ್ತಿದ್ದು ಡಿವೈಎಫ್‌ಐ ಹೆಚ್ಚು ಕೆಲಸ ಮಾಡಬೇಕಾಗಿದೆ ಎಂದರು. ಇಂದು ನಮ್ಮನಾಳುತ್ತಿರುವ ಸರ್ಕಾರಗಳು ಅನುಸರಿಸುತ್ತಿರುವ ನೀತಿಗಳಿಂದ ಅನ್ನ ಬೆಳೆಯುವ ರೈತನ ಮನೆಯಲ್ಲಿ ಇಂದು ತಿನ್ನಲು ಅನ್ನವಿಲ್ಲದಂತ ಸ್ಥಿತಿ ನಿರ್ಮಾಣವಾಗುತ್ತಿದೆ. ಸರ್ವರಿಗೂ ಶಿಕ್ಷಣ ಸರ್ವರಿಗೂ ಉದ್ಯೋಗ ಎಂಬುದು ಕನಸಿನ ಮಾತಾಗಿದೆ ಎಂದರು. ಯುವಜನರು ಸಿನಿಮಾಗಳ ಭ್ರಾಮಕ ಮೌಲ್ಯಗಳಿಗೆ ಜೋತು ಬಿದ್ದಿದ್ದಾರೆ. ಯುವಜನರು ಅವರನ್ನೇ ನಮ್ಮ ನಾಯಕರು ಎಂಬ ಭಾವನೆಗಳನ್ನು ತೊರೆದು ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಭಗತ್‌ಸಿಂಗ್‌ರಂತಹ ಕ್ರಾಂತಿಕಾರಿಗಳ ಇತಿಹಾಸವನ್ನು ಹೆಚ್ಚು ಹೆಚ್ಚು ಓದಬೇಕಾಗಿದೆ ಎಂದರು. ಭಗತ್‌ಸಿಂಗ್‌ರವರ ಜನ್ಮದಿನ ಹುತಾತ್ಮ ದಿನಾಚರಣೆಗಳಿಗಿಂತ ಅವರ ಆದರ್ಶಗಳನ್ನು ಮೈಗೂಡಿಸಿಕೊಂಡು ನಡೆಯಬೇಕಾದ ಅವಶ್ಯಕತೆ ಇದೆ. ಇಂದು ಮೂಡಿ ಬರುತ್ತಿರುವ ಸಿನಿಮಾಗಳಿಂದ ಯುವಜನತೆ ತಮ್ಮ ಕನಸುಗಳನ್ನು ಮರೆತಿದ್ದು ಆದರ್ಶಗಳು ಇಲ್ಲದಂತಾಗಿದೆ ಎಂದರು.

ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ಅಭ್ಯರ್ಥಿಗಳಿಗೆ ಬಹುಮಾನ ವಿತರಿಸಿ ಜಿ. ಇಂದ್ರಕುಮಾರ್ ಮಾತನಾಡಿ ಅಸ್ಪೃಶ್ಯತೆ ನಿವಾರಣೆಗಾಗಿ ಜಿಲ್ಲೆಯಲ್ಲಿಯೂ ಸಹ ಹೋರಾಟಗಳು ನಡೆದಿದ್ದು ಯುವಜನರ ಇತಿಹಾಸವನ್ನು ಹೆಚ್ಚು ಅಧ್ಯಯನ ನಡೆಸಬೇಕು ಎಂದರು. ಟಿ.ಕೆ. ಗೋವಿಂದರಾಜು ರೈತರನ್ನು ಸಂಘಟಿಸುವ ಮೂಲಕ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಚಳುವಳಿ ಹೋರಾಟವನ್ನು ನಡೆಸಿದ್ದಾರೆ. ಗ್ರಾಮೀಣ ಕ್ರೀಡೆಗಳನ್ನು ನಡೆಸುವ ಜೊತೆಗೆ ಯುವಜನರಲ್ಲಿ ಭಗತ್‌ಸಿಂಗ್‌ರವರ ಇತಿಹಾಸವನ್ನು ತಿಳಿಸಬೇಕಾಗಿದೆ ಎಂದರು.

ಸಾಹಿತಿ ಡಾ॥ ಓ.ನಾಗರಾಜು ಮಾತನಾಡಿ ಪ್ರಜಾಪ್ರಭುತ್ವದ ಮೌಲ್ಯಗಳ ಉಳಿವಿಗಾಗಿ ಹೋರಾಟಗಳನ್ನು ನಡೆಸಬೇಕಾಗಿದೆ. ಪ್ರಜಾಪ್ರಭುತ್ವವು ನಮಗೆ ಎಲ್ಲವನ್ನು ನೀಡಿದೆ. ಆದರೆ ಅದನ್ನು ನಮ್ಮನ್ನಾಳುವ ಪ್ರಭುಗಳು ಕೆಲವೇ ಮಂದಿಗೆ ಮಾತ್ರ ಸಿಗುವಂತೆ ಮಾಡುತ್ತಿದ್ದಾರೆ. ಅದು ಇನ್ನೂ ಬಲವಾಗತೊಡಗಿದೆ. ಪ್ರಜಾಪ್ರಭುತ್ವದ ಬುನಾದಿಯಲ್ಲಿ ಅಧಿಕಾರ ಎಲ್ಲರಿಗೂ ಸೀಗಬೇಕಾಗಿದೆ. ಆದರೆ ಹಾಗೇ ಆಗುತ್ತಿಲ್ಲ ಎಂದ ಅವರು ನಮ್ಮ ರಾಜ್ಯವು ಸೇರಿದಂತೆ ದೇಶದ ಸಂಪತ್ತು ಲೂಟಿಯಾಗುತ್ತಿದೆ. ಅದರ ರಕ್ಷಣೆಯನ್ನು ಮಾಡಬೇಕಾದರೆ ಪ್ರಜಾಪ್ರಭುತ್ವ ಮೌಲ್ಯಗಳ ರಕ್ಷಣೆಗಾಗಿ ಪ್ರಬಲ ಹೋರಾಟ ಅಗತ್ಯವಾಗಿದೆ ಎಂದರು. ಅವರು ಭಗತ್‌ಸಿಂಗ್‌ರವರು ಕೂಡ ಹೋರಾಟದ ಹಿನ್ನೆಲೆಯಿಂದ ಬಂದವರು. ಅವರು ಕೇವಲ ಮನೆಯ ಆಸ್ತಿಯಾಗದೆ ದೇಶದ ಆಸ್ತಿಯಾಗಿ ಬೆಳೆದವರು ಎಂದರು. ಸಮಾರಂಭದಲ್ಲಿ ಡಾ॥ ಪ್ರೀತಂ, ಡಿವೈಎಫ್‌ಐ ಜಿಲ್ಲಾ ಉಪಾಧ್ಯಕ್ಷ ಎಂ.ಜಿ. ಮಂಜುನಾಥ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ, ಎಂ.ಆರ್. ನಾಗರಾಜು ಮಾತನಾಡಿದರು. ಸಮಾರಂಭದ ಅಧ್ಯಕ್ಷತೆಯನ್ನು ಡಿವೈಎಫ್‌ಐ ಜಿಲ್ಲಾಧ್ಯಕ್ಷ ಎಸ್. ರಾಘವೇಂದ್ರ ವಹಿಸಿದ್ದರು.



ಬೆಂಗಳೂರು

ಕಾರ್ಯಕ್ರಮದಲ್ಲಿ ಡಿವೈಎಫ್‌ಐನ ರಘುಪ್ರಸಾದ್, ಅಜಯ್, ಎಸ್‌ಎಫ್‌ಐ ಶಿವಣ್ಣ, ಜಗದೀಶ್ ಉಪಸ್ಥಿತರಿದ್ದರು. ಸೌಮ್ಯ ಸ್ವಾಗತಿಸಿ, ಸಂತೋಷ್ ವಂದಿಸಿದರು. ನವೀನ್‌ಕುಮಾರ್ ನಿರೂಪಿಸಿದರು. ದಿವ್ಯ ಜೋತಿ ಕ್ರಾಂತಿಗೀತೆ ಹಾಡಿದರು.

ವರದಿ : ಎಸ್. ರಾಘವೇಂದ್ರ

ಪುಟ 15 ಕ್ಕೆ

ದಿಲ್ಲಿಯಿಂದ ನ್ಯೂಯಾರ್ಕ್ ವರೆಗೂ 'ಮೇಕ್ ಇನ್ ಇಂಡಿಯಾ'ದ ಭರ್ಜರಿ ಸದ್ದು

'ಒಳ್ಳೆಯ ದಿನ'ಗಳ ಡೈರಿ

ವೇದರಾಜ ಎನ್.ಕೆ.



ಸೆಪ್ಟಂಬರ್ 25ರಂದು ಪ್ರಧಾನ ಮಂತ್ರಿಗಳ ಕೆಂಪುಕೋಟೆ ಭಾಷಣದ ಇನ್ನೊಂದು ಘೋಷಣೆಯನ್ನು ವಿಧ್ಯುಕ್ತವಾಗಿ ಪ್ರಾರಂಭಿಸಲಾಗಿದೆ. ದೇಶದ ಕಾರ್ಪೊರೇಟ್ ಮಹಾಕುಳಗಳ ಸಮ್ಮುಖ ಪ್ರಧಾನ ಮಂತ್ರಿಗಳು 'ಮೇಕ್ ಇನ್ ಇಂಡಿಯಾ' ಪ್ರಚಾರಾಂದೋಲನವನ್ನು ಉದ್ಘಾಟಿಸಿದ್ದಾರೆ. ಇದು ಉದ್ಯೋಗಾವಕಾಶಗಳನ್ನು ಒದಗಿಸಿ, ಆದಾಯ ಮಟ್ಟಗಳನ್ನು ಏರಿಸುತ್ತದೆ ಎನ್ನಲಾಗುತ್ತಿದೆ. ಎಫ್‌ಡಿಐ ಅಂದರೆ ಫಾರಿನ್ ಡೈರೆಕ್ಟ್ ಇನ್‌ವೆಸ್ಟ್‌ಮೆಂಟ್(ವಿದೇಶಿ ನೇರ ಹೂಡಿಕೆ) ಮಾತ್ರವಲ್ಲ, ಫಸ್ಟ್ ಡೆವಲಪ್ ಇಂಡಿಯಾ(ಮೊದಲು ಭಾರತವನ್ನು ಅಭಿವೃದ್ಧಿ ಪಡಿಸಿ) ಎಂದೂ ಅರ್ಥ ಎಂದು ಅವರು ವ್ಯಾಖ್ಯಾನ ಮಾಡಿದ್ದಾರೆ.

ನವ-ಉದಾರವಾದಿ ವ್ಯವಸ್ಥೆಯ ಅಡಿಯಲ್ಲಿ ತಮ್ಮನ್ನು ಮೊದಲು ಅಭಿವೃದ್ಧಿಪಡಿಸಿಕೊಂಡು ಈಗ ನೂರನ್ನು ತಲುಪಿರುವ ದೇಶದ ಶತಕೋಟ್ಯಾಧಿಪತಿಗಳಲ್ಲಿ ಮೊದಲಿಗರಾದ, ಈಗಲೂ ದೇಶದ ಅನಿಲ ಸಂಪನ್ಮೂಲಗಳ ಶೋಧನೆಗಾಗಿ ದುಪ್ಪಟ್ಟು ಅಂತರ್‍ರಾಷ್ಟ್ರೀಯ ಬೆಲೆಗಳನ್ನು ಕೇಳುತ್ತ, ಅದಕ್ಕಾಗಿ ಕರಾರು ಮಾಡಿಕೊಂಡಂತೆ ಉತ್ಪಾದನೆ ಮಾಡದೆ ದೇಶಕ್ಕೆ ಅಪಾರ ನಷ್ಟ ಮಾಡುತ್ತಿದೆ ಎಂಬ ಆಪಾದನೆಗೆ ಒಳಗಾಗಿ ದೇಶದ ಮಹಾಲೆಕ್ಕ ಪರಿಶೋಧಕರಿಗೇ ಸವಾಲು ಹಾಕಿರುವ ಕಂಪನಿಯ ಮುಖ್ಯಸ್ಥರು ಸಮಾರಂಭದಲ್ಲಿ ಹಾಜರಿದ್ದುದಷ್ಟೇ ಅಲ್ಲ, ಸ್ವತಃ ಮಾತನಾಡಿ "ನಮ್ಮ ಪ್ರಿಯ ಪ್ರಧಾನಿಗಳು ನೂರು ಕೋಟಿ ಭಾರತೀಯರಿಗೆ ಸ್ವಾತಂತ್ರ್ಯ ದಿನದಂದು ಕೊಟ್ಟ ವಚನದಂತೆ ಆರಂಭಿಸಿರುವ ಈ ಆಂದೋಲನಕ್ಕೆ ನಾವು ಬದ್ಧರಾಗಿದ್ದೇವೆ. ನಮ್ಮ ಪ್ರಧಾನಿಗಳ ಮುಖಂಡತ್ವದ ವೈಶಿಷ್ಟ್ಯವೆಂದರೆ ಅವರು ಕನಸು ಕಾಣುತ್ತಾರೆ, ಅದನ್ನು ಸಾಧಿಸುತ್ತಾರೆ." ಎಂದು ಹೇಳಿ ಚಪ್ಪಾಳೆ ಗಿಟ್ಟಿಸಿಕೊಂಡರು.

ಹಾಗೇ ಚಪ್ಪಾಳೆ ಗಿಟ್ಟಿಸಿಕೊಂಡ ಇನ್ನೊಬ್ಬರೆಂದರೆ ಆದಿತ್ಯ ಬಿರ್ಲಾ ಗುಂಪಿನ ಕುಮಾರಮಂಗಲಂ ಬಿರ್ಲಾ. "ನಾವು ಕೂಡ ದೊಡ್ಡ ಕನಸು ಕಾಣುತ್ತೇವೆ, ಧೈರ್ಯವಾಗಿ ಯೋಚಿಸುತ್ತೇವೆ, ಪ್ರಧಾನಿಗಳ ಕನಸನ್ನು ಸಾಧಿಸಲು ಅದೊಂದೇ ದಾರಿ." ಎಂದ ಇವರ ಹೆಸರು ಕಲ್ಲಿದ್ದಲು ಹಗರಣದಲ್ಲಿ ಕೇಳಬಂದು, ಕೊನೆಗೆ ಸಿಬಿಐ ಹಾಗೇನೂ ಮಾಡಿಲ್ಲ ಎಂದು ಹೇಳಿದರೂ ಅಷ್ಟು ತರಾತುರಿಯಲ್ಲಿ ಹೇಗೆ ಈ ತೀರ್ಮಾನ ಮಾಡಿದಿರಿ ಎಂದು ದೇಶದ ಸರ್ವೋಚ್ಚ ನ್ಯಾಯಾಲಯದ ತೀಕ್ಷ್ಣ ಪ್ರಶ್ನೆಗೆ ಉತ್ತರ ಕೊಡಲು ಚಡಪಡಿಸುತ್ತ ಅಕ್ಟೋಬರ್ 13 ರ ವರೆಗೆ ಅವಕಾಶ ಪಡೆದಿರುವುದು ಇತ್ತೀಚಿನ ಸುದ್ದಿ.

ಮುಕೇಶ್ ಅಂಬಾನಿಯವರು ತಮ್ಮ ಕಂಪನಿಗಳು ಈಗಾಗಲೇ 1.80ಲಕ್ಷ ಕೋಟಿ ರೂ. ಹೂಡಿಕೆ ಮಾಡಿವೆ, ಇದರಿಂದ 1.25 ಲಕ್ಷ ಉದ್ಯೋಗಾವಕಾಶಗಳು ಸೃಷ್ಟಿಯಾಗಲಿವೆ ಎಂದರು.

ಅವರು ಹೀಗೆ ಹೇಳುತ್ತಿರುವಾಗಲೇ 2011ರ ಜನಗಣತಿಯ ಆಧಾರದಲ್ಲಿ ಕಲೆ ಹಾಕಿರುವ ಅಂಕಿ-ಅಂಶಗಳ ಪ್ರಕಾರ ದೇಶದಲ್ಲಿ ಒಟ್ಟು ನಿರುದ್ಯೋಗಿಗಳ ಸಂಖ್ಯೆ 11.3 ಕೋಟಿ ಎಂಬ ಸುದ್ದಿ ಪ್ರಕಟವಾಗಿದೆ. ಈ 1.80 ಲಕ್ಷ ಕೋಟಿ ರೂ. 1.76 ಲಕ್ಷ ಕೋಟಿ ರೂ. ಎಂಬುದೂ ಬಹಳ ಸುಪರಿಚಿತ ಸಂಖ್ಯೆಗಳು ಎಂದೆನಿಸುತ್ತಿದೆಯೇ? ಹೌದು, ನವ-ಉದಾರವಾದದ ಅಡಿಯಲ್ಲಿ ದೇಶದ ಮಹಾ-ಮಹಾ ಕಾರ್ಪೊರೇಟ್ ಕುಳಗಳು ದೇಶದ ಆಸ್ತಿಗಳಾದ 2ಜಿ ತರಂಗಾಂತರ, ಕಲ್ಲಿದ್ದಲು ಮೊದಲಾದ ನೈಸರ್ಗಿಕ ಸಂಪನ್ಮೂಲಗಳ ಖಾಸಗಿ ಲೂಟಿಗಳಲ್ಲಿ ದೇಶದ ಖಜಾನೆಗೆ ಮಾಡಿವೆ ಎಂದು ಸಿಎಜಿ ಮಾಡಿರುವ ಲೆಕ್ಕಾಚಾರದ ಅಂಕೆ-ಸಂಖ್ಯೆಗಳಿವು.

ಅಭಿವೃದ್ಧಿ ತರಬೇಕಾದರೆ ನಮ್ಮ ಜನಸಾಮಾನ್ಯರ ಖರೀದಿ ಸಾಮರ್ಥ್ಯವನ್ನು ಹೆಚ್ಚಿಸುವುದು ಒಂದು ನಿರ್ಣಾಯಕ ಅಂಶ ಎಂಬುದು ನಮ್ಮ ಪ್ರಧಾನ ಮಂತ್ರಿಗಳಿಗೆ ಚೆನ್ನಾಗಿ ತಿಳಿದಿದೆ. ಹಾಗೆಂದು ಅವರು ಈ ಸಮಾರಂಭದಲ್ಲಿ ಸ್ಪಷ್ಟವಾಗಿಯೇ ಒಪ್ಪಿಕೊಂಡರು. ಜನಸಾಮಾನ್ಯರನ್ನು ಎಷ್ಟು ಬೇಗ ಬಡತನದಿಂದ ಹೊರತಂದು ಮಧ್ಯಮ ವರ್ಗಕ್ಕೆ ತರಲಾಗುತ್ತದೋ ಅಷ್ಟರ ಮಟ್ಟಿಗೆ ಜಾಗತಿಕ ವ್ಯಾಪಾರಸ್ಥರಿಗೆ ಹೆಚ್ಚಿನ ಅವಕಾಶಗಳು ದಕ್ಕುತ್ತವೆ ಎಂದು ಅವರು ಹೇಳಿದರು.

ಬಡವರ ಖರೀದಿ ಸಾಮರ್ಥ್ಯ ಹೆಚ್ಚಿಸುವ ಪರಿ

ಆದರೆ ಅವರ ಗ್ರಾಮೀಣ ಅಭಿವೃದ್ಧಿ ಮಂತ್ರಿಗಳು ನೀಡಿರುವ ಪ್ರಕಟಣೆಯನ್ನು ನೋಡಿದರೆ 'ಒಳ್ಳೆಯ ದಿನಗಳ' ಭರವಸೆ ನೀಡಿರುವ ಅವರ ಸರಕಾರ ಈ ಬಗ್ಗೆ ನಿಜಕ್ಕೂ ಗಂಭೀರವಾಗಿ ಯೋಚಿಸುತ್ತಿದೆಯೇ ಎಂಬ ಸಂದೇಹ ಬರದಿರದು. ಸುಮಾರು ಒಂಭತ್ತು ವರ್ಷಗಳ ಹಿಂದೆ, ಆಗ ಎಡಪಕ್ಷಗಳ ಬೆಂಬಲವನ್ನು ಅವಲಂಬಿಸಿದ್ದ ಯುಪಿಎ-1 ಸರಕಾರ ಗ್ರಾಮೀಣ ಉದ್ಯೋಗ ಖಾತರಿ ಕಾನೂನನ್ನು ತರಬೇಕಾಗಿ ಬಂತು. ಒತ್ತಾಯದಿಂದ ತಂದರೂ ಮುಂದೆ ಇದರ ಹೆಸರು ಹೇಳಿಕೊಂಡೇ ಬಿಜೆಪಿಯ ನಿರೀಕ್ಷೆಗಳನ್ನು ಹುಸಿಮಾಡಿ ಅದು ಮತ್ತೆ ಅಧಿಕಾರಕ್ಕೆ ಬಂತು. ಈ ಕಾನೂನಿನ ಜಾರಿಯಲ್ಲಿ ಬಹಳಷ್ಟು ನ್ಯೂನ್ಯತೆಗಳಿದ್ದರೂ ಗ್ರಾಮೀಣ ಜನರ ಖರೀದಿ ಸಾಮರ್ಥ್ಯವನ್ನು ಇದು ಗಮನಾರ್ಹವಾಗಿ ಹೆಚ್ಚಿಸಿದೆ ಎಂದು ಹಲವು ಅಧ್ಯಯನಗಳು ಹೇಳುತ್ತಿವೆ. ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತರಿ ಕಾನೂನು(ಮನರೇಗ) ಎಂದು ಈಗ ಹೆಸರಾಗಿರುವ ಈ ಯೋಜನೆ ಹಲವು ಸವಾಲುಗಳ ನಡುವೆಯೂ ಗ್ರಾಮೀಣ ಪ್ರದೇಶಗಳನ್ನು, ಅದರಲ್ಲೂ ಮಹಿಳೆಯರನ್ನು ತಲುಪಿದೆ ಎಂದು ವಿಶ್ವಬ್ಯಾಂಕ್‌ನ 2012ರ ಒಂದು ಅಧ್ಯಯನ ಹೇಳಿದರೆ, ಅಂತರ್‍ರಾಷ್ಟ್ರೀಯ ಕಾರ್ಮಿಕ ಸಂಘಟನೆ(ಐಎಲ್‌ಒ) ಅಧ್ಯಯನ ಲಕ್ಷಾಂತರ ಗ್ರಾಮೀಣ ಭಾರತೀಯರನ್ನು ದಿನಕ್ಕೆ ಒಂದು ಡಾಲರಿನ ಬಡತನದ ರೇಖೆಯಿಂದ ಮೇಲೆತ್ತಿರುವ ಯೋಜನೆ ಇದು ಎಂದು ಅಭಿಪ್ರಾಯ ಪಟ್ಟಿದೆ.(ದಿ ಹಿಂದೂ, ಸಪ್ಟಂಬರ್ 27 ರ ಸಂಪಾದಕೀಯ).

ಈಗ 'ಒಳ್ಳೆಯ ದಿನಗಳ' ಸರಕಾರ ಅಧಿಕಾರ ವಹಿಸಿಕೊಂಡಂದಿನಿಂದ ಇಂತಹ ಒಂದು ಯೋಜನೆಯ ಮೇಲೂ ವಿವಿಧ ರೀತಿಯಲ್ಲಿ ದಾಳಿಗಳು ಬರುತ್ತಿವೆ. ಇದು 'ಅಗ್ಗದ ಜನಪ್ರಿಯತೆ'ಯ ಕಾನೂನು, ಇದಕ್ಕೆ ಸರಕಾರ ಭಾರೀ ಸಬ್ಸಿಡಿ ನೀಡಬೇಕಾಗಿ ಬರುತ್ತಿದೆ, ಇದು ಆರ್ಥಿಕದ ಮೇಲಿನ ದೊಡ್ಡ ಹೊರೆ ಎಂದು ಮೋದಿ ಪರ ಆರ್ಥಿಕ ತಜ್ಞರು ಹೇಳುತ್ತಿದ್ದಾರೆ. ಸರಕಾರವೂ ಅದನ್ನು ನಂಬಿರುವಂತೆ ಕಾಣುತ್ತದೆ.

'ಮೇಡ್ ಇನ್ ಇಂಡಿಯಾ' ಕಾರ್ಮಿಕರನ್ನು ಮರೆತ 'ಮೇಕ್ ಇನ್ ಇಂಡಿಯಾ'


ಆದ್ದರಿಂದಲೇ ಗ್ರಾಮೀಣಾಭಿವೃದ್ಧಿ ಮಂತ್ರಿಗಳು ಕೂಲಿ ಮತ್ತು ಸಾಮಗ್ರಿಗಳ ಮೇಲಿನ ಖರ್ಚಿನ ಅನುಪಾತವನ್ನು ಬದಲಿಸುವುದಾಗಿ ಪ್ರಕಟಣೆ ನೀಡಿದ್ದಾರೆ. ಅಂದರೆ ಈ ಯೋಜನೆಯ ಕಾಮಗಾರಿಯಲ್ಲಿ 60 ಶೇ.ದಷ್ಟು ಕೂಲಿಗೆ ವೆಚ್ಚವಾದರೆ, ಕಾಮಗಾರಿಗೆ ಬೇಕಾಗುವ ಸಾಮಗ್ರಿಗಳ ಮೇಲಿನ ಖರ್ಚು ಉಳಿದ 40ಶೇ. ದಷ್ಟು ಇರಬೇಕು ಎಂದು ಯುಪಿಎ-2 ಸರಕಾರ ವಿಧಿಸಿತ್ತು. ಇದನ್ನು 51-49ಕ್ಕೆ ಬದಲಿಸಬೇಕು, ಅಂದರೆ ಕೂಲಿಗೆ ಮಾಡುವ ವೆಚ್ಚ 51ಶೇ.ಕ್ಕೆ ಇಳಿಯಬೇಕು, ಸಾಮಗ್ರಿಗಳ ಮೇಲಿನ ವೆಚ್ಚ 49ಶೇ.ಕ್ಕೇ ಏರಿಸಬೇಕು ಎಂಬುದು ಮೋದಿ ಸರಕಾರದ ಆಶಯ. ಕೂಲಿಯ ವೆಚ್ಚ ಕಡಿಮೆ ಮಾಡುವುದೆಂದರೆ ಕೂಲಿ ದರ ಇಳಿಸುವುದು ಅಥವ ಕೂಲಿಯ ದಿನಗಳನ್ನು ಇಳಿಸುವುದು ಎಂದರ್ಥ. ಅಂದರೆ ಒಟ್ಟಿನಲ್ಲಿ ಈ ಯೋಜನೆಯಲ್ಲಿ ಕೂಲಿ ಕೆಲಸ ಪಡೆದು ಸ್ವಲ್ಪವಾದರೂ ಹೆಚ್ಚಿರುವ ಬಡವರ ಖರೀದಿ ಸಾಮರ್ಥ್ಯವನ್ನು ಇಳಿಸುವುದು ಎಂದೇ ಅರ್ಥ. ವಾಸ್ತವವಾಗಿ ಸಾಮಗ್ರಿಗಳಿಗೆ 40ಶೇ.ದ ವರೆಗೆ ವೆಚ್ಚ ಮಾಡಲು ಈಗಲೂ

ಮುಂದಿನ ಪುಟ 15 ನೋಡಿ

ಆಟೋ ಪ್ರಯಾಣಕ್ಕಿಂತಲೂ ಅಗ್ಗದ ಮಂಗಳಯಾನ: 'ಒಳ್ಳೆಯ ದಿನಗಳ' ಸಾಧನೆ!

'ಅಭಿವೃದ್ಧಿ' ಅಜೆಂಡಾದ ಆಚೆ

ಇಸ್ರೋದ ವಿಜ್ಞಾನಿಗಳು ಮಂಗಳಯಾನವನ್ನು ಮಂಗಳ ಗ್ರಹದ ಕಕ್ಷೆಗೆ ಯಶಸ್ವಿಯಾಗಿ ಸೇರಿಸುತ್ತಿದ್ದಂತೆಯೇ ಅಲ್ಲಿದ್ದ ಪ್ರಧಾನ ಮಂತ್ರಿಗಳು ಮಾಡಿದ 'ಬೊಂಬಾಟ್' ಭಾಷಣ ಹಲವರಿಗೆ ರುಚಿಸಲಿಲ್ಲ ಎನ್ನಲಾಗಿದೆ. ಈ ಕೆಳಗಿರುವ ವ್ಯಂಗ್ಯಚಿತ್ರ ಅದನ್ನು ಬಿಂಬಿಸುತ್ತದೆ. ಮಂಗಳಯಾನದ ಯಶಸ್ಸು ಕೂಡ ತನ್ನದೇ ಸಾಧನೆ ಎಂಬಂತಿತ್ತು ಅವರ ಭಾಷಣ ಎನ್ನುತ್ತಾರೆ ವಿಜ್ಞಾನ ವಿಷಯಗಳ ಲೇಖಕ ಪ್ರಬೀರ್



ಕೃಪೆ: ಮಂಜುಲ್, ಡಿಎನ್‌ಎ

ಪುರಕಾಯಸ್ಥ. ಯಾನದಲ್ಲಿನ ಒಂದು ಉಪಕರಣದ ಒಂದು ಭಾಗ ಗುಜರಾತಿನ ರಾಜಕೋಟ್‌ನಲ್ಲಿ ತಯಾರಾಗಿದ್ದು ಪ್ರಧಾನಿಗಳು ಆ ರಾಜಕೋಟ್‌ನೊಂದಿಗೆ ತನ್ನ ಸಂಬಂಧದ ಕುರಿತೇ ಮಾತಾಡಿದರೇ ವಿನಹ ಇಸ್ರೋದ ಸಂಸ್ಥಾಪಕರಾದ ಹೋಮಿ ಭಾಭಾ ಮತ್ತು ವಿಕ್ರಂ ಸಾರಾಭಾಯ್ ಬಗ್ಗೆಯಾಗಲೀ, ಅದಕ್ಕೆ ಸಮರ್ಥ ನೇತೃತ್ವ ನೀಡಿ ಮುಂದುವರೆಸಿದ ಸತೀಶ್ ಧವನ್ ಬಗ್ಗೆಯಾಗಲೀ ಪ್ರಸ್ತಾಪವೂ ಇರಲಿಲ್ಲ. ಅವರ ಪಕ್ಕದಲ್ಲೇ ನಿಂತಿದ್ದ ಇಸ್ರೋದ ಪ್ರಸಕ್ತ ಮುಖ್ಯಸ್ಥರಿಗೂ ಮಾತಾಡುವ ಅವಕಾಶವಿರಲಿಲ್ಲ. ಅವರ ಭಾಷಣದಲ್ಲಿ ವಾಜಪೇಯಿ ಬಿಟ್ಟು ಬೇರಾವ ರಾಜಕೀಯ ಮುಖಂಡರ ಹೆಸರೂ ಕೇಳಬರಲಿಲ್ಲ. ವಿಜ್ಞಾನ ಮತ್ತು ತಂತ್ರಜ್ಞಾನ ಭಾರತದಲ್ಲಿ ಬಡತನವನ್ನು ನಿವಾರಿಸುವಲ್ಲಿ ಪಾತ್ರ ವಹಿಸಲು ಸಾಧ್ಯವಿದೆ ಎಂಬ ಕಣ್ಣೋಟದಿಂದ ಇಸ್ರೋದ ಸ್ಥಾಪನೆಯ ಬಗ್ಗೆ ಯೋಚಿಸಿದ ದೇಶದ ಪ್ರಥಮ ಪ್ರಧಾನ ಮಂತ್ರಿ ನೆಹರೂರವರ ಪ್ರಸ್ತಾಪವೂ ಇರಲಿಲ್ಲ. ವಾಸ್ತವವಾಗಿ ಈ ಮಂಗಳಯಾನದ ಯೋಜನೆ ಸಿದ್ಧವಾದದ್ದು ಮತ್ತು ಆರಂಭವಾದದ್ದು ಮನಮೋಹನ ಸಿಂಗ್‌ರವರ ಆಡಳಿತ ಅವಧಿಯಲ್ಲಿ. ಅವರ ಹೆಸರಿನ ಪ್ರಸ್ತಾಪವೂ ಇರಲಿಲ್ಲ.

ಇದನ್ನು ನೋಡಿ, 24 ನಿಮಿಷಗಳ ಕಾಲ ಮಂಗಳಯಾನದ ಇಂಜಿನ್‌ಗಳು ಯಶಸ್ವಿಯಾಗಿ ಫೈರ್ ಮಾಡುತ್ತಿದ್ದಾಗ, ಅದಕ್ಕೂ ಹೆಚ್ಚು ಕಾಲ ಮೋದಿಯವರ ಮಾತುಗಳು ಮಿಸ್‌ಫೈರ್ ಮಾಡುತ್ತಿದ್ದವು ಎಂದೊಬ್ಬ ಹಾಸ್ಯಗಾರರು ಟಿಪ್ಪಣಿ ಮಾಡಿದರಂತೆ.

ಇದು ಇಸ್ರೋದ ಮುಖ್ಯ ಕಚೇರಿಯಲ್ಲೇ ಮುಗಿಯಲಿಲ್ಲ. ನ್ಯೂಯಾರ್ಕಿನ ಮ್ಯಾಡಿಸನ್ ಚೌಕದಲ್ಲಿ ಅಪಾರ ಸಂಖ್ಯೆಯಲ್ಲಿ ನೆರೆದಿದ್ದ ಅವರ ಅಮೆರಿಕನ್ ಭಾರತೀಯ ಬೆಂಬಲಿಗರ ಎದುರೂ ಅದು ಮುಂದುವರೆಯಿತು. ಅವರ ಬೆಂಬಲ ಹುಸಿ ಹೋಗಿಲ್ಲ ಎಂದು ಅಲ್ಲಿ ನೆರೆದಿದ್ದವರಿಗೆ ಮನವರಿಕೆ ಮಾಡಲು ತನ್ನ ಇದುವರೆಗಿನ ಸಾಧನೆಗಳನ್ನು ಹೇಳುತ್ತಲೇ ತಮ್ಮ ಹಿಂದಿನ ರಾಜಧಾನಿ ಅಹಮದಾಬಾದಿನಲ್ಲಿ ಆಟೋದಲ್ಲಿ ಒಂದು ಕಿ.ಮೀ. ಪ್ರಯಾಣಕ್ಕೆ 10ರೂ. ತೆರಬೇಕಾಗಿದೆ, ಆದರೆ ಮಂಗಳಯಾನ ಮಂಗಳವನ್ನು ತಲುಪಿರುವುದು ಕೇವಲ ಕಿ.ಮೀ.ಗೆ 7ರೂ. ವೆಚ್ಚದಲ್ಲಿ ಎಂದರು. "ಮಂಗಳಯಾನದ ಪ್ರತಿಯೊಂದೂ ಸ್ವದೇಶಿ. ನಾವು ಹಾಲಿವುಡ್ ಸಿನಿಮಾಕ್ಕಿಂತಲೂ ಕಡಿಮೆ ಬಜೆಟಿನಲ್ಲಿ ಮಂಗಳ ತಲುಪಿದ್ದೇವೆ" ಎಂದು ಬೆನ್ನು ತಟ್ಟಿಕೊಂಡರು. ಅವರು ಗುಜರಾತದಲ್ಲಿ ಅಧಿಕಾರಕ್ಕೆ ಬರುವ ಎಷ್ಟೋ ಮೊದಲೇ ಆರಂಭಿಸಿದ ಯೋಜನೆಯ ಒಟ್ಟು ಫಲ ಇದೆಂಬ ವಿಚಾರವೇ ಅಲ್ಲಿರಲಿಲ್ಲ. "ಭಾರತ ಮೊದಲ ಪ್ರಯತ್ನದಲ್ಲೇ ಮಂಗಳ ತಲುಪಿದ ಏಕೈಕ ದೇಶ" ಎನ್ನುವಾಗ ವಿಜ್ಞಾನ ಮತ್ತು ತಂತ್ರಜ್ಞಾನದ ಸಾಧನೆಗಳ ಹಿಂದೆ ಭಾರತದಲ್ಲಿ ಮಾತ್ರವಲ್ಲ, ಒಟ್ಟಾಗಿ ಜಗತ್ತಿನಲ್ಲಿ ಅದೆಷ್ಟು ವಿಫಲತೆಗಳ ಅನುಭವವಿರುತ್ತದೆ ಎಂಬ ಪರಿಜ್ಞಾನದ ಅಭಾವವೂ ಎದ್ದು ಕಾಣುತ್ತದೆಂದು ವಿಜ್ಞಾನ ಲೇಖಕರು ಟಿಪ್ಪಣಿ ಮಾಡಿದ್ದಾರೆ.

ವಾಸ್ತವವಾಗಿ ಮ್ಯಾಡಿಸನ್ ಚೌಕದ ಭಾಷಣ ಚುನಾವಣಾ ಭಾಷಣದ ಮಾದರಿಯಲ್ಲೇ ಇದ್ದುದರಿಂದ ಇಂತಹ ಮಾತುಗಳಿಗೆ ಅಷ್ಟೊಂದು ಮಹತ್ವ ಕೊಡಬೇಕಾಗಿಲ್ಲ ಎಂದು ಹೇಳಬಹುದೇನೋ.

ಮುಂದಿನ ಪುಟ 15 ನೋಡಿ

ಸಾಮಾಜಿಕ ದಮನವನ್ನು ಚಿರಸ್ಥಾಯಿಗೊಳಿಸಲು ಮತ್ತೆ ಇತಿಹಾಸದ ಪುನರ್ಲೇಖನದ ಅಜೆಂಡಾ



ಜಾತಿ ಪದ್ಧತಿ ಮತ್ತು ಅದರೊಡನೆಯೇ ಇರುವ ಸಾಮಾಜಿಕ ಅತ್ಯಾಚಾರಗಳು ಪ್ರಾಚೀನ ಹಿಂದೂ ಸಮಾಜದಲ್ಲಿ ಎಂದೂ ಇರಲೇ ಇಲ್ಲ, ಅವೆಲ್ಲ ಮುಸ್ಲಿಂ ಅತಿಕ್ರಮಣಗಳಿಂದಾಗಿ ನಮ್ಮ ಸಮಾಜದೊಳಕ್ಕೆ ನುಸುಳಿದವು ಎನ್ನುವುದು ದಾಖಲೆಯಾಗಿರುವ ಇತಿಹಾಸದ ಒಂದು ಮಹಾವಿಕೃತಿ, ಅಷ್ಟೇ ಅಲ್ಲ, ಈ ನೆಲದಲ್ಲಿ ಸಾವಿರಾರು ವರ್ಷಗಳಿಂದ ಹರಿದಾಡುತ್ತಿರುವ ಮೌಖಿಕ ಇತಿಹಾಸದ ವಿಕೃತಿ ಕೂಡ.

ಭಾರತದ ಇತಿಹಾಸದ ಇಂತಹ ಪುನರ್ಲೇಖನದ ಅಜೆಂಡಾ ಸಾಮಾಜಿಕ ದಮನವನ್ನು ಚಿರಸ್ಥಾಯಿಗೊಳಿಸಲಿಕ್ಕಾಗಿ, ಮತ್ತು ಅದರೊಂದಿಗೆ ಅವರು ಅಹಿಂದು ಎಂದು ಪರಿಗಣಿಸುವ ಯಾರಿಗೂ ಮೂಲಭೂತ ಮಾನವ ಹಕ್ಕುಗಳು ಸಿಗದಂತೆ ನಿರಾಕರಿಸಲಿಕ್ಕಾಗಿ ರೂಪಿಸಿರುವಂತದ್ದು.

ಸೀತಾರಾಮ್ ಯೆಚೂರಿ

ಬಿಕಾನೇರ್‌ನಲ್ಲಿ ಬಿಜೆಪಿ ರಾಜ್ಯ ಸರಕಾರ ನಡೆಸುವ ಒಂದು ಶಾಲೆಯಲ್ಲಿ ಹನ್ನೊಂದು ದಲಿತ ವಿದ್ಯಾರ್ಥಿಗಳನ್ನು ವಜಾ ಮಾಡಿರುವ ಘಟನೆ ನಮ್ಮ ದೇಶದಲ್ಲಿ ಜಾತಿ ಮತ್ತು ಸಾಮಾಜಿಕ ದಮನ ಮುಂದುವರೆಯುತ್ತಲೇ ಇದೆ ಎಂಬುದನ್ನು ಮತ್ತೊಮ್ಮೆ ಎತ್ತಿ ತೋರಿದೆ. ಆ ಮಕ್ಕಳು ಒಬ್ಬ ಮೇಲ್ಜಾತಿಯ ಶಿಕ್ಷಕನಿಗೆ ಪ್ರತ್ಯೇಕವಾಗಿ ಇಟ್ಟಿದ್ದ ಒಂದು ಮಣ್ಣಿನ ಮಡಕೆಯಿಂದ ನೀರು ಕುಡಿದರು ಎಂಬ ಕಾರಣಕ್ಕೆ ಅವರನ್ನು ವಜಾ ಮಾಡಲಾಯಿತು.

ಅದೇ ದಿನ ಒಬ್ಬ ಬಿಜೆಪಿ ವಕ್ತಾರರ ದಲಿತರನ್ನು ಕುರಿತ ಮೂರು ಪುಸ್ತಕಗಳನ್ನು ಆರೆಸ್ಸೆಸ್ ಮುಖ್ಯಸ್ಥರು ಬಿಡುಗಡೆ ಮಾಡಿದರು ಎಂಬುದು ನಮ್ಮ ಕಾಲದ ವಿಡಂಬನೆಯೇ ಸರಿ. ದಲಿತರ, ಬುಡಕಟ್ಟುಗಳ ಮತ್ತು ಇನ್ನೂ ಹಲವು ದಮನಿತ ಗುಂಪುಗಳ ಹುಟ್ಟಿಗೆ "ಮಧ್ಯಯುಗದ ಮುಸ್ಲಿಂ ಅತಿಕ್ರಮಣವೇ ಕಾರಣ" ಎಂದು ವ್ಯಾಖ್ಯಾನ ಮಾಡುವ ಮೂವರು ಉನ್ನತ ಆರೆಸ್ಸೆಸ್ ಮುಖಂಡರುಗಳ ಮುನ್ನುಡಿಗಳನ್ನು ಈ ಮೂರು ಪುಸ್ತಕಗಳು ಹೊಂದಿವೆ. ಈ ಜಾತಿಗಳು ಅದಕ್ಕೆ ಮೊದಲು ಹಿಂದೂ ಧರ್ಮದಲ್ಲಿ ಇರಲೇ ಇಲ್ಲ, ವಿದೇಶಿ ಅತಿಕ್ರಮಣಕಾರರ ಅತ್ಯಾಚಾರಗಳಿಂದಾಗಿ ಅವು ಅಸ್ತಿತ್ವಕ್ಕೆ ಬಂದವು ಎಂದು ಈ ಆರೆಸ್ಸೆಸ್ ಮುಖಂಡರು ವಾದಿಸಿದ್ದಾರೆ(ಹಿಂದುಸ್ತಾನ್ ಟೈಮ್ಸ್, ಸಪ್ಟಂಬರ್ 22, 2014).

ಕೇಂದ್ರ ಸರಕಾರ ತನ್ನ ರಾಜಕೀಯ ಅಂಗವಾದ ಬಿಜೆಪಿಯ ಅಡಿಯಲ್ಲಿ ಬಂದಿರುವುದರಿಂದ ಧೈರ್ಯ ತುಂಬಿಕೊಂಡಿರುವ ಆರೆಸ್ಸೆಸ್ ಎಲ್ಲ ಗುಂಪುಗಳನ್ನು ಒಂದು ಹಿಂದೂ ಅಸ್ಮಿತೆಯ ಅಡಿಯಲ್ಲಿ ಏಕೀಕರಿಸಲು ಒಂದು ಸಾಮಾನ್ಯ ಹಿಂದೂ ಎಳೆಯನ್ನು ಊರ್ಜಿತಗೊಳಿಸುವ ತನ್ನ ಪ್ರಯತ್ನವನ್ನು ತೀವ್ರಗೊಳಿಸಿದೆ. ಇದಕ್ಕಾಗಿ, ಇಂದು ನಮ್ಮ ಮಹಾನ್ ದೇಶದ ಭಾಗಗಳಾಗಿರುವ ನಾಡುಗಳ ಇತಿಹಾಸವನ್ನು ತಮ್ಮ ವ್ಯಾಖ್ಯಾನಗಳಿಗೆ ಅನುಗುಣವಾಗಿ ಮತ್ತೆ ಬರೆಯುವುದು ಅವರಿಗೆ ಅಗತ್ಯವೆನಿಸಿದೆ. ಇದು ಆಧುನಿಕ ಜಾತ್ಯಾತೀತ ಪ್ರಜಾಸತ್ತಾತ್ಮಕ ಭಾರತೀಯ ಗಣತಂತ್ರವನ್ನು ತಮ್ಮ ಪರಿಕಲ್ಪನೆಯ 'ಹಿಂದೂರಾಷ್ಟ್ರ'ವಾಗಿ ಪರಿವರ್ತಿಸುವ ಆರೆಸ್ಸೆಸ್ ಯೋಜನೆಯನ್ನು ಮುಂದೊಯ್ಯಲು ಅತ್ಯಗತ್ಯ. ಶತಮಾನಗಳ ಕಾಲ ಭಾರತದಲ್ಲಿ ನೆಲೆಸಿರುವ ಜನಗಳ ಸಂಸ್ಕೃತಿ, ಪರಂಪರೆಗಳು, ಭಾಷೆ ಮತ್ತು ರೂಢಿಗಳ ಸಮಸ್ತ ವೈವಿಧ್ಯತೆಗಳನ್ನು 'ಹಿಂದೂ' ಎಂಬೊಂದು ಅಖಂಡದೊಳಕ್ಕೆ ತುರುಕುವ ಪ್ರಯತ್ನ ನಡೆಯುತ್ತಿದೆ.

ಎರಡನೆಯದಾಗಿ, ಈ ಗುರಿಸಾಧನೆಗೆ ಭಾವೋದ್ವೇಗಗಳನ್ನು ಬಡಿದೆಬ್ಬಿಸಲು ಒಂದು ಹೊರಗಣ (ಅಂದರೆ ಹಿಂದೂಗಳಿಗೆ ಹೊರತಾದ) ವೈರಿಯನ್ನು ಸೃಷ್ಟಿಸಬೇಕಾಗಿದೆ.

ಇತ್ತೀಚಿನ ಕಸರತ್ತು

ಇತಿಹಾಸದ ಪುನರ್ಲೇಖನದ ಈ ಇತ್ತೀಚಿನ ಕಸರತ್ತಿನಲ್ಲಿ ಆರೆಸ್ಸೆಸ್ ಶ್ರೇಣಿ ವ್ಯವಸ್ಥೆಯಲ್ಲಿ ಎರಡನೇ ಉನ್ನತ ಸ್ಥಾನದಲ್ಲಿರುವ ಭಯ್ಯಾಜಿ ಜೋಷಿ ಹಿಂದೂ ಧರ್ಮಶಾಸ್ತ್ರಗಳಲ್ಲಿ 'ಶೂದ್ರರು' ಎಂದೂ ಅಸ್ಪೃಶ್ಯರಾಗಿರಲಿಲ್ಲ ಎನ್ನುತ್ತಾರೆ. ಮಧ್ಯಯುಗದ ಇಸ್ಲಾಮೀ ಅತ್ಯಾಚಾರಗಳ ಅವಧಿಯಲ್ಲಿ ಅಸ್ಪೃಶ್ಯರು, ದಲಿತರು ಮತ್ತು ಭಾರತೀಯ ಮುಸ್ಲಿಮರು ಮೂಡಿಬಂದರು ಎನ್ನುತ್ತಾರೆ ಅವರು.

ಇದೇ ರಾಗವನ್ನು ಪ್ರತಿಧ್ವನಿಸುತ್ತ ಇನ್ನೊಬ್ಬ ಉನ್ನತ ಆರೆಸ್ಸೆಸ್ ಮುಖಂಡರು, ಇಸ್ಲಾಮೀ ಯುಗದಲ್ಲಿ ಬ್ರಾಹ್ಮಣರು ಮತ್ತು ಕ್ಷತ್ರಿಯರ ಮೇಲಿನ ಅತ್ಯಾಚಾರಗಳ ಫಲಿತಾಂಶವಾಗಿ ದಮನಿತ ಜಾತಿಗಳು, ಉಪಜಾತಿಗಳು ಅಸ್ತಿತ್ವಕ್ಕೆ ಬಂದವು, 'ದಲಿತರ ಉಗಮ ತುರುಕರು, ಮುಸ್ಲಿಮರು ಮತ್ತು ಮೊಗಲ ಕಾಲಗಳಲ್ಲಿ ನಡೆದಿದೆ' ಎಂದು ಬರೆಯುತ್ತಾರೆ. ಭಾರತೀಯ ಇತಿಹಾಸದ ಪುನರ್ಲೇಖನದ ಇಂತಹ ವಾದಗಳ ಮೇಲೆ ಗಮನ ಕೇಂದ್ರೀಕರಿಸುತ್ತ, ಆರೆಸ್ಸೆಸ್‌ಗೆ ಸೇರಿದ ಒಂದು ಸಂಘಟನೆ ಇತ್ತೀಚೆಗೆ ನೂರಕ್ಕೂ ಹೆಚ್ಚು ಇತಿಹಾಸಕಾರರ ಒಂದು ಗುಪ್ತ ಸಮಾವೇಶವನ್ನು ನಡೆಸಿದೆ ಎಂದು ಮಾಧ್ಯಮಗಳು ವರದಿ ಮಾಡಿವೆ. ಇದರಲ್ಲಿ ಹಿಂದೂ ಕ್ರೋಡೀಕರಣದ ಗುರಿಸಾಧನೆಗೆ ಯಾವುದೇ ಜಾತಿ, ಉಪಜಾತಿಯನ್ನು ಮೀರಿ ನಿಲ್ಲುವ ಎಲ್ಲವನ್ನೂ ಆವರಿಸಿಕೊಳ್ಳುವ ಒಂದು ಹಿಂದೂ ಅಸ್ಮಿತೆಯನ್ನು ರಚಿಸುವ ಇತಿಹಾಸ ಲೇಖನ ಮತ್ತು ಪಠ್ಯಗಳಲ್ಲಿನ ಬದಲಾವಣೆಗಳನ್ನು ಕುರಿತು ಚರ್ಚಿಸಲಾಯಿತು ಎಂದು ವರದಿಯಾಗಿದೆ.

ಮಹಾವಿಕೃತಿ

ಜಾತಿ ಪದ್ಧತಿ ಮತ್ತು ಅದರೊಡನೆಯೇ ಇರುವ ಸಾಮಾಜಿಕ ಅತ್ಯಾಚಾರಗಳು ಪ್ರಾಚೀನ ಹಿಂದೂ ಸಮಾಜದಲ್ಲಿ ಎಂದೂ ಇರಲೇ ಇಲ್ಲ, ಅವೆಲ್ಲ ಮುಸ್ಲಿಂ ಅತಿಕ್ರಮಣಗಳಿಂದಾಗಿ ನಮ್ಮ ಸಮಾಜದೊಳಕ್ಕೆ ನುಸುಳಿದವು ಎನ್ನುವುದು ದಾಖಲೆಯಾಗಿರುವ ಇತಿಹಾಸದ ಒಂದು ಮಹಾವಿಕೃತಿ, ಅಷ್ಟೇ ಅಲ್ಲ, ಈ ನೆಲದಲ್ಲಿ ಸಾವಿರಾರು ವರ್ಷಗಳಿಂದ ಹರಿದಾಡುತ್ತಿರುವ ಮೌಖಿಕ ಇತಿಹಾಸದ ವಿಕೃತಿ ಕೂಡ. ನಿಜವಾಗಿ ಹೇಳಬೇಕೆಂದರೆ, ಆರೆಸ್ಸೆಸ್‌ನ ಮೂಲ ಕೂಡ 'ಹಿಂದೂ ಸಂಹಿತೆ'ಯ ಧಾರ್ಮಿಕ ಮಂಜೂರಾತಿಯನ್ನು ಆಧರಿಸಿದೆ. ಆರೆಸ್ಸೆಸ್‌ನ ಅತ್ಯಂತ ಪವಿತ್ರಾತ್ಮರಾದ ಸರಸಂಘಚಾಲಕ, ಮಾಧವ ಸದಾಶಿವ ಗೋಲ್ವಾಲ್ಕರ್ ಇದನ್ನು ಅನುಮೋದಿಸಿದ್ದಾರೆ. 'ವಿ ಓರ್ ಅವರ್ ನೇಶನ್‌ಹುಡ್ ಡಿಫೈನ್ಡ್' (ನಾವು ಅಥವ ನಮ್ಮ ರಾಷ್ಟ್ರೀಯತ್ವದ ನಿರೂಪಣೆ) ಎಂಬ 1939ರ ಕಿರುಹೊತ್ತಗೆಯಲ್ಲಿ ಅವರು ಮನು 'ಜಗತ್ತಿನ ಮೊತ್ತಮೊದಲ ಮತ್ತು ಅತ್ಯಂತ ಮಹಾನ್ ಶಾಸನಕರ್ತೃ' ಎಂದು ಹೊಗಳಿದ್ದಾರೆ, "ಆತನ ಸಂಹಿತೆ ಜಗತ್ತಿನ ಎಲ್ಲ ಜನಗಳೂ ಹಿಂದೂಸ್ತಾನಕ್ಕೆ ಹೋಗಿ ಈ ನಾಡಿನ 'ಸರ್ವಜ್ಯೇಷ್ಠ' ಬ್ರಾಹ್ಮಣರ ಪವಿತ್ರ ಅಡಿದಾವರೆಗಳಲ್ಲಿ ತಮ್ಮ ಕರ್ತವ್ಯಗಳನ್ನು ಕಲಿಯಬೇಕು ಎಂದು ನಿರ್ದೇಶಿಸುತ್ತದೆ" ಎಂದಿದ್ದಾರೆ.

ಬಹಳ ನಂತರ, 1966ರಲ್ಲಿ ಬಂದ ಅವರ ಕೃತಿ 'ಬಂಚ್ ಆಫ್ ಥಾಟ್ಸ್'(ವಿಚಾರಗುಚ್ಛ)ದಲ್ಲಿ ಅವರು "ಬ್ರಾಹ್ಮಣ ಶಿರವಾಗಿದ್ದಾನೆ, ಅರಸ(ಕ್ಷತ್ರಿಯ) ಕೈಗಳಾಗಿದ್ದಾನೆ, ವೈಶ್ಯ ತೊಡೆಯಾಗಿದ್ದಾನೆ ಮತ್ತು ಶೂದ್ರ ಪಾದಗಳಾಗಿದ್ದಾನೆ. ಇದರ ಅರ್ಥ ಈ ರೀತಿ ಚತುರ್ವರ್ಣ ವ್ಯವಸ್ಥೆ ಹೊಂದಿರುವ ಜನ, ಅಂದರೆ ಹಿಂದೂ ಜನ ನಮ್ಮ ದೇವರು" ಎಂದಿದ್ದಾರೆ.

ಮನುಸ್ಮೃತಿಯಲ್ಲಿ

ಇನ್ನು ಮನುಸ್ಮೃತಿ ಏನು ಹೇಳುತ್ತದೆ? "ಬ್ರಾಹ್ಮಣರ ಸೇವೆ ಮಾಡುವುದು ಮಾತ್ರವೇ ಒಬ್ಬ ಶೂದ್ರನ ಅತ್ಯುತ್ತಮ ಸ್ವಭಾವಜನ್ಯ ಚಟುವಟಿಕೆ ಎಂದು ಸಲಹೆ ಮಾಡಲಾಗುತ್ತದೆ; ಏಕೆಂದರೆ ಇದನ್ನು ಬಿಟ್ಟು ಬೇರೇನು ಮಾಡಿದರೂ ಆತನಿಗೆ ಫಲ ಸಿಗದು" (ಅಧ್ಯಾಯ10, 123).

ಮುಂದುವರೆದು ಮನುಸ್ಮೃತಿ, ಸಮಾಜದಲ್ಲಿ ಯಾವುದೇ ಸ್ಥಾನ ಇರದ ಜಾತಿಬಾಹಿರರು ಮತ್ತು ಅಸ್ಪೃಶ್ಯರು ಯಾರು, ಅವರು ಮಾಡಬೇಕಾದ ಚಾಕರಿಗಳೇನು ಎಂದು ನಿರೂಪಿಸುತ್ತದೆ.

ಈ ಅಸಹಿಷ್ಣು ಜಾತಿ ರಚನೆ ಇಂದು ಆರೆಸ್ಸೆಸ್‌ನಲ್ಲಿ ಅಭಿವ್ಯಕ್ತಗೊಂಡಿದೆ. ಏಕೆಂದರೆ ಮನುಸ್ಮೃತಿ 'ಆರ್ಯ ಸಾಮಾಜಿಕ ಸಂಘಟನೆ'ಯ ಮೇಲಷ್ಟೇ ಆಧರಿತವಾದದ್ದು. "ಅನಾರ್ಯ ವರ್ತನೆ, ಕಠೋರತೆ, ಕ್ರೌರ್ಯ ಮತ್ತು ವ್ರತಾಚರಣೆಗಳನ್ನು ನಡೆಸುವಲ್ಲಿ ಸದಾ ವಿಫಲವಾಗುವುದು ಈ ಜಗತ್ತಿನಲ್ಲಿ ಆ ವ್ಯಕ್ತಿ ಒಂದು ಕಲುಷಿತ ಗರ್ಭದಿಂದ ಹುಟ್ಟಿದವನು ಎಂಬುದರ ಅಭಿವ್ಯಕ್ತಿಗಳಾಗಿವೆ" ಎನ್ನುತ್ತದೆ ಅದು(ಅಧ್ಯಾಯ 10, 58).

ಆದರೆ, ಇಂತಹ 'ಹಿಂದೂರಾಷ್ಟ್ರ'ದ ಸ್ಥಾಪನೆಗೆ ಆರ್ಯರು ಈ ನೆಲದಲ್ಲೇ ಹುಟ್ಟಿದವರು, ಬೇರಾವ ಕಡೆಯಿಂದಲೂ ಬಂದವರಲ್ಲ ಎಂಬುದಕ್ಕೆ ಯಾರೂ ನಿರಾಕರಿಸಲಾಗದ ಸಾಕ್ಷ್ಯ ಬೇಕಾಗುತ್ತದೆ. ಆರೆಸ್ಸೆಸ್ ಇವನ್ನೆಲ್ಲ 'ನಂಬಿಕೆಯ ವಿಷಯಗಳು' ಎಂದು ಹೇಳಿ ಚಾರಿತ್ರಿಕ ಸಾಕ್ಷ್ಯದ ಎಲ್ಲ ಪ್ರಶ್ನೆಗಳನ್ನು ಬದಿಗೊತ್ತುತ್ತದೆ.



"ನೀವು ಇತಿಹಾಸ ಮಾಡಿ ಎನ್ನುತ್ತೀರಿ. ನಾನು ಇತಿಹಾಸ ಮಾಡಿದಾಗ ಅದು ಬೂಸಾ ಎನ್ನುತ್ತೀರಿ"
ಲೋಕಸಭಾ ಚುನಾವಣಾ ಪ್ರಚಾರದ ಸಂದರ್ಭದಲ್ಲಿ ಟೈಂಸ್ ಆಫ್ ಇಂಡಿಯಾದಲ್ಲಿ ನೈನನ್‌ರವರ ವ್ಯಂಗ್ಯ

ಇತಿಹಾಸಕಾರರಾದ ರೊಮಿಲಾ ಥಾಪರ್ "ವೈದಿಕ ಸಂಸ್ಕೃತದ ಭಾಷಾ ಸಾಕ್ಷ್ಯ ಭಾರತದೊಳಕ್ಕೆ ಇರಾನಿನಿಂದ ಒಂದು ಇಂಡೋ-ಯುರೋಪಿಯನ್ ಭಾಷೆ ಬಂದಿರುವುದನ್ನು ಬೆಂಬಲಿಸುತ್ತದೆಯೇ ಹೊರತು, ಭಾರತ ಆರ್ಯಭಾಷಿಕರ ತಾಯ್ನಾಡು ಎಂಬ ಕಲ್ಪನೆಯನ್ನು ಬೆಂಬಲಿಸುವುದಿಲ್ಲ" ಎಂದು ಸಾಬೀತುಪಡಿಸಿದ್ದಾರೆ. (ಸೆಮಿನಾರ್, 400, 1992).

ಸಾಕ್ಷ್ಯದ ಸ್ಥಾನವನ್ನು 'ನಂಬಿಕೆ', ಚರಿತ್ರೆಯ ಸ್ಥಾನವನ್ನು ಪುರಾಣ ಮತ್ತು ತತ್ವಶಾಸ್ತ್ರದ ಸ್ಥಾನವನ್ನು ಧರ್ಮಶಾಸ್ತ್ರ ವಹಿಸಿಕೊಂಡು ಇವನ್ನೆಲ್ಲ ಬದಿಗೆ ತಳ್ಳಲಾಗುತ್ತಿದೆ.

ಭವಿಷ್ಯದ ಆರೆಸ್ಸೆಸ್ ನೀಲನಕ್ಷೆ

ಇಂದು ಕೂಡ ಭಾರತದಲ್ಲಿ ವಿಪರೀತ ಅನ್ಯಾಯಗಳನ್ನು ಮುಂದುವರೆಸುತ್ತಿರುವುದು ಇಂತಹ ಒಂದು ಕ್ರಿಮಿನಲ್ ಶೋಷಕ ಸಾಮಾಜಿಕ ವ್ಯವಸ್ಥೆಯ ಜಿಗುಟುತನವೇ. 2001ರಲ್ಲಿ ಕಾರ್ಮಿಕ ಮಂತ್ರಾಲಯ ಪ್ರಕಟಿಸಿದ ಒಂದು ವರದಿಯ ಪ್ರಕಾರ, ಯಾವುದೇ ಕಾನೂನಾತ್ಮಕ ಮೀಸಲಾತಿಯಿರದ 15 ಶೇಕಡಾ ಮೇಲ್ಜಾತಿಗಳ ಜನಸಂಖ್ಯೆ(ಬ್ರಾಹ್ಮಣರು, ಕ್ಷತ್ರಿಯರು ಮತ್ತು ವೈಶ್ಯರು) 66.5ಶೇ. ರಾಜಕೀಯ ಪ್ರಾತಿನಿಧ್ಯ, 43ಶೇ. ಶೈಕ್ಷಣಿಕ ಪ್ರಾತಿನಿಧ್ಯ, ಉದ್ಯೋಗದಲ್ಲಿ 87ಶೇ. ವ್ಯಾಪಾರದಲ್ಲಿ 97ಶೇ. ಮತ್ತು ಭೂಮಿ-ಆಸ್ತಿಗಳಲ್ಲಿ 94ಶೇ. ಹೊಂದಿದ್ದಾರೆ(ಇದು ಲಭ್ಯವಿರುವ ಇಂತಹ ಕೊನೆಯ ವರದಿ). ಉಳಿದ 85 ಶೇಕಡಾ ಒಬಿಸಿಗಳು(ಶೂದ್ರರು), ಪರಿಶಿಷ್ಟ ಜಾತಿಗಳ, ಪರಿಶಿಷ್ಟ ಬುಡಕಟ್ಟುಗಳ ಜನರು ಮತ್ತು ಮುಸ್ಲಿಮರು ಒಟ್ಟಾಗಿ ಉಳಿದವನ್ನು ಹೊಂದಿದ್ದಾರೆ.

ಇದೀಗ ಅಮಾನವೀಯ ಅಸಮಾನತೆಯ ಅತ್ಯಂತ ನಿರಾಶಾದಾಯಕ ಸ್ಥಿತಿ. ನ್ಯಾಯಕ್ಕಾಗಿ ಹೋರಾಟ ಆರಂಭಿಸಲು ಈ ಸಾಮಾಜಿಕ ವ್ಯವಸ್ಥೆಯನ್ನು ಕಿತ್ತೊಗೆಯಬೇಕಾಗಿದೆ.

ಭಾರತದ ಇತಿಹಾಸದ ಪುನರ್ಲೇಖನದ ಅಜೆಂಡಾ ಇಂತಹ ಒಪ್ಪಿಕೊಳ್ಳಲಾಗದ ಮಟ್ಟಗಳ ಸಾಮಾಜಿಕ ದಮನವನ್ನು ಚಿರಸ್ಥಾಯಿಗೊಳಿಸಲಿಕ್ಕಾಗಿ, ಮತ್ತು ಅದರೊಂದಿಗೆ ಅವರು ಅಹಿಂದು ಎಂದು ಪರಿಗಣಿಸುವ ಯಾರಿಗೂ ಮೂಲಭೂತ ಮಾನವ ಹಕ್ಕುಗಳು ಸಿಗದಂತೆ ನಿರಾಕರಿಸಲಿಕ್ಕಾಗಿ ರೂಪಿಸಿರುವಂತದ್ದು. ಇದೀಗ ಭಾರತದ ಭವಿಷ್ಯದ ಅವರ ನೀಲನಕ್ಷೆ.

‘ಹಮಾಲರ ಬಡತನ ನೋವುಗಳಿಗೆ ಕಾರಣ ಹಣೆಬರಹ ಅಲ್ಲ – ಬೆವರಿಗೆ ತಕ್ಕ ಪ್ರತಿಫಲ ನೀಡದ ವ್ಯವಸ್ಥೆಯೇ ಅದಕ್ಕೆ ಹೊಣೆ’

ಗಂಗಾವತಿ– ರಾಜ್ಯ ಮಟ್ಟದ ಅಧ್ಯಯನ ಶಿಬಿರದಲ್ಲಿ ಪ್ರತಿಪಾದನೆ

ಮೌಢ್ಯತೆ, ಅನಕ್ಷರತೆ ಸಂಕೋಲೆಗಳ ಸುಳಿಯಲ್ಲಿ ಸಿಲುಕಿ ನರಳುವವರು ಹಮಾಲಿ ಕಾರ್ಮಿಕರು. ಅತ್ಯಂತ ಭಾರವಾದ ಮೂಟೆಗಳನ್ನು ಹೊರುವುದು, ಅದರಿಂದ ಬರುವ ಅಲ್ಪಸ್ವಲ್ಪ ಕೂಲಿಯಲ್ಲಿ ಹೇಗೋ ಬದುಕುವುದನ್ನು ‘ನಮ್ಮ ಹಣೆಬರಹ’ ಎಂದು ತಿಳಿದವರು ಅವರು. ಸಾಮಾಜಿಕವಾಗಿ, ಆರ್ಥಿಕವಾಗಿ ಅತೀವ ಸಂಕಷ್ಟಗಳನ್ನು ಅನುಭವಿಸುತ್ತಿರುವ ಅಸಂಘಟಿತ ಕಾರ್ಮಿಕರು ಹಮಾಲಿಗಳು. ಅಸಂಘಟಿತರ ನಡುವೆ ಸಹ ಸರಕಾರ ಹಾಗೂ ಸಮಾಜದಿಂದ ಅತ್ಯಂತ ನಿಷ್ಕಾಳಿಜಿಗೆ ಒಳಗಾದ ವಿಭಾಗ–ಬೆನ್ನ ಮೇಲೆ, ತಲೆಯ ಮೇಲೆ ಮಣ ಬಾರದ ಮೂಟೆ ಹೊರುವ ಈ ಹಮಾಲಿ ಕಾರ್ಮಿಕರು.

ರಾಜ್ಯದಲ್ಲಿ ಹತ್ತಾರು ವರ್ಷಗಳಿಂದ ಸ್ಥಳೀಯವಾಗಿ ಹಮಾಲರು ಬಹುತೇಕ ಕಡೆಗಳಲ್ಲಿ ಸಂಘಗಳನ್ನು ಕಟ್ಟಿಕೊಂಡಿದ್ದರು. ಅವು ಸ್ಥಳೀಯ ರಾಜಕೀಯ ವ್ಯಕ್ತಿಗಳಿಗೆ ಜಯಕಾರ ಹಾಕಲಿಕ್ಕೆ, ಜಾತ್ರೆ, ಹಬ್ಬಹರಿದಿನಗಳ ಆಚರಣೆಗಳಿಗೆ ಮಾತ್ರ ಸೀಮಿತವಾಗಿದ್ದವು. ಅವರ ಬದುಕಿನ ಪ್ರಶ್ನೆಗಳು, ಅವರ ಸ್ಥಿತಿಗತಿಗಳ ಹಿಂದಿರುವ ಆರ್ಥಿಕ ರಾಜಕೀಯ ಕಾರಣಗಳನ್ನು ಹುಡುಕಿಕೊಳ್ಳಲು, ಗುರುತಿಸಿಗೊಳ್ಳಲು ಅವರಿಗೆ ಸಾಮಾಜಿಕ ಭದ್ರತೆಯನ್ನು ಒದಗಿಸಲು ರಾಜ್ಯಮಟ್ಟದಲ್ಲಿ ಪರ್ಯಾಯವಾದ ಹೋರಾಟದ ಮುಖಾಂತರ ಸಂಘಟಿತರನ್ನಾಗಿಸುವ ಪ್ರಯತ್ನವನ್ನು ಸಿಐಟಿಯು ನೇತೃತ್ವದ ‘ಕರ್ನಾಟಕ ರಾಜ್ಯ ಹಮಾಲಿ ಕಾರ್ಮಿಕರ ಫೆಡರೇಶನ್’ ನಡೆಸುತ್ತಿದೆ. ಹಮಾಲಿ ಕಾರ್ಮಿಕರ ಫೆಡರೇಶನ್ ಹಲವು ವರ್ಷಗಳಿಂದ ಹತ್ತಾರು ಹೋರಾಟಗಳನ್ನು ನಡೆಸುತ್ತಾ ಬಂದಿದ್ದು ಹಮಾಲಿ ಕಾರ್ಮಿಕರಲ್ಲಿ ಮೌಢ್ಯತೆ, ಜಾತಿ ತಾರತಮ್ಯ ಭಾವನೆಗಳನ್ನು ನಿವಾರಿಸುವ ಹಾಗೂ ಅವರ ಬದುಕಿನ ನೈಜ ಪ್ರಶ್ನೆಗಳ ಆಧಾರದಲ್ಲಿ ಸಂಘಟಿತರಾಗುವ ಅಗತ್ಯದ ಕುರಿತು ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಮಾಡುತ್ತಿದೆ. ಈ ಹಿನ್ನೆಲೆಯಲ್ಲಿ ಇತ್ತೀಚಿಗೆ ಹುಬ್ಬಳ್ಳಿಯಲ್ಲಿ ನಡೆದ ಹಮಾಲಿ ಕಾರ್ಮಿಕರ ಫೆಡರೇಶನ್‌ನ 4ನೇ ರಾಜ್ಯ ಸಮ್ಮೇಳನದಲ್ಲಿ ಆಯ್ಕೆಯಾದ ನೂತನ ಪದಾಧಿಕಾರಿಗಳು, ರಾಜ್ಯ ಸಮಿತಿ ಸದಸ್ಯರಿಗೆ, ಮುಖ್ಯ ಕಾರ್ಯಕರ್ತರಿಗೆ ಗಂಗಾವತಿಯ ಎಪಿಎಂಸಿ ಸಮುದಾಯ ಭವನದಲ್ಲಿ ಕಳೆದ ಆಗಸ್ಟ್ 19–20, 2014 ರಂದು ಎರಡು ದಿನಗಳ ಕಾಲ, “ಶೋಷಣೆ ಹಾಗೂ ಮೌಢ್ಯತೆ ವಿರುದ್ಧ, ಹಕ್ಕುಗಳ ಅರಿವು, ಸಂಘಟನೆ ಮತ್ತು ಜಾಗೃತಿಗಾಗಿ” ಎಂಬ ಘೋಷಣೆಯಡಿ ಹಮಾಲಿ ಕಾರ್ಮಿಕ ಕಾರ್ಯಕರ್ತರ ರಾಜ್ಯ ಮಟ್ಟದ ಅಧ್ಯಯನ ಶಿಬಿರವನ್ನು ನಡೆಸಲಾಯಿತು.

‘ಬಿಜೆಪಿ, ಕಾಂಗ್ರೆಸ್ ಸರಕಾರಗಳು ಶ್ರೀಮಂತರನ್ನು ಮತ್ತಷ್ಟು ಶ್ರೀಮಂತರನ್ನಾಗಿಸಲು ಮುಂದಾಗುತ್ತಿವೆ. ಹೀಗಾಗಿ ಮೋದಿ ಸರಕಾರದಿಂದ ಬಡವರಿಗೆ ಒಳ್ಳೆದಾಗುತ್ತದೆಂದು ನಿರೀಕ್ಷಿಸಲಾಗದು. ದೇಶದಲ್ಲಿ ಶೇ. 90 ರಷ್ಟಿರುವ ಅಸಂಘಟಿತ ಕಾರ್ಮಿಕರ ಬೇಡಿಕೆಗಳ ಈಡೇರಿಕೆಗೆ ಪ್ರಾಮಾಣಿಕ ಪ್ರಯತ್ನಗಳು ನಡೆಯುತ್ತಿಲ್ಲ. ಕಾರ್ಮಿಕರು ಹೋರಾಟದ ಮುಖಾಂತರ ಗಳಿಸಿದ ಅಲ್ಪಸ್ವಲ್ಪ ಸೌಲತ್ತುಗಳು ಕೂಡ ಸರಿಯಾಗಿ ಜಾರಿಯಾಗುತ್ತಿಲ್ಲ. ನಮ್ಮ ರಾಜಕೀಯ ಪ್ರಜ್ಞೆಯನ್ನು ಹೆಚ್ಚಿಸಿಕೊಂಡು ಸಂಘಟಿತ ಹೋರಾಟ ಮಾಡಬೇಕಾದ ಅನಿವಾರ್ಯತೆ ಇದೆ. ನಮ್ಮಲ್ಲಿರುವ ಮೌಢ್ಯತೆ ಜಾತಿ ತಾರತಮ್ಯಗಳು ಸಂಘಟನೆಗೆ ತೊಡಕಾಗಿದ್ದು ಅವುಗಳನ್ನು ನಿವಾರಿಸಿಕೊಂಡು ಹೋರಾಟಕ್ಕೆ ಮುಂದಾಗೋಣ’ ಎಂದು ಹಮಾಲಿ ಕಾರ್ಮಿಕರ ಫೆಡರೇಶನ್ ರಾಜ್ಯಾಧ್ಯಕ್ಷ ಕೆ. ಮಹಾಂತೇಶ ಅಧ್ಯಯನ ಶಿಬಿರ ಉದ್ಘಾಟಿಸಿ ಮಾತನಾಡಿದರು. ಹಮಾಲಿ ಕಾರ್ಮಿಕರ ಫೆಡರೇಶನ್ ಜಿಲ್ಲಾಧ್ಯಕ್ಷ ಎ. ಹುಲಿಗೆಪ್ಪ ಅಧ್ಯಕ್ಷತೆ ವಹಿಸಿದ್ದರು. ಪದಾಧಿಕಾರಿಗಳಾದ ಎ.ಎಲ್.ತಿಮ್ಮಣ್ಣ, ನಿರುಪಾದಿ ಬೆಣಕಲ್, ಹನಮಂತಪ್ಪ ಜಾಲಗಾರ ಮುಂದಾದವರು ಉಪಸ್ಥಿತರಿದ್ದರು.



ಇತ್ತೀಚಿಗೆ ಸಿಐಟಿಯುನೊಂದಿಗೆ ಹಮಾಲಿ ಕಾರ್ಮಿಕರ ಫೆಡರೇಶನ್ ನಡೆಸಿದ ಯಶಸ್ವಿ ಹೋರಾಟದಿಂದಾಗಿ ಎಪಿಎಂಸಿ ಲೈಸೆನ್ಸ ಪಡೆದ 40 ಸಾವಿರ ಹಮಾಲಿ ಕಾರ್ಮಿಕರಿಗೆ ಸೌಲಭ್ಯಗಳನ್ನು ನೀಡಲು ಸರಕಾರ “ಕಾಯಕ ನಿಧಿ” ಸ್ಥಾಪನೆ ಮಾಡಿ ಬಜೆಟ್‌ನಲ್ಲಿ ಹಣ ನೀಡಿರುವದು ಸಿಐಟಿಯು ನೇತೃತ್ವದ ಹಮಾಲಿ ಕಾರ್ಮಿಕರ ಸಂಘಟನೆಯ ಬಹುದೊಡ್ಡ ಗೆಲವು. ಮಿಲ್, ಗೋಡೌನ್, ವೇರ್–ಹೌಸ್ ಹಾಗೂ ಬಜಾರ ಗ್ರಾಮೀಣ ಹಮಾಲಿ ಕಾರ್ಮಿಕರಿಗೆ ಕಾರ್ಮಿಕ ಕಾನೂನುಗಳ ಜಾರಿಗಾಗಿ ಹಾಗೂ ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯಿಂದ ಕೂಡಲೇ ಸೌಲಭ್ಯಗಳ ಜಾರಿಗಾಗಿ ಒತ್ತಾಯಿಸಿ 2014 ಸೆಪ್ಟೆಂಬರ್ 10 ರಿಂದ ಬೆಂಗಳೂರಿನ ಕಾರ್ಮಿಕ ಆಯುಕ್ತರ ಕಚೇರಿ ಕಾರ್ಮಿಕ ಭವನದ ಮುಂದೆ ಹಗಲು ರಾತ್ರಿ ಅನಿರ್ಧಿಷ್ಟಾವಧಿಯ ಧರಣಿ ಸತ್ಯಾಗ್ರಹ ನಡೆಸಲು ತೀರ್ಮಾನಿಸಿದ್ದು ಈ ಹೋರಾಟದ ಯಶಸ್ವಿಗೆ ವ್ಯಾಪಕ ತಯಾರಿಗಳನ್ನು ಮಾಡಬೇಕೆಂದು ರಾಜ್ಯ ಪ್ರಧಾನ ಕಾರ್ಯದರ್ಶಿ ಮಹೇಶ ಪತ್ತಾರ ಹೇಳಿದರು.



ಪ್ರಸ್ತುತ ರಾಜಕೀಯ ಹಾಗೂ ಹಮಾಲಿ ಕಾರ್ಮಿಕರ ಮುಂದಿರುವ ಸವಾಲುಗಳು ಕುರಿತು ಜನಶಕ್ತಿ ವಾರಪತ್ರಿಕೆಯ ಅಂಕಣ–ಕಾರ ಎಸ್.ವೈ. ಗುರುಶಾಂತ, ಕಾರ್ಮಿಕ ವರ್ಗದ ಸಿದ್ಧಾಂತದ ಪರಿಚಯವನ್ನು ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘದ ರಾಜ್ಯಾ ಧ್ಯಕ್ಷ ನಿತ್ಯಾನಂದಸ್ವಾಮಿ, ಸಿಐಟಿಯು ಉದ್ದೇಶ ಗುರಿ ಕುರಿತು ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಎಸ್. ಪ್ರಸನ್ನ ಕುಮಾರರವರು ನಡೆಸಿಕೊಟ್ಟ ಪಾಠಗಳು ಹಮಾಲಿ ಕಾರ್ಮಿಕ ಮುಖಂಡರಲ್ಲಿ ಹೊಸ ಪ್ರಶ್ನೆಗಳನ್ನು ಹುಟ್ಟುಹಾಕುವುದರೊಂದಿಗೆ ಅವರಲ್ಲಿ ಉತ್ತಮ ಅರಿವು ಮೂಡಿಸಿದವು.

ಪವಾಡ ರಹಸ್ಯ ಬಯಲು

ದೇವರು, ದೆವ್ವ, ಸಂಪ್ರದಾಯ, ಅಮಾನುಷ ಶಕ್ತಿ ಹೆಸರಿನಲ್ಲಿ ಜನರಿಗೆ ಮಂಕುಬೂದಿ ಎರಚಿ ಅವರನ್ನು ಅಂಧಕಾರಕ್ಕೆ ತಳ್ಳುವ ಪವಾಡಗಳನ್ನು ಹಮಾಲಿ ಕಾರ್ಮಿಕರ ಎದುರು ಸಾಕ್ಷಾತ್ ಮಾಡಿ ತೋರಿಸಿ ಅದರ ಹಿಂದೆ ಇರುವ ರಹಸ್ಯವನ್ನು ಬಿಚ್ಚಿಡಲಾಯಿತು. ಅಧ್ಯಯನ ಶಿಬಿರದ ಭಾಗವಾಗಿ ನಡೆದ ಈ ಕಾರ್ಯಕ್ರಮದಲ್ಲಿ ಶಿಕ್ಷಕ ಶೇಖರ ನಾಯ್ಕ ಮತ್ತು ತಂಡದವರು ಅಸಲಾಂ ಬಾಬಾನ ಬರಿಗೈ ಸರ್ಜರಿ, ಮೈಮೇಲೆ ದೇವರು ಬರುವುದು, ಜಲಶೋಧ, ಬೆಂಕಿ ಹಚ್ಚಿಕೊಳ್ಳುವುದು, ಭವಿಷ್ಯವನ್ನು ನಿರ್ಧರಿಸುವ ಹಲವು ಪವಾಡಗಳನ್ನು ಮಾಡಿ ತೋರಿಸಿದರು. ಸಮಾಜದಲ್ಲಿ ನಡೆಯುವ ಇಂಥ ಮೌಢ್ಯತೆ, ಕಂದಾಚಾರಗಳನ್ನು ವೈಜ್ಞಾನಿಕವಾಗಿ ಅರ್ಥೈಸಿಕೊಳ್ಳುವ ಮನೋಭಾವವನ್ನು ಬೆಳೆಸಿಕೊಳ್ಳಬೇಕೆಂದು ತಿಳಿಸಲಾಯಿತು.

ಅಧ್ಯಯನ ಶಿಬಿರದ ಪ್ರಾಚಾರ್ಯರಾಗಿ ಎನ್.ಕೆ. ಸುಬ್ರಮಣ್ಯ, ನಾಗಪ್ಪ ನಾಯ್ಕ, ಎಚ್. ತಿಪ್ಪಯ್ಯ, ಗುರುಸಿದ್ದಪ್ಪ ಅಂಬಿಗೇರ, ತಿಪ್ಪೇಸ್ವಾಮಿ ಪಾಠಗಳ ನಿರೂಪಣೆ ಮಾಡಿದರು. ಪ್ರಧಾನ ಕಾರ್ಯದರ್ಶಿಗಳು ಮಂಡಿಸಿದ ಸಂಘಟನಾ ವರದಿ ಮೇಲೆ ಚರ್ಚೆ ನಡೆಸಲಾಯಿತು. 13 ಜಿಲ್ಲೆಗಳಿಂದ 112 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

– ಮಹೇಶ ಪತಾರ









'ಸ್ವಾತಂತ್ರ್ಯದ 67 ವರ್ಷಗಳ ನಂತರವೂ ಬಡವರು ತುಂಡು ಭೂಮಿಗಾಗಿ ಬಡಿದಾಡಬೇಕಿದೆ.'

– ವಸಂತ ಆಚಾರಿ

ಸುನಿಲ್ ಕುಮಾರ್ ಬಜಾಲ್

ದೇಶಕ್ಕೆ ಸ್ವಾತಂತ್ರ್ಯ ದೊರೆತು 67 ವರ್ಷಗಳು ಕಳೆದರೂ ಇಂದಿಗೂ ಬಡವರಿಗೆ ಭೂಮಿ ಸಿಕ್ಕಿಲ್ಲ. ತುಂಡು ಭೂಮಿಗಾಗಿ ಜೀವನ ಪರ್ಯಂತ ಹೋರಾಟ ನಡೆಸಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದೆ. ನಮ್ಮನ್ನಾಳುವ ಸರಕಾರಗಳು ಶ್ರೀಮಂತರಿಗೆ ಹಾಗೂ ಬಹುರಾಷ್ಟ್ರೀಯ ಕಂಪನಿಗಳಿಗೆ ಸಾವಿರಾರು ಎಕರೆ ಭೂಮಿಯನ್ನು ಉಚಿತವಾಗಿ ನೀಡುತ್ತವೆಯೇ ಹೊರತು ಬಡವರಿಗೆ ನಿವೇಶನ ನೀಡಲು ತಯಾರಿಲ್ಲ. ಸಾವಿರಾರು ಅರ್ಜಿಗಳು ಸಂಬಂಧಪಟ್ಟ ಕಛೇರಿಗಳಲ್ಲಿ ಕೊಳೆಯುತ್ತಿದ್ದರೂ ಕನಿಷ್ಟ ನಿವೇಶನರಹಿತರ ಪಟ್ಟಿಯನ್ನು ಮಾಡಲು ಸ್ಥಳೀಯ ಸಂಸ್ಥೆಗಳು ತಯಾರಿಲ್ಲ. ವಿಪರೀತ ಬೆಲೆ ಏರಿಕೆ ಹಾಗೂ ಆರ್ಥಿಕ ಸಮಸ್ಯೆಗಳಿಂದಾಗಿ ಸ್ವಂತ ಮನೆಯಿಲ್ಲದೆ ಬಾಡಿಗೆ ಮನೆಯಲ್ಲಿ ವಾಸಿಸುತ್ತಿರುವವರ ಪಾಡು ಹೇಳತೀರದಾಗಿದೆ. ಬಡವರಿಗೆ ಮನೆ ನಿವೇಶನ ನೀಡಬೇಕಾದ ಕೇಂದ್ರ ಹಾಗೂ ರಾಜ್ಯ ಸರಕಾರಗಳು ಉತ್ಸುಕತೆ ತೋರಿಸುತ್ತಿಲ್ಲ. ಬದಲಾಗಿ ತೀರಾ ನಿರ್ಲಕ್ಷ್ಯ ವಹಿಸುತ್ತಿವೆ. ಇಂತಹ ಜನ ವಿರೋಧಿ ಸರಕಾರಗಳ ವಿರುದ್ಧ ನಿವೇಶನರಹಿತರ ಪ್ರಬಲ ಹೋರಾಟ ಬೆಳೆದು ಬರಬೇಕಾಗಿದೆ ಎಂದು ಸಿಪಿಐ(ಎಂ) ದಕ್ಷಿಣ ಕನ್ನಡ ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ವಸಂತ ಆಚಾರಿಯವರು ಹೇಳಿದರು.



ಅವರು ಸೆಪ್ಟೆಂಬರ್ 28, 2014 ಮಂಗಳೂರು ನಗರದ ಎನ್.ಜಿ.ಓ. ಹಾಲ್‌ನಲ್ಲಿ ಜರುಗಿದ ಮಂಗಳೂರು ನಗರ ಮಟ್ಟದ ನಿವೇಶನ ರಹಿತರ ಸಮಾವೇಶವನ್ನು ಉದ್ಘಾಟಿಸುತ್ತಾ ಈ ಮಾತುಗಳನ್ನು ಹೇಳಿದರು.

ಮುಂದುವರೆದು ಮಾತನಾಡುತ್ತಾ ಅವರು ನಮ್ಮನ್ನಾಳುವ ಸರಕಾರಗಳು ವಿವಿಧ ವಸತಿ ಯೋಜನೆಗಳ ಹೆಸರುಗಳನ್ನು ಜನತೆಗೆ ಪರಿಚಯಿಸುತ್ತಿವೆಯೇ ಹೊರತು ವಸತಿ ನೀಡುವಲ್ಲಿ ಮುಂದಾಗುತ್ತಿಲ್ಲ. ಬಡವರಿಗೆ ಭೂಮಿ ನೀಡುವ ವಿಷಯವು ಇಂದು ತೀರಾ ಅಪ್ರಸ್ತುತವೆಂದು ಹೇಳುವ ಬಿಜೆಪಿ, ಕಾಂಗ್ರೆಸ್ ಜನರನ್ನು ಹೋರಾಟದ ಪಥದಿಂದ ಹಿಂದೆ ಸರಿಸುವ ಷಡ್ಯಂತ್ರ ರೂಪಿಸುತ್ತಿವೆ ಎಂದು ಹೇಳಿದರು.

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕೆ. ಆರ್. ಶ್ರೀಯಾನ್‌ರವರು ಸ್ವಾತಂತ್ರ್ಯ ಪೂರ್ವದಿಂದಲೇ ಕಮ್ಯುನಿಸ್ಟ್ ಪಕ್ಷವು ನಡೆಸಿದ ಭೂಮಿ ಹೋರಾಟದ ಪರಂಪರೆಯನ್ನು ವಿವರಿಸುತ್ತಾ, ಸ್ವಾತಂತ್ರ್ಯ ಸಿಕ್ಕಿದ ಬಳಿಕವೂ ದೇಶದಲ್ಲಿ ಭೂಸುಧಾರಣೆ ಕಾನೂನು ಜಾರಿಯಾಗಲು ಕಮ್ಯುನಿಸ್ಟ್ ಪಕ್ಷ ವಹಿಸಿದ ಪಾತ್ರವನ್ನು ಹಾಗೂ ಅದರ ಮಹತ್ವವನ್ನು ವಿವರಿಸಿದರು.

ಪ್ರಾಸ್ತವಿಕ ಮಾತುಗಳನ್ನಾಡಿದ ಸಿಪಿಐ(ಎಂ) ನಗರ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್‌ರವರು ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ನಿವೇಶನ ರಹಿತರ ಸಮಸ್ಯೆ ತೀರಾ ಗಂಭೀರವಾಗಿದ್ದು ಈ ಬಗ್ಗೆ ಕಳೆದ ಹಲವಾರು ವರ್ಷಗಳಿಂದ ಅನೇಕ ಬಾರಿ ಹೋರಾಟ ನಡೆಸಿದರೂ ಪಾಲಿಕೆ ಆಡಳಿತವು ಇನ್ನೂ ಎಚ್ಚೆತ್ತುಕೊಂಡಿಲ್ಲ. ಕಳೆದ 20 ವರ್ಷಗಳಲ್ಲಿ ಮಂಗಳೂರಿನಲ್ಲಿ ತುಂಡು ಭೂಮಿಯನ್ನೂ ಕೂಡಾ ಬಡವರಿಗೆ ನೀಡಲಾಗಿಲ್ಲ. ಈ ಬಗ್ಗೆ ವಿಚಾರಿಸಿದರೆ ಹಾರಿಕೆ ಉತ್ತರ ಸಿಗುತ್ತದೆಯೇ ಹೊರತು ಇನ್ನೂ ಕೂಡಾ ನಿವೇಶನರಹಿತರ ಪಟ್ಟಿ ಸಿದ್ದಪಡಿಸಿಲ್ಲ. ಕಳೆದ ಸಂದರ್ಭದಲ್ಲಿ ನಿವೇಶನರಹಿತರಿಂದ ಅರ್ಜಿ ಸ್ವೀಕರಿಸಿದ ಅಂದಿನ ಉಸ್ತುವಾರಿ ಸಚಿವರಾದ ಪಾಲೆಮಾರ್‌ರವರು, ಬಳಿಕ ಅದನ್ನು ಕಸದ ಡಬ್ಬಿಗೆ ಎಸೆದಿರುವುದನ್ನು ನೆನಪಿಸಬೇಕಾಗಿದೆ. ಈ ಮೂಲಕ ನಿವೇಶನರಹಿತರ ಹೋರಾಟವನ್ನು ದಾರಿ ತಪ್ಪಿಸಲು ಪ್ರಯತ್ನಿಸುವ ಸ್ಥಾಪಿತ ಹಿತಾಸಕ್ತಿಗಳ ವಿರುದ್ಧ ಪ್ರಬಲ ಹೋರಾಟ ನಡೆಸಬೇಕಾಗಿದೆ ಎಂದು ಹೇಳಿದರು.

ಸಭೆಯನ್ನು ಉದ್ದೇಶಿಸಿ ಸಿಪಿಐ(ಎಂ)ನ ಕಾರ್ಪೊರೇಟರ್ ದಯಾನಂದ ಶೆಟ್ಟಿ, ಮಾಜಿ ಕಾರ್ಪೊರೇಟರ್ ಜಯಂತಿ ಬಿ. ಶೆಟ್ಟಿಯವರು ಮಾತನಾಡಿದರು. ಸಭೆಯ ಅಧ್ಯಕ್ಷತೆಯನ್ನು ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜೆ. ಬಾಲಕೃಷ್ಣ ಶೆಟ್ಟಿಯವರು ವಹಿಸಿದ್ದರು.

ಸಮಾವೇಶವು ನಿವೇಶನರಹಿತರ ಹಲವಾರು ಸಂಕಷ್ಟಗಳ ಬಗ್ಗೆ ಗಂಭೀರವಾಗಿ ಚರ್ಚಿಸಿ ಮುಂದಿನ ದಿನಗಳಲ್ಲಿ ನಿವೇಶನ ಸಿಗುವವರೆಗೆ ನಿರಂತರ ಹೋರಾಟ ನಡೆಸುವ ಬಗ್ಗೆ ನಿರ್ಣಯ ಕೈಗೊಳ್ಳಲಾಯಿತು ಹಾಗೂ ಸಮಾವೇಶವು 'ನಿವೇಶನರಹಿತ ಹೋರಾಟ ಸಮಿತಿ'ಯನ್ನು ಆಯ್ಕೆ ಮಾಡಿತು.

ಹೋರಾಟ ಸಮಿತಿ ಪದಾಧಿಕಾರಿಗಳು

ಸಮಾವೇಶವು ನಿವೇಶನ ರಹಿತರ ನೂತನ ಹೋರಾಟ ಸಮಿತಿಯನ್ನು ರಚಿಸಿತು. ಅಧ್ಯಕ್ಷರಾಗಿ ಪ್ರೇಮನಾಥ್ ಜಲ್ಲಿಗುಡ್ಡೆ, ಪ್ರಧಾನ ಕಾರ್ಯದರ್ಶಿಯಾಗಿ ಸಂತೋಷ್ ನೀತಿನಗರ ಹಾಗೂ ಖಜಾಂಚಿಯಾಗಿ ಮನೋಜ್ ಉರ್ವಸ್ಟೋರ್‌ರವರು ಸರ್ವಾನುಮತದಿಂದ ಆಯ್ಕೆಗೊಂಡರು.

ಉಪಾಧ್ಯಕ್ಷರಾಗಿ ಕೃಷ್ಣಪ್ಪ ಕೊಂಚಾಡಿ, ಮಂಜುಳಾ ಶೆಟ್ಟಿ, ರೋಹಿಣಿ ಜಲ್ಲಿಗುಡ್ಡೆ, ಲಿಂಗಪ್ಪ ನಂತೂರು ಕಾರ್ಯದರ್ಶಿಗಳಾಗಿ ಯೋಗೀಶ್ ಜಪ್ಪಿನಮೊಗರು, ಥೋಮಸ್ ನಂತೂರು, ಲೋಕೇಶ್ ಎಂ.ರವರನ್ನು ಆರಿಸಲಾಯಿತು. ಕಾರ್ಯಕಾರಿ ಸಮಿತಿ ಸದಸ್ಯರಾಗಿ ಮಂಗಳೂರು ನಗರದ ವಿವಿಧ ಪ್ರದೇಶದಿಂದ 40 ಮಂದಿ ಆಯ್ಕೆಗೊಂಡರು. ●

ಬಿಜಾಪುರ : ಗ್ರಾಮ ಪಂಚಾಯತಿ ನೌಕರರ ಖಾಯಮಾತಿಗಾಗಿ ಅನಿರ್ದಿಷ್ಟಾವಧಿ ಧರಣಿ



ತಮ್ಮ ಸೇವೆಯ ಖಾಯಮಾತಿ ಸೇರಿದಂತೆ ವಿವಿಧ ಬೇಡಿಕೆಗಳನ್ನು ಒತ್ತಾಯಿಸಿ ಗ್ರಾಮ ಪಂಚಾಯತಿ ನೌಕರರು ಸೆಪ್ಟೆಂಬರ್ 29, 2014 ರಂದು ಬಿಜಾಪುರದಲ್ಲಿ ಬೃಹತ್ ಪ್ರತಿಭಟನೆ ಮೆರವಣಿಗೆ ನಡೆಸಿ ಅನಿರ್ದಿಷ್ಟಾವಧಿ ಪ್ರತಿಭಟನೆ ಆರಂಭಿಸಿದರು.

ಶ್ರೀ ಸಿದ್ದೇಶ್ವರ ದೇವಾಲಯದಿಂದ ಆರಂಭವಾದ ಬೃಹತ್ ಪ್ರತಿಭಟನಾ ಮೆರವಣಿಗೆಯು ಗಾಂಧಿ ಸರ್ಕಲ್, ಬಸವೇಶ್ವರ ಸರ್ಕಲ್, ಅಂಬೇಡ್ಕರ ಸರ್ಕಲ್ ಸೇರಿದಂತೆ ಬಿಜಾಪುರದ ನಗರದ ಮುಖ್ಯ ಬೀದಿಗಳಲ್ಲಿ ಹಾಯ್ದು ನಂತರ ಜಿಲ್ಲಾಧಿಕಾರಿಗಳ ಕಚೇರಿ ಮುಂದೆ ಧರಣಿ ಪ್ರತಿಭಟನಾ ಧರಣ ನಡೆಸಲಾಯಿತು.

ಅಪರ ಜಿಲ್ಲಾಧಿಕಾರಿ ಕವಿತಾ ಮನ್ನಿಕೇರಿ ಸ್ಥಳಕ್ಕೆ ಬಂದು ಗ್ರಾಮ ಪಂಚಾಯತ್ ನೌಕರರ 8 ಬೇಡಿಕೆಗಳನ್ನು ರಾಜ್ಯ ಸರ್ಕಾರಕ್ಕೆ ಕಳಿಸುತ್ತೇವೆ. ನಮ್ಮ ಜಿಲ್ಲೆಯ ಆರು ಬೇಡಿಕೆಗಳು ಈಡೇರಿಸುವಂತೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸೂಚಿಸಲಾಗುವುದು ಎಂದು ಹೇಳಿ ಮನವಿ ಪತ್ರ ಸ್ವೀಕರಿಸಿದರು.

ನಂತರ ಮೆರವಣಿಗೆಯು ಬಾಗೇವಾಡಿ ರಸ್ತೆಯಿಂದ ಜಿಲ್ಲಾ ಪಂಚಾಯಿಗೆ ತೆರಳಿತು. ಅಲ್ಲಿಯೂ ಪ್ರತಿಭಟನಾ ಧರಣಿ ನಡೆಸಲಾಯಿತು.

ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಗ್ರಾಮ ಪಂಚಾಯತಿ ನೌಕರರ ಸಂಘದ ಉಪಾಧ್ಯಕ್ಷರಾದ ಭೀಮಶಿ ಕಲಾದಗಿ ಮಾತನಾಡಿ, ಗ್ರಾಮೀಣ ಅಭಿವೃದ್ಧಿ ಸಚಿವರು ವಿಧಾನಸಭೆಯಲ್ಲಿ 27 ಸಾವಿರ ಸಿಬ್ಬಂದಿಯನ್ನು ಖಾಯಂಗೊಳಿಸುತ್ತೇವೆಂದು ಘೋಷಣೆ ಮಾಡಿದ್ದರು. ಆ ಪ್ರಕಾರ ನಡೆದುಕೊಳ್ಳದೆ ಅನುಮೋದನೆ ಆದವರಿಗೆ ಮಾತ್ರ ಖಾಯಂ ಅಂತ ಆದೇಶ ಮಾಡಿದ್ದು ಈ ಆದೇಶದಲ್ಲಿ ಸೇವೆಯನ್ನು ಪರಿಗಣಿಸಿಲ್ಲ. ಇದು ಅನ್ಯಾಯ. ತಕ್ಷಣ ಸೇವೆಯನ್ನು ಪರಿಗಣಿಸಿ ಖಾಯಂಗೊಳಿಸಬೇಕೆಂದು ಒತ್ತಾಯಿಸಿದರು. ನೌಕರರಿಗೆ ಹೊಸ ವೇತನ ಜಾರಿಮಾಡಿಲ್ಲ, ವಿದ್ಯಾರ್ಹತೆ ಹಾಗೂ ಮೀಸಲಾತಿ ಆದೇಶವನ್ನು ತಿದ್ದುಪಡಿ ಮಾಡಿ 1994ರ ಆದೇಶದ ಪ್ರಕಾರ ಎಲ್ಲರಿಗೂ ಅನ್ವಯಿಸಬೇಕೆಂದು ಒತ್ತಾಯಿಸಿದರು.

ಸುರೇಖಾ ರಜಪೂತ ಜನವಾದಿ ಮಹಿಳಾ ಸಂಘದ ಮುಖಂಡರು ಮಾತನಾಡಿ, ಸರ್ಕಾರ ಹೊಸ ವೇತನ ಜಾರಿಮಾಡಿಲ್ಲ. ಎರಡು ವರ್ಷದಿಂದ ಕೆಲವೆಡೆ ವೇತನ ಕೊಟ್ಟಿಲ್ಲ. ಶೀಘ್ರವೇ ಅದನ್ನು ಬಿಡುಗಡೆ ಮಾಡಬೇಕೆಂದು ಒತ್ತಾಯಿಸಿದರು.

ನಂತರ ಉಪಕಾರ್ಯದರ್ಶಿ ಡಾ. ಕಾಮತ್ ಹಾಗೂ ಎಂ.ಎನ್.ಕಲ್ಬುರ್ಗಿ, ಶಿರಸ್ತೆದಾರರು ಇವರು ಸ್ಥಳಕ್ಕೆ ಆಗಮಿಸಿದರು. ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ವೈ.ಎಸ್.ತಳವಾರ ಇವರು ರಾಜ್ಯದ 8 ಬೇಡಿಕೆಗಳು ಹಾಗೂ ಜಿಲ್ಲೆಯ 6 ಬೇಡಿಕೆಗಳನ್ನು ಓದಿ ಹೇಳಿ ಮನವಿ ಪತ್ರ ಸಲ್ಲಿಸಿದರು.

ಇಬ್ಬರು ಅಧಿಕಾರಿಗಳು ಮನವಿ ಪತ್ರವನ್ನು ಸ್ವೀಕರಿಸಿ ನಾಳೆಯೇ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಬರುತ್ತಾರೆ. ಈ ಬೇಡಿಕೆಗಳನ್ನು ಸಹನೆಯಿಂದ ಪರಿಶೀಲಿಸಿ ಚರ್ಚಿಸಿ ಇದರ ಬಗ್ಗೆ ಉತ್ತರ ಕೊಡುತ್ತೇವೆ ಎಂದು ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಜಿಲ್ಲಾಧ್ಯಕ್ಷರಾದ ಶ್ರೀಶೈಲ ಜಾಲಗೇರಿ, ರಾಜ್ಯ ಸಮಿತಿ ಸದಸ್ಯರಾದ ವಿಠ್ಠಲ ಹೊನಮೋರೆ, ಜಿಲ್ಲಾ ಖಜಾಂಚಿಯಾದ ಸಂಗಪ್ಪ ಸೀತಿಮನಿ, ರಾಜು ಜಾಧವ, ಎಂ.ಕೆ. ಗುಡಿಮನಿ, ಸಂಗು ನಾಲ್ಕಮನ, ರಂಗಪ್ಪ ದಳವಾಯಿ, ಚಿದಾನಂದ ತಳವಾರ, ಶರಣಪ್ಪ ಕೊಂಡಗೂಳಿ ಮುಂತಾದವರು ಭಾಗವಹಿಸಿದ್ದರು. ಅನಿರ್ದಿಷ್ಟ



ಧರಣಿ ಸತ್ಯಾಗ್ರಹ ಮುಂದುವರೆಯುತ್ತಿದೆ.

– ವೈ.ಎಸ್. ತಳವಾರ

'ಎಲ್ಲ ಮಹಿಳೆಯರ ಮನದ ಭಾಷೆ ಒಂದೇ' – ಪ್ರೊ. ಮಾಲಿನಿ ಭಟ್ಟಾಚಾರ್ಯ



ಮಹಿಳೆಯರು ಯಾವುದೇ ಧರ್ಮ, ಜಾತಿ, ಭಾಷೆ, ಪ್ರದೇಶದವರಾಗಲೀ ಬಹುತೇಕರ ಸಮಸ್ಯೆಗಳೂ ಒಂದೇ ಆಗಿರುತ್ತವೆ. ನಿರ್ದಿಷ್ಟ ಸಮುದಾಯಗಳ ಮಹಿಳೆಯರಲ್ಲಿ ಕೆಲವು ಭಿನ್ನ ಸಮಸ್ಯೆಗಳಿರಬಹುದು. ಆದರೆ ಮಹಿಳೆಯರೆಲ್ಲರೂ ಒಟ್ಟಾಗಿದ್ದರೆ ಮಾತ್ರ ಶೋಷಣೆಯ ವಿರುದ್ಧದ ಹೋರಾಟಕ್ಕೆ ಸಮಗ್ರತೆ ಮತ್ತು ಶಕ್ತಿ ಬರುತ್ತದೆ ಎಂದು ಜನವಾದಿ ಮಹಿಳಾ ಸಂಘಟನೆಯ ರಾಷ್ಟ್ರ ಘಟಕದ ಅಧ್ಯಕ್ಷೆ ಪ್ರೊ. ಮಾಲಿನಿ ಭಟ್ಟಾಚಾರ್ಯ ಪ್ರತಿಪಾದಿಸಿದರು.

ಕೋಲಾರ ನಗರದ ಟಿ. ಚೆನ್ನಯ್ಯ ರಂಗಮಂದಿರದಲ್ಲಿ ಸೆಪ್ಟೆಂಬರ್ 17, 2014 ರಂದು ಜನವಾದಿ ಮಹಿಳಾ ಸಂಘಟನೆಯು ಏರ್ಪಡಿಸಿದ್ದ 'ಮಹಿಳೆಯರ ವಿರುದ್ಧದ ಹಿಂಸೆಯ ಬೇರು – ಪರಿಹಾರಗಳು' ಕುರಿತ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಮಾತನಾಡಿದ ಅವರು, ಮಹಿಳೆಯರು ಬೇರೆ ಬೇರೆ ಪ್ರದೇಶ, ಜಾತಿ, ಧರ್ಮಕ್ಕೆ ಸೇರಿರಬಹುದು. ಭಿನ್ನ ಭಾಷೆಗಳನ್ನು ಬಳಸಬಹುದು. ಆದರೆ ಅವರ ಮನದ ಭಾಷೆ ಒಂದೇ. ಅವರು ಎದುರಿಸುತ್ತಿರುವ ಶೋಷಣೆಯ ಸ್ವರೂಪವೂ ಒಂದೇ. ಹೀಗಾಗಿ ಮಹಿಳೆಯರೆಲ್ಲರೂ ಶೋಷಣೆಯ ವಿರುದ್ಧದ ಹೋರಾಟದ ಆಶಯಕ್ಕಾಗಿ ಒಂದುಗೂಡಬೇಕು ಎಂದರು.

ಎಲ್ಲರ ಮನೆಗಳಲ್ಲೂ ನಡೆಯುವ ಕೌಟುಂಬಿಕ ದೌರ್ಜನ್ಯದಲ್ಲಿ ನರಳುವವಳು ಹೆಣ್ಣು. ಕಚೇರಿಯಲ್ಲಿ ಲೈಂಗಿಕ ಕಿರುಕುಳಕ್ಕೆ ಒಳಗಾಗುವವಳು ಹೆಣ್ಣು. ರಸ್ತೆಯಲ್ಲಿ, ಶಾಲೆ, ಕಾಲೇಜುಗಳಲ್ಲಿ ಕೆಟ್ಟ–ದೃಷ್ಟಿಗೆ ವಸ್ತುವಾಗುವವಳು ಹೆಣ್ಣು. ಈ ಶೋಷಣೆಗಳಿಗೆ ಜಾತಿ, ಧರ್ಮ, ಭಾಷೆ, ಪ್ರದೇಶದ ಭೇದವಿಲ್ಲ ಎಂಬುದನ್ನು ಮಹಿಳೆಯರು ಅರಿಯಬೇಕಾಗಿದೆ. ಆಗ ಮಾತ್ರ ಮಹಿಳೆಯರು ಒಗ್ಗೂಡಿ ಬಲವಾದ ಹೋರಾಟವನ್ನು ರೂಪಿಸಬಹುದು ಎಂದರು.

ಒಗ್ಗಟ್ಟಿನ ಹೋರಾಟವನ್ನು ಹಮ್ಮಿಕೊಳ್ಳುವ ಸಂದರ್ಭದಲ್ಲಿ, ಸಂಘಟನೆಯು ವಿವಿಧ ಜಾತಿ, ಪ್ರದೇಶ, ಸಮುದಾಯಗಳಿಗೆ ಸೇರಿದ ಮಹಿಳೆಯರು ಅದೇ ಕಾರಣಕ್ಕಾಗಿ ವಿಶೇಷವಾಗಿ ಎದುರಿಸುವ ಸಮಸ್ಯೆ, ದೌರ್ಜನ್ಯಗಳನ್ನು ಕೂಡ ಸಂಘಟನೆಯು ವಿಶೇಷವಾಗಿ ಪರಿಗಣಿಸಬೇಕಾಗುತ್ತದೆ ಎಂದು ಅವರು ಪ್ರತಿಪಾದಿಸಿದರು.

ಉದ್ಯೋಗ ಖಾತ್ರಿ:

ಉದ್ಯೋಗ ಖಾತ್ರಿ ಯೋಜನೆಯಲ್ಲಿ ಈಗ ನೀಡಲಾಗುತ್ತಿರುವ ವಾರ್ಷಿಕ 100 ದಿನದ ಕೆಲಸವನ್ನು 200 ದಿನಕ್ಕೆ ಹೆಚ್ಚಿಸಿದರೆ ಮಹಿಳಾ ಸಮುದಾಯಕ್ಕೆ ಹೆಚ್ಚು ನೆರವಾಗುತ್ತದೆ ಎಂದು ಆಂಧ್ರಪ್ರದೇಶದಲ್ಲಿ ನಡೆದ ಸಮಾವೇಶದಲ್ಲಿ ಅಲ್ಲಿನ ಮಹಿಳೆಯರು ಅಭಿಪ್ರಾಯಪಟ್ಟಿದ್ದಾರೆ. ಆದರೆ ಕೇಂದ್ರ ಸರ್ಕಾರ ಕೆಲಸದ ಪ್ರಮಾಣವನ್ನು ಕುಗ್ಗಿಸಲು ಹೊರಟಿರುವುದು ವಿಷಾದನೀಯ ಎಂದರು.

'ಸಂಖ್ಯೆ ಮುಖ್ಯವಲ್ಲ'

ಮೇ ತಿಂಗಳ ಒಂದೇ ದಿನದಲ್ಲಿ ಕೋಲಾರ ಜಿಲ್ಲೆಯಲ್ಲಿ ಹತ್ತಿರ ಹತ್ತಿರ ಸುಮಾರು 30 ಸಾವಿರ ಮಹಿಳೆಯರು ಸಂಘದ ಸದಸ್ಯರಾಗಿ ನೋಂದಣಿಯಾಗಿರುವುದು ಮೆಚ್ಚಬೇಕಾದ ವಿಷಯ. ಆದರೆ ಅದು ಅಷ್ಟಕ್ಕೇ ನಿಲ್ಲಬಾರದು. ಸದಸ್ಯರಾದವರನ್ನು ಅವರು ಇರುವ ಕಡೆ ಹಾಗೇ ಸುಮ್ಮನಿರುವುದಕ್ಕೆ ಬಿಟ್ಟರೆ ಸದಸ್ಯತ್ವದಿಂದ ಪ್ರಯೋಜನವಾಗುವುದಿಲ್ಲ. ಅವರೆಲ್ಲರನ್ನೂ ಹೋರಾಟಕ್ಕೆ ಸಜ್ಜುಗೊಳಿಸುವ ಕೆಲಸ ಆಗಬೇಕು ಎಂದು ಸಲಹೆ ನೀಡಿದರು.

ಪ್ರಾಸ್ತಾವಿಕ ಮಾತನಾಡಿದ ಸಂಘಟನೆಯ ರಾಜ್ಯ ಘಟಕದ ಅಧ್ಯಕ್ಷೆ ವಿ. ಗೀತಾ, ಬರಗಾಲ ಪೀಡಿತ ಜಿಲ್ಲೆಯಲ್ಲಿ ಎಲ್ಲರಿಗಿಂತ ಮೊದಲು ಸಮಸ್ಯೆಗೆ ತುತ್ತಾಗುವವಳು ಮಹಿಳೆ. ಆ ಸಮುದಾಯದಲ್ಲಿ ಜಾಗೃತಿ ಮೂಡಿಸುವ ಸಲುವಾಗಿಯೇ ಸಂಘಟನೆಯು ಸದಸ್ಯತ್ವ ಆಂದೋಲನವನ್ನು ಹಮ್ಮಿಕೊಳ್ಳಲಾಗಿತ್ತು. ಈಗ ಪ್ರತಿ ಹಳ್ಳಿಯಲ್ಲೂ ಸಂಘಟನೆಯ ಮಹಿಳೆಯರು ತಮ್ಮ ಹಕ್ಕುಗಳಿಗಾಗಿ ಪ್ರಬಲ ಹೋರಾಟಗಳನ್ನು ರೂಪಿಸುತ್ತಿದ್ದಾರೆ ಎಂದರು.

ದಲಿತ ಮುಖಂಡ ಮು. ತಿಮ್ಮಯ್ಯ, ಕರ್ನಾಟಕ ದಲಿತ ಸಂಘರ್ಷ ಸಮಿತಿ ರಾಜ್ಯ ಕಾರ್ಯದರ್ಶಿ ಪಂಡಿತ್ ಮುನಿವೆಂಕಟಪ್ಪ, ಜನವಾದಿ ರಾಜ್ಯ ಸಮಿತಿ ಉಪಾಧ್ಯಕ್ಷೆ ಕೆ.ಎಸ್. ವಿಮಲಾ, ಮುಖಂಡರಾದ ಎಂ.ವಿ. ನಾರಾಯಣಸ್ವಾಮಿ ಮಾತನಾಡಿದರು. ರಾಧಾಮಣಿ, ಕೆ. ವಾಸುದೇವರೆಡ್ಡಿ, ಹರೀಶ್, ಸುಶೀಲಾ, ಗೌರಮ್ಮ ಮತ್ತು ಜಿ. ಅರ್ಜುನನ್ ಮುಂತಾದವರು ವೇದಿಕೆಯಲ್ಲಿದ್ದರು.

ಬೀದಿ ಬದಿ ವ್ಯಾಪಾರಿಗಳ ಎತ್ತಂಗಡಿ :

ಬಿ.ಬಿ.ಎಂ.ಪಿ. ಕಚೇರಿ ಎದುರು ಪ್ರದರ್ಶನ

ಬೆಂಗಳೂರು ನಗರದ ನಾನಾ ಪ್ರದೇಶಗಳಲ್ಲಿನ ಬೀದಿ ಬದಿ ವ್ಯಾಪಾರಿಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ – ಬಿ.ಬಿ.ಎಂ.ಪಿ. ಯು ತೆರವುಗೊಳಿಸುತ್ತಿದೆ. ಯಾವುದೇ ಪರ್ಯಾಯ ವ್ಯವಸ್ಥೆ ಮಾಡದೇ ಸೂಕ್ತ ಮುನ್ನೆಚ್ಚರಿಕೆಯೂ ಇಲ್ಲದೇ ನಡೆಯುತ್ತಿರುವ ಈ ಎತ್ತಂಗಡಿ ಕ್ರಮ ಅಮಾನವೀಯವಾಗಿದೆ. ಈ ಹಿನ್ನೆಲೆಯಲ್ಲಿ ಇದೇ ಸೆಪ್ಟೆಂಬರ್ 18 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಎದುರು ಬೀದಿ 'ಬದಿ ವ್ಯಾಪಾರಿಗಳ ಸಂಘ'ವು ಪ್ರದರ್ಶನ ನಡೆಸಿ ಪಾಲಿಕೆಯ ಜಂಟಿ ಆಯುಕ್ತರಿಗೆ ಮನವಿ ಸಲ್ಲಿಸಿತು.

ಬಿ.ಬಿ.ಎಂ.ಪಿ.ಯು ಬೆಂಗಳೂರಿನ ಕುರುಬರಹಳ್ಳಿ ಪ್ರದೇಶದ ಪೈಪ್‌ಲೈನ್‌ನಲ್ಲಿರುವ ಕಾವೇರಿ ನಗರ ಒಳಗೊಂಡಂತೆ ಬಿ.ಬಿ.ಎಂ.ಪಿ.ಯ



ಬೆಂಗಳೂರು



ಬೆಂಗಳೂರು

ವ್ಯಾಪ್ತಿಯ ಸಾರಕ್ಕಿ, ಪದ್ಮನಾಭನಗರ, ಕಾಮಾಕ್ಷಿಪಾಳ್ಯ, ಉತ್ತರಹಳ್ಳಿ, ಭುವನೇಶ್ವರಿನಗರ, ಕೆ.ಆರ್.ಪುರಂ ಮುಂತಾದ ಪ್ರದೇಶಗಳಲ್ಲಿ ಬೀದಿ ಬದಿ ವ್ಯಾಪಾರಸ್ಥರನ್ನು ತೆರವುಗೊಳಿಸುತ್ತಿದೆ. ಇದರಿಂದಾಗಿ ಸಾವಿರಾರು ಜನರ ಜೀವನಕ್ಕೆ ತೀವ್ರ ತೊಂ ದರೆಯಾಗಿದೆ.

ಬಿಬಿಎಂಪಿಯು ಉಲ್ಲೇಖಿಸುತ್ತಿರುವ ಒಳಗಾಗಿ ಪುಟ್ ಪಾತ್‌ಗಳಲ್ಲಿ ಅಸ್ತಿತ್ವದಲ್ಲಿರುವ ಅನಧಿಕೃತ, ತಾತ್ಕಾಲಿಕ ಅಥವಾ ಕಾಯಂ ಒತ್ತುವರಿಗಳು ಕಟ್ಟಡ ಮತ್ತು ಅಡಚಣೆಗಳನ್ನು ತೆರವುಗೊಳಿಸಲು ಆದೇಶಿಸಲಾಗಿದೆ.

ಆದರೆ ಈ ನಡುವೆ ರಾಷ್ಟ್ರದ ಸಂಸತ್ತು 1.5.2014 ರಲ್ಲಿ ಬೀದಿ ಬದಿ ಮಾರಾಟಗಾರರ ಜೀವಾನಾಧಾರ ರಕ್ಷಣೆ ಮತ್ತು 'ಬೀದಿ ಬದಿ ಮಾರಾಟ ನಿಯಂತ್ರಣ ಕಾಯ್ದೆ–2014' ನ್ನು ಅಂಗಿಕರಿಸಿದೆ. ಸದರಿ ಕಾಯ್ದೆಯು ರಾಜ್ಯ ಉಚ್ಚ ನ್ಯಾಯಾಲಯದ ಮೇಲಿನ 23.4.2013 ರ ನಿರ್ದೇಶನ ನಂತರ ರೂಪಿಸಲಾಗಿರುವ ಕಾಯ್ದೆ ಆಗಿದೆ. ಸದರಿ ಕಾಯ್ದೆಯಂತೆ ಬೀದಿ ಬದಿ ಮಾರಾಟಗಾರರ ಜೀವಾನಧಾರ ಸಂರಕ್ಷಣೆಗೆ ಮತ್ತು ಬೀದಿ ಬದಿ ಮಾರಾಟ ನಿಯಂತ್ರಣ–ಕ್ಕೆ ವಹಿಸಬೇಕಾಗಿರುವ ಕ್ರಮಗಳ ಕುರಿತು ಶಾಸನಾತ್ಮಕ ವಿಧಿಗಳನ್ನು ವಿಧಿಸಿದೆ. ಅದರಂತೆ ಸದರಿ ಕಾಯ್ದೆಯಡಿಯ ನಿಯಾಮಾವಳಿಗಳನ್ನು ಕೇಂದ್ರ ಹಾಗು ರಾಜ್ಯ ಸರ್ಕಾರಗಳು ರೂಪಿಸಬೇಕಾಗಿದೆ. ಆ ರೀತಿ ರೂಪಿತವಾಗುವ ನಿಯಮಾವಳಿಗಳನ್ನು ಅನುಸರಿಸಿ ಬಿ.ಬಿ.ಎಂ.ಪಿ. ಯನ್ನು ಒಳಗೊಂಡಂತೆ ಎಲ್ಲಾ ಸ್ಥಳೀಯ ಆಡಳಿತಗಳು 'ಸ್ಟ್ರೀಟ್ ವೆಂಡಿಂಗ್ ಕಮಿಟಿ'ಗಳನ್ನು ರಚಿಸಬೇಕಿದೆ. ಸದರಿ ಸಮಿತಿಗಳಲ್ಲಿ ಚರ್ಚಿಸಿ ಸ್ಥಳೀಯ ಆಡಳಿತ ಅಡಿಯ ಪ್ರದೇಶವನ್ನು Vending Zone, NES, Vendable Zone, & Non Vending Zone, ಎಂದು ವಿಂಗಡಿಸಿ ಅಧಿಸೂಚಿಸ ಬೇಕಿದೆ.



ಮಂಗಳೂರು



ಮಂಗಳೂರು

ಕರ್ನಾಟಕ ಉಚ್ಚ ನ್ಯಾಯಾಲಯದ ನಿರ್ದೇಶನವನ್ನು ನೀಡಲಾಗಿರುವುದು 23/04/2013 ರಂದು. ಸದರಿ ನಿರ್ದೇಶನದಲ್ಲಿ ಕರ್ನಾಟಕ ಮುನಿಸಿಪಲ್ ಕಾಯ್ದೆ 1976ರ ಕಲಂ 288(ಡಿ) ಅಡಿಯ ಅಧಿಕಾರವನ್ನು ಚಲಾಯಿಸಿ ಯಾವುದೇ ತಿಳುವಳಿಕೆ ನೀಡದೆ 3 ತಿಂಗಳ ಆನಂತರ ಬೀದಿ ಬದಿ ಮಾರಾಟಗಾರರಿಗೆ ಕಾಯ್ದೆ ಅನುಸಾರ ಅಗತ್ಯ ಪರವಾನಿಗೆಯನ್ನು ನೀಡಬೇಕಿದೆ. ಅದುವರೆವಿಗೆ ಯಾವುದೇ ಬೀದಿ ಬದಿ ಮಾರಾಟಗಾರರನ್ನು ತೆರವುಗೊಳಿಸುವುದು ಶಾಸನಾತ್ಮಕವಾಗಿ ನ್ಯಾಯಯುತವಾದ ಕ್ರಮವಾಗುವುದಿಲ್ಲ.

ಬೀದಿ ಬದಿ ವ್ಯಾಪಾರಿಗಳನ್ನು ತೆರವುಗೊಳಿಸಬೇಕೆಂಬುದು ಆಯುಕ್ತರು ಹೊರಡಿಸಿರುವ ಕಛೇರಿ ಆದೇಶವು ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಆಕ್ಟ್ 1976 ರ ಪ್ರಕಾರ ಇದ್ದು ಅದು ಅಪ್ರಸ್ತುತವಾದ ಕಾನೂನಾಗಿರುತ್ತದೆ. ಏಕೆಂದರೆ, ಸಂಸತ್ತು ಅಂಗೀಕರಿಸುವ ಶಾಸನವು ರಾಜ್ಯ ಶಾಸನಗಳ ಮೇಲೆ ಸಂವಿಧಾನ್ಮಕವಾಗಿ ಮೇಲುಗೈ ಪಡೆಯುತ್ತದೆ. ಆದಕಾರಣ ಸಂಸತ್ತು ಅಂಗೀಕರಿಸಿರುವ ಬೀದಿ ಬದಿ ಮಾರಾಟಗಾರರ ಜೀವಾನಾಧಾರ ಸಂರಕ್ಷಣೆ ಮತ್ತು ಬೀದಿ ಬದಿ ನಿಯಂತ್ರಣ ಕಾಯ್ದೆ 2014 ರ ಅಂಶವನ್ನು ಮಾನ್ಯ ಉಚ್ಚ ನ್ಯಾಯಾಲಯದ ಗಮನಕ್ಕೆ ತಂದು ಕಾಯ್ದೆ ಅನುಸಾರ ಕ್ರಮ ವಹಿಸಲು ಬಿಬಿಎಂಪಿ ಮುಂದಾಗಬೇಕಿದೆ. ಬಿ.ಬಿ.ಎಂ.ಪಿ. ನೀಡಿರುವ ಕಛೇರಿ ಆದೇಶವನ್ನು ಹಿಂಪಡೆದು ಹಾಲಿ ವ್ಯಾಪಾರಸ್ಥರನ್ನು ತೆರವುಗೊಳಿಸುತ್ತಿರುವುದನ್ನು ಈ ಕೂಡಲೇ ನಿಲ್ಲಿಸಬೇಕೆಂದು ಬೀದಿ ಬದಿ ವ್ಯಾಪಾರಿಗಳ ಸಂಘದ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಸೆಪ್ಟೆಂಬರ್ 18, 2014 ರಂದು ಬೆಳಗ್ಗೆ ನಡೆದ ಈ ಪ್ರತಿಭಟನೆಯಲ್ಲಿ ಸಂಘಟನೆಯ ಗೌರವ ಅಧ್ಯಕ್ಷರಾದ ಕೋದಂಡರಾಮು, ಅ ಧ್ಯಕ್ಷರಾದ ಬಸಮ್ಮ, ಉಪಾಧ್ಯಕ್ಷರುಗಳಾದ ಸಿ.ಎನ್. ಶ್ರೀನಿವಾಸ್, ರುದ್ರಮೂರ್ತಿ, ಪಾರ್ಥಿಬನ್, ಪ್ರಧಾನ ಕಾರ್ಯದರ್ಶಿ ಟಿ.ಎಮ್.ರಾಮಕೃಷ, ಜಂಟಿ ಕಾರ್ಯದರ್ಶಿಗಳಾದ ನಾಗರಾಜು, ಕರಿಯಪ್ಪ, ಟಿ.ಎನ್. ಮಂಜುನಾಥ್, ಸಂಘಟನಾ ಕಾರ್ಯದರ್ಶಿ ಬಿ.ಎನ್.ರಘು, ಖಜಾಂಚಿ ವೀರಮಣಿ ಮುಂತಾದವರು ಪಾಲ್ಗೊಂಡಿದ್ದರು.

ನಿಮಗೆ 'ಜನಶಕ್ತಿ' ಸರಿಯಾಗಿ ತಲುಪುತ್ತಿಲ್ಲವೆ? ನಿಮಗೇನಾದರೂ ದೂರುಗಳಿವೆಯೇ? ಹೀಗೆ ಮಾಡಿ

'ಜನಶಕ್ತಿ ಕನ್ನಡ ವಾರ ಪತ್ರಿಕೆ'ಯ ಆಡಳಿತ ಮತ್ತು ಪ್ರಸಾರ ನಿರ್ವಹಣೆಯ ಜವಾಬ್ದಾರಿ ಬದಲಾವಣೆಯಾಗಿ ಈಗಾಗಲೇ ಬಹಳ ದಿನಗಳಾಗಿವೆ. ಆದರೂ ಜನಶಕ್ತಿಯ ನಿರಂತರ ಓದುಗರಾದ ಹಲವರು ಈಗಲೂ ಜನಶಕ್ತಿಯ ಚಂದಾ ನೀಡಿಕೆ, ಹಣಕಾಸು ಇತ್ಯಾದಿ ವಿಷಯಗಳಿಗೆ ಸಂಬಂಧಿಸಿ ಜನಶಕ್ತಿಯ ಸಂಪಾದಕೀಯ ವಿಭಾಗದ ಸಂಗಾತಿಗಳನ್ನು ಸಂಪರ್ಕಿಸುವುದು, ಸಂಪಾದಕೀಯ ವಿಭಾಗಕ್ಕೆ ಮಾಹಿತಿ ಕಳುಹಿಸುವುದು ನಡದೇ ಇದೇ. ದಯಮಾಡಿ ಸಂಗಾತಿಗಳು ಜನಶಕ್ತಿಯಲ್ಲಿ ಆಗಿರುವ ಬದಲಾವಣೆಯನ್ನು ಗಮನಕ್ಕೆ ತೆಗೆದುಕೊಳ್ಳಬೇಕೆಂದು ವಿನಂತಿ.

ಹೊಸ ಚಂದಾಗಳ ನೀಡಿಕೆ, ವಿಳಾಸ ಬದಲಾವಣೆ, ಪತ್ರಿಕೆ ತಲುಪದಿರುವ ಬಗೆಗಿನ ದೂರುಗಳು, ಏಜೆನ್ಸಿದಾರರ ಪತ್ರಿಕೆಗಳ ಹೆಚ್ಚಳ, ಬಾಕಿ ವಿಚಾರಣೆ, ಹಣ ಪಾವತಿ, ದೂರುಗಳು ಹಾಗೂ ಜಾಹಿರಾತುಗಳಿಗೆ ಸಂಬಂಧಿಸಿದ ಎಲ್ಲ ವ್ಯವಹಾರ, ವಿಚಾರಣೆ ಇತ್ಯಾದಿಗಳನ್ನು ಇನ್ನು ಮುಂದೆ ಈ ಕೆಳಗಿನ ವಿಳಾಸದಲ್ಲೇ ಮಾಡುವುದು. ಕಚೇರಿಯ ನೇರ ಸಂಪರ್ಕವು ಕಛೇರಿ ಕಾರ್ಯ ನಿರ್ವಹಿಸುವ ನಿರ್ದಿಷ್ಟ ಅವಧಿಯಲ್ಲಿ ಮಾತ್ರ ಲಭ್ಯವಿರುತ್ತದೆ ಎಂಬುದನ್ನು ಗಮನಿಸ ತಕ್ಕದ್ದು.

ವಿಳಾಸ :
'ಜನಶಕ್ತಿ' ಆಡಳಿತ ಕಚೇರಿ, c/o. ಕ್ರಿಯಾ ಪ್ರಕಾಶನ, ಸೂರಿ ಭವನ, # 40/5, 2ನೇ 'ಬಿ' ಮೈನ್, 16ನೇ ಕ್ರಾಸ್, ಸಂಪಂಗಿರಾಮನಗರ, ಬೆಂಗಳೂರು–560027, email : janashakthi13.admn@gmail.com
Phone : 22234369

ಹೆಚ್.ಆರ್.ಸವಿತ ರಾಣಿ : 9483966467
ಜಿ.ಚಂದ್ರಶೇಖರ್ : 9448578021 (ಕಾರ್ಯಾಲಯದ ಸಮಯ: ಬೆಳಿಗ್ಗೆ 10.00 ರಿಂದ ಸಂಜೆ 6.00 ಗಂಟೆವರೆಗೆ)

ಸಕಲೇಶ್ವರ ಬಗರ್ ಹುಕುಂ ಸಾಗುವಳಿದಾರರ ಯಶಸ್ವಿ ಸಮಾವೇಶ

'ಬಗರ್‌ಹುಕುಂ ಸಾಗುವಳಿದಾರರ ಸಮಸ್ಯೆಯನ್ನು ಬಗೆಹರಿಸಲು ಅಧಿಕಾರದಲ್ಲಿದ್ದಾಗ ಯಾವ ರಾಜಕೀಯ ಪಕ್ಷಗಳು ಪ್ರಾಮಾಣಿಕ ಪ್ರಯತ್ನ ಮಾಡದೆ ಈಗ ಸಾಗುವಳಿದಾರರ ಪರ ನಾವಿದ್ದೇವೆ ಎಂಬ ಮಾತುಗಳನ್ನಾಡುತ್ತಿದ್ದಾರೆ.' ಎಂದು ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಅಧ್ಯಕ್ಷರಾದ ಮಾರುತಿ ಮಾನ್ಪಡೆಯವರು ಕಟುವಾಗಿ ಟೀಕಿಸಿದರು. ಕರ್ನಾಟಕ ಪ್ರಾಂತ ರೈತ ಸಂಘದ ಸಕಲೇಶಪುರ ತಾಲ್ಲೂಕು ಸಮಿತಿ ಕುನಿಗನಹಳ್ಳಿಯಲ್ಲಿ ಆಯೋಜಿಸಿದ್ದ ಬಗರ್‌ಹುಕುಂ ಸಾಗುವಳಿದಾರರ ಭೂ ಸಮಾವೇಶವನ್ನು ಉದ್ಘಾಟಿಸಿ ಮಾತನಾಡುತ್ತಿದ್ದ ಅವರು ರಾಜ್ಯದಲ್ಲಿ ಲಕ್ಷಾಂತರ ಬಡ ಸಾಗುವಳಿದಾರರು ಬಗರ್‌ಹುಕುಂ ಸಾಗುವಳಿಯನ್ನು ನಡೆಸಿಕೊಂಡು ಕೃಷಿ ಚಟುವಟಿಕೆಯಲ್ಲಿ ತೊಡಗಿಕೊಂಡಿದ್ದಾರೆ. ಇಂತಹ ಬಡ ರೈತರಿಗೆ ಭೂಮಿಯನ್ನು ನೀಡಬೇಕಾದ ಸರ್ಕಾರ ರಾಜ್ಯ ಉಚ್ಚನ್ಯಾಯಾಲಯಕ್ಕೆ ಬಡ ಸಾಗುವಳಿದಾರರು ಭೂಗಳ್ಳರೆಂದು ಅಫಿಡವಿಟ್ ಸಲ್ಲಿಸಿ ಬಡ ರೈತರನ್ನು ಒಕ್ಕಲೆಬ್ಬಿಸಲು ನೋಟೀಸ್ ಜಾರಿಮಾಡುತ್ತಿರುವುದು ರೈತ ವಿರೋಧಿಯಾಗಿದೆ ಎಂದು ಖಂಡಿಸಿದರು.

ದೇವರಾಜ ಅರಸುರವರ ಉತ್ತರಾಧಿಕಾರಿ ತಾನು ಎಂಬಂತೆ ಮಾತನಾಡುವ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ನಿಜವಾಗಿಯೂ ಬಡವರ ಬಗ್ಗೆ ಕಾಳಜಿ ಇದ್ದರೆ ಕೂಡಲೇ ಸುಗ್ರೀವಾಜ್ಞೆಯನ್ನು ಹೊರಡಿಸಿ ಕಾನೂನಿಗೆ ತಿದ್ದುಪಡಿ ತಂದು ನ್ಯಾಯಾಲಯಕ್ಕೆ ಪ್ರತ್ಯೇಕ ಪ್ರಮಾಣ ಪತ್ರ ಸಲ್ಲಿಸಬೇಕೆಂದು ಆಗ್ರಹಿಸಿದರು.

ರಾಜ್ಯದಲ್ಲಿ ಬಗರ್ ಹುಕುಂ ಸಾಗುವಳಿ ಮಾಡಿಕೊಂಡು ಸರ್ಕಾರವೇ ನಿಗದಿಪಡಿಸಿದ್ದ ಅರ್ಜಿ ನಮೂನೆ 50 ಮತ್ತು 53 ರ ಅಡಿಯಲ್ಲಿ ಸಕ್ರಮಕ್ಕಾಗಿ ಅರ್ಜಿಸಲ್ಲಿಸಿದವರ ಒಟ್ಟು ಸಂಖ್ಯೆ 21,84,913. ಇವರು ಸಾಗುವಳಿ ಮಾಡುತ್ತಿರುವ ಭೂಮಿಯ ವಿಸ್ತೀರ್ಣ 52,09,661 ಎಕರೆ. ಇದರಲ್ಲಿ ಒಟ್ಟು 12,35,822 ಅರ್ಜಿಗಳನ್ನು ಸಕಾರಣ ನೀಡದೆ ತಿರಸ್ಕರಿಸಲಾಗಿದೆ. ಮತ್ತು 4,28,411 ಅರ್ಜಿಗಳನ್ನು ಬಾಕಿ ಉಳಿಸಿಕೊಳ್ಳಲಾಗಿದೆ. ಅಂದರೆ ಇದರ ಅರ್ಥ ಸುಮಾರು 16 ಲಕ್ಷಕ್ಕೂ ಹೆಚ್ಚು ಜನ ಬಗರ್‌ಹುಕುಂ ಸಾಗುವಳಿದಾರರು ಸರ್ಕಾರದ





ಮುಂದೆ ಸಕ್ರಮಕ್ಕಾಗಿ ಅರ್ಜಿ ಸಲ್ಲಿಸಿ ಕಾಯುತ್ತಿದ್ದಾರೆ. ಸರ್ಕಾರ ಇವರಿಗೆ ಭೂಮಿ ನೀಡದಿದ್ದರೆ ಇವರೆಲ್ಲರೂ ಬೀದಿಪಾಲಾಗಲಿದ್ದಾರೆ ಎಂದರು.

ಸಕಲೇಶಪುರ ತಾಲ್ಲೂಕಿನ ಸಂಪೂರ್ಣ ವಹಿವಾಟು ಬಗರ್‌ಹುಕುಂ ಸಾಗುವಳಿದಾರರು ಮತ್ತು ಅರಣ್ಯ ಒತ್ತುವರಿದಾರರ ಮೇಲೆ ಅವಲಂಬಿತವಾಗಿದ್ದು ಸಾಗುವಳಿ ಭೂಮಿಯನ್ನು ಉಳಿಸಿಕೊಳ್ಳುವುದು ತಾಲ್ಲೂಕಿನ ಜನರ ಬದುಕಿನ ಪ್ರಶ್ನೆಯಾಗಿದೆ. ಆದ್ದರಿಂದ ರೈತರು ಒಗ್ಗಟ್ಟಾಗುವ ಮೂಲಕ ದೃಢವಾದ ಹೋರಾಟವನ್ನು ನಡೆಸಬೇಕಾದ ಅನಿವಾರ್ಯತೆ ಇದೆ ಎಂದರು.

ಕರ್ನಾಟಕ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ಬಗರ್‌ಹುಕುಂ ಸಾಗುವಳಿದಾರರನ್ನು ಉಳಿಸುವ ಸಲುವಾಗಿ ಅಕ್ಟೋಬರ್ 13, 2014 ರಿಂದ ಬೆಂಗಳೂರಿನ ವಿಧಾನ ಸೌಧದ ಎದುರು ಅನಿರ್ದಿಷ್ಟಾವಧಿ ಧರಣಿ ಸತ್ಯಾಗ್ರಹವನ್ನು ನಡೆಸಲು ನಿರ್ಧರಿಸಲಾಗಿದ್ದು, ರೈತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಕರೆ ನೀಡಿದರು.

1964 ರ ಕರ್ನಾಟಕ ಭೂ ಕಂದಾಯ ಕಾಯ್ದೆ ಸೆಕ್ಷನ್ 95(7) ಕ್ಕೆ ತಿದ್ದುಪಡಿ ತಂದು ರೈತರಿಗೆ ಭೂಮಿಯನ್ನು ನೀಡುವ ಜನಪರ ಭೂ ಸುಧಾರಣಾ ಕಾನೂನನ್ನು ಅನುಷ್ಠಾನಕ್ಕೆ ತಂದರೆ ಮಾತ್ರ ರಾಜ್ಯದಲ್ಲಿರುವ ಲಕ್ಷಾಂತರ ಬಡ ಬಗರ್ ಹುಕುಂ ಸಾಗುವಳಿದಾರರ ಬದುಕು ಹಸನಾಗುತ್ತದೆ. ಇಲ್ಲದಿದ್ದರೆ ರಾಜ್ಯದ ಕೃಷಿ ಬಿಕ್ಕಟ್ಟು ಮತ್ತಷ್ಟು ಹೆಚ್ಚಾಗುತ್ತದೆ. ಸರ್ಕಾರದ ಮೇಲೆ ಒತ್ತಡ ತರುವ ಹೋರಾಟಗಳ ಜೊತೆಗೆ ಪ್ರಾಂತ ರೈತ ಸಂಘದಿಂದ ರೈತರಿಂದಲೇ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸುವ ಮೂಲಕ ಕಾನೂನಿನ ಹೋರಾಟವನ್ನು ನಡೆಸಲಾಗುವುದು ಎಂದರು.

ಸಮಾವೇಶದ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಸಂಚಾಲಕರಾದ ಎಚ್.ಆರ್.ನವೀನ್‌ಕುಮಾರ್ ಮಾತನಾಡಿ ಮಾಜಿ ಮುಖ್ಯ ಮಂತ್ರಿಗಳಾದ ಯಡಿಯೂರಪ್ಪನವರು ಹಾಸನಕ್ಕೆ ಬಂದು ಬಗರ್‌ಹುಕುಂ ಸಾಗುವಳಿದಾರರ ಪರ ಮಾತನಾಡಿದ್ದಾರೆ. ಆದರೆ ದುರಂತವೇನೆಂದರೆ ಇವರೇ ಮುಖ್ಯ ಮಂತ್ರಿಯಾಗಿದ್ದಾಗ ಈ ರೈತರನ್ನು ಉಳಿಸುವ ನಿಟ್ಟಿನಲ್ಲಿ ಕಿಂಚಿತ್ತು ಗಮನವನ್ನು ಸಹ ಕೊಡಲಿಲ್ಲ ಎಂದರು. ಜಿಲ್ಲೆಯಲ್ಲಿ ಲಕ್ಷಾಂತರ ರೈತರು ಸಾಗುವಳಿಯ ಸಕ್ರಮಕ್ಕಾಗಿ ಅರ್ಜಿಗಳನ್ನು ಸಲ್ಲಿಸಿ ಕಾಯುತ್ತಿರುವಾಗ ಸರ್ಕಾರದ ನೋಟೀಸ್ ಅಘಾತಕಾರಿಯಾಗಿ ಎರಗಿದೆ. ಇದನ್ನು ಸಮರ್ಥವಾಗಿ ಎದುರಿಸಬೇಕಾದರೆ ರೈತರು ಒಗ್ಗಟ್ಟಾಗಿ ಹೋರಾಟವನ್ನು ಮಾಡುವುದು ಬಿಟ್ಟು ಬೇರೆ ದಾರಿ ಇಲ್ಲ ಎಂದರು.

ಸಮಾವೇಶದ ಅಧ್ಯಕ್ಷತೆಯನ್ನು ಕರ್ನಾಟಕ ಪ್ರಾಂತ ರೈತ ಸಂಘದ ಸಕಲೇಶಪುರ ತಾಲ್ಲೂಕು ಅಧ್ಯಕ್ಷರಾದ ಕೆ.ಎಲ್.ಶಂಕರ್ ವಹಿಸಿದ್ದರು. ತಾಲ್ಲೂಕು ಕಾರ್ಯದರ್ಶಿಗಳಾದ ವಿರುಪಾಕ್ಷರವರು ಸ್ವಾಗತಿಸಿದರು.

–ಎಚ್.ಆರ್.ಎನ್.

ಅಂಗಾರಕ .. ಅಮಂಗಳ ಎಂಬ ಮೂಢನಂಬಿಕೆ ಇತ್ಯಾದಿ ..

ಪ್ರತಿಯೊಂದು ಧರ್ಮದಲ್ಲಿಯೂ ಗ್ರಹಗಳ ಕುರಿತಾಗಿ ಮೂಢನಂಬಿಕೆಗಳು, ಪುರಾಣಗಳು ದಟ್ಟವಾಗಿ ಹಬ್ಬಿವೆ.

ಹಿಂದೂ ಪುರಾಣದ ಪ್ರಕಾರ, ಮಂಗಳನನ್ನು ಅಂಗಾರಕ ಎಂದು ಕರೆಯುತ್ತಾರೆ. ಕೈಲಾಸ ಪರ್ವತದಲ್ಲಿ ಶಿವನು ಧ್ಯಾನದಲ್ಲಿ ಮಗ್ನನಾಗಿದ್ದಾಗ ಅವನ ಹಣೆಯಲ್ಲಿ ಮೂಡಿದ ಮೂರು ಹನಿ ಬೆವರು ಭೂಮಿಗೆ ಬೀಳುವಾಗ ಕೆಂಪು ಬಣ್ಣದ ನಾಲ್ಕು ಕೈಗಳನ್ನು ಹೊಂದಿರುವ ಮಗುವಾಗಿತ್ತಂತೆ. ಆದ್ದರಿಂದ ಇವನು ಭೂಮಿಯ ಮಗ, ಯುದ್ಧಗಳ ದೇವತೆ! ಪಾರ್ವತಿ ಈ ಮಗುವನ್ನು ಬಿಗಿಯಾಗಿ ಬಿಗಿದಪ್ಪಿದ್ದರಿಂದ ಒಂದೇ ದೇಹದಲ್ಲಿ ಆರು ಮುಖಗಳಾಗಿ, ಹನ್ನೆರಡು ಕೈಗಳಾದವು. ಇವನೇ ಷಣ್ಮುಖ.

ಭಾರತದ ಜ್ಯೋತಿಷ್ಯಶಾಸ್ತ್ರದಲ್ಲಿ 'ಮಂಗಳ ದೋಷ' ಎಂಬುದಾಗಿ ಹೇಳಿ ಹಲವು ಗಂಡಾಂತರ ಆರೋಪಿಸಲಾಗುತ್ತದೆ ಮತ್ತು ಪರಿಹಾರಗಳನ್ನು ಸೂಚಿಸಲಾಗುತ್ತದೆ. ಜ್ಯೋತಿಷ್ಯ ವೇಳಾಪಟ್ಟಿಯಲ್ಲಿ ಮಂಗಳನು 1, 2, 4, 7, 8, ಅಥವಾ 8ನೇ 'ಮನೆ ಪ್ರವೇಶಿಸಿರುವ ಸಮಯ'ದಲ್ಲಿ ಹುಟ್ಟಿದ ವ್ಯಕ್ತಿಯನ್ನು 'ಮಂಗಳೀಕ' ಎಂದು ಕರೆಯುತ್ತಾರೆ. ಈ ವ್ಯಕ್ತಿಗೆ ಮದುವೆಯು ಅಮಂಗಳಕರವಾಗಿದ್ದು, ವಿವಾಹ ಸಂಬಂಧದಲ್ಲಿ ಬಿರುಕು ಉಂಟಾಗಿ ಜೀವನದಲ್ಲಿ ದೊಡ್ಡ ಕಷ್ಟಗಳು ಉಂಟಾಗುತ್ತವೆ ಎನ್ನುತ್ತಾರೆ. ಅಲ್ಲದೆ ದಂಪತಿಗಳಿಬ್ಬರೂ ಮಂಗಳೀಕರಾಗಿದ್ದಲ್ಲಿ ಎರಡೂ ಕೆಟ್ಟ ಅಂಶಗಳು ಪರಸ್ಪರ ರದ್ದಾಗುತ್ತವೆ ಎನ್ನುತ್ತಾರೆ! ಬಾಳೆ ಮರ ಅಥವಾ ವಿಷ್ಣುವಿನ ವಿಗ್ರಹವನ್ನು ಮಂಗಳೀಕ ಮದುವೆಯಾದರೆ ಅದನ್ನು 'ಕುಂಭ್ ವಿವಾಹ್' ಎಂದು ಕರೆಯುವುದಿದ್ದು, ಮಂಗಳೀಕನಿಗೆ ಉಂಟಾದ ವಿವಾಹ ಸಂಕಷ್ಟವನ್ನು ಇದರಿಂದ ಪರಿಹರಿಸಬಹುದಂತೆ!



ಮಂಗಳ ಗ್ರಹದಿಂದ ಬಂದಿಳಿದಿರುವ ಅನ್ಯಗ್ರಹ ಜೀವಿಗಳು ಭೂಮಿಯ ಮೇಲೆ ಧಾಳಿಯಿಟ್ಟಿದ್ದು ಈಗಾಗಲೇ ನ್ಯೂಯಾರ್ಕ್ ನಗರವನ್ನು ವಶಕ್ಕೆ ತೆಗೆದುಕೊಂಡಿವೆ ಎಂದು 1938 ರಲ್ಲಿ ಪೋರ್ಚುಗಲ್ ದೇಶದ ನಗರವೊಂದರ ರೇಡಿಯೋ ಕೇಂದ್ರವೊಂದು ಬಿತ್ತರಿಸಿತ್ತು. ಇದರಿಂದ ಇಡೀ ನಾಗರೀಕರು ಭಯಭೀತರಾಗಿ ದಿಕ್ಕಾಪಾಲಾಗಿದ್ದರು.!!

ಇಂತಹ ಅನೇಕ ವಿಷಯಗಳಿವೆ. ಆದರೆ ಈಗ ಭಾರತದ ಉಪಗ್ರಹ ಮಂಗಳನ ಕಕ್ಷೆ ಸೇರಿ, ಮಂಗಳನ ಮೇಲೆ ಇಳಿದು ಸಂಶೋಧನೆ ನಡೆಸುತಿರುವ ಹೊತ್ತಲ್ಲಾದರೂ ಮಂಗಳ ಗ್ರಹದ ಬಗೆಗೆ ಇರುವ ಅನಗತ್ಯ ಭೀತಿ, ತಪ್ಪು ಕಲ್ಪನೆ ಹೋಗಲಾಡಿಸುವ ಪ್ರಯತ್ನ ನಡೆಯಬೇಕು. ಈ ನಿಟ್ಟಿನಲ್ಲಿ ನಮ್ಮ ದೂರದರ್ಶನ ಚಾನೆಲ್‌ಗಳು ಮಂಗಳ ಯಾನದ ಕುರಿತು ಏನು ತೋರಿಸುತ್ತವೆ ಎಂಬುದು ಮುಖ್ಯ. ಈ ಸಂದರ್ಭದ ಚರ್ಚೆಗೆ ಕೂಡ ಯಾವುದಾದರೂ ವಾಹಿನಿ ಒಬ್ಬ ಅರೆಬರೆ ವಿಜ್ಞಾನಿ, ನಾಲ್ಕು ಜನ ಜೋತಿಷಿಗಳನ್ನು ಕರೆತಂದು ಕೂರಿಸಿ ಚರ್ಚೆ ನಡೆಸಿದರೂ ಆಶ್ಚರ್ಯವಿಲ್ಲ. ವಿಜ್ಞಾನ ಇಂತಹ ಸಂಕೀರ್ಣ ಸಮಸ್ಯೆಗಳನ್ನು ಎದುರಿಸಿ ಬೆಳೆಯಬೇಕಿದೆ.

ಮಂಗಳನ ಕಕ್ಷೆಗೆ ಉಪಗ್ರಹ– ಭಾರತದ ಬಾಹ್ಯಾಕಾಶ ಸಾಮರ್ಥ್ಯದ ದ್ಯೋತಕ

ಭಾರತವು ತಾನು ಅಂತರಿಕ್ಷಕ್ಕೆ ಕಳುಹಿಸಿದ ಉಪಗ್ರಹವನ್ನು ಮಂಗಳನ ಕಕ್ಷೆಗೆ ಸೇರಿಸುವಲ್ಲಿ ಯಶಸ್ವಿಯಾಗಿದ್ದು ಉಪಗ್ರಹವು ಛಾಯಾಚಿತ್ರಗಳನ್ನು ಹಾಗೂ ಮಾಹಿತಿಗಳನ್ನು ರವಾನಿಸುತ್ತಿದೆ.

ಈ ಸಾಧನೆ ಬಾಹ್ಯಾಕಾಶ ವಿಜ್ಞಾನದಲ್ಲಿ ಭಾರತದ ಸಾಮರ್ಥ್ಯವನ್ನು ತೋರಿಸುತ್ತಿದೆ ಎಂದು ಈ ಮಹತ್ವದ ಸಾಧನೆಗಾಗಿ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ–ಸಿಪಿಐ(ಎಂ) ಇಸ್ರೋದ ವಿಜ್ಞಾನಿಗಳು ಹಾಗೂ ಸಿಬ್ಬಂದಿಯನ್ನು ಅಭಿನಂದಿಸಿದೆ.

ಬಾಹ್ಯಾಕಾಶ ವಿಜ್ಞಾನದಲ್ಲಿನ ಪ್ರಗತಿಗಾಗಿ ಮುಂದಿನ ಹಂತದಲ್ಲಿ 'ಜಿಎಸ್‌ಎಲ್‌ವಿ'ಯ ಯಶಸ್ವಿ ಉಡಾವಣೆಯ ಕಡೆಗೆ ಗಮನ ಹರಿಸಬೇಕಾಗಿದೆ ಎಂದಿರುವ ಸಿಪಿಐ(ಎಂ) ದೇಶದ ಅಭಿವೃದ್ಧಿಗೆ ಬಾಹ್ಯಾಕಾಶ ವಿಜ್ಞಾನವನ್ನು ಗರಿಷ್ಠವಾಗಿ ಬಳಸುವ ನಿಟ್ಟಿನಲ್ಲಿ ಇರುವ ಸಂಪೂರ್ಣ ಅವಕಾಶವನ್ನು ಉಪಯೋಗಿಸುವಂತಾಗಲು ಈ ಕ್ಷೇತ್ರವನ್ನು ಸಾಧ್ಯತೆಯ ಪೂರ್ಣಪ್ರಮಾಣದಲ್ಲಿ ಬೆಳೆಸಬೇಕು ಎಂದು ಆಶಿಸಿದೆ.

ದಿಲ್ಲಿಯಿಂದ ನ್ಯೂಯಾರ್ಕ್ ವರೆಗೂ..........

ಪುಟ 8 ರಿಂದ

ಅವಕಾಶವಿದ್ದರೂ ಕಳೆದ ಎರಡು ವರ್ಷಗಳಲ್ಲಿ ನಿಜವಾಗಿ ಆಗಿರುವ ವೆಚ್ಚ 27ಶೇ. ಮಾತ್ರ. ಆದರೂ ಏಕೆ ಈ ಬದಲಾವಣೆ? ಯಂತ್ರಗಳನ್ನು ಬಳಸಿ ಕಾಮಗಾರಿ ಮಾಡಿಸುವ ಕಾಂಟ್ರಾಕ್ಟರುಗಳಿಗೆ ಸುಗ್ಗಿ ಎಂಬುದು ಈ ಯೋಜನೆಯ ಜಾರಿಯನ್ನು ವೀಕ್ಷಿಸುತ್ತಿರುವವರ ಅಭಿಪ್ರಾಯ.

ವಾಸ್ತವವಾಗಿ ಮನರೇಗದಲ್ಲಿ ವರ್ಷಕ್ಕೆ ಕನಿಷ್ಟ 100 ದಿನಗಳ ಕೂಲಿ ಒದಗಿಸಬೇಕು ಎಂದಿದ್ದರೂ, ಈಗ ಸರಾಸರಿಯಾಗಿ ಇದಕ್ಕಿಂತಲೂ ಕಡಿಮೆ ದಿನಗಳ ಕೂಲಿಯೇ ಸಿಗುತ್ತಿರುವುದು. ಆದ್ದರಿಂದ ಈ ಕಾನೂನನ್ನು ಕಟ್ಟುನಿಟ್ಟಾಗಿ ಜಾರಿ ಮಾಡಬೇಕು ಹಾಗೂ ಇದನ್ನು ನಗರಪ್ರದೇಶಗಳ ಬಡವರಿಗೂ ವಿಸ್ತರಿಸಬೇಕು ಎಂಬುದು ಎಡಪಕ್ಷಗಳ ಆಗ್ರಹ. ನಮ್ಮ ಪ್ರಧಾನ ಮಂತ್ರಿಗಳು ಹೇಳುವಂತೆ ನಮ್ಮ ದೇಶದ ಬಡಜನರ ಖರೀದಿ ಸಾಮರ್ಥ್ಯವನ್ನು ಹೆಚ್ಚಿಸಿ ಅವರನ್ನು ಬಡತನದಿಂದ ಹೊರತರಬೇಕಾದರೆ ಇದು ಅನಿವಾರ್ಯ. ಆದರೆ ಪ್ರಧಾನ ಮಂತ್ರಿಗಳು ಈ ಬಗ್ಗೆ ಚಕಾರವೆತ್ತದೆ, ಅವರ ಮಂತ್ರಿಗಳು ತದ್ವಿರುದ್ಧ ಪ್ರಕಟಣೆ ಮಾಡುತ್ತಾರೆಂದರೆ ಈ ಸರಕಾರ ಯಾರ ಖರೀದಿ ಸಾಮರ್ಥ್ಯವನ್ನು ಹೆಚ್ಚಿಸಬೇಕೆಂದಿದೆ ಎಂಬ ಪ್ರಶ್ನೆ ಸಹಜವೇ.

ಇದರಿಂದಾಗಿಯೇ, **ಕೇಂದ್ರ ಸರಕಾರ 'ಮೇಕ್ ಇನ್ ಇಂಡಿಯಾ' (ಭಾರತದಲ್ಲಿ ಮಾಡಿ) ಎಂಬ ಘೋಷಣೆಯೊಂದಿಗೆ 'ಮೇಡ್ ಇನ್ ಇಂಡಿಯಾ'(ಭಾರತದಲ್ಲಿ ಮಾಡಿರುವ) ಕಾರ್ಮಿಕರ ಹಕ್ಕುಗಳನ್ನು ನಾಶಮಾಡಲು ಪ್ರಯತ್ನಿಸುತ್ತಿದೆ** ಎಂದು ಸಿಪಿಐ(ಎಂ) ಮುಖಂಡರಾದ ಬೃಂದಾಕಾರಟ್ ಹೇಳಿರುವುದು.

ಅಮೆರಿಕಾದಲ್ಲಿ 'ಮೇಕ್ ಇನ್ ಇಂಡಿಯಾ'

'ಮೇಕ್ ಇನ್ ಇಂಡಿಯಾ' ಪ್ರಚಾರಾಂದೋಲನ ಆರಂಭಿಸುವ ಸಮಾರಂಭಕ್ಕೆ ಕಾರ್ಪೊರೇಟ್ ಕುಳಗಳನ್ನೆಲ್ಲ ಆಹ್ವಾನಿಸಲಾಗಿತ್ತು, ಆದರೆ ಭಾರತದಲ್ಲಿ ಇವನ್ನೆಲ್ಲ ತಯಾರಿಸಬೇಕಾದ ಕಾರ್ಮಿಕರನ್ನಾಗಲೀ, ಕಾರ್ಮಿಕರ ಪ್ರತಿನಿಧಿಗಳನ್ನಾಗಲೀ ಆಹ್ವಾನಿಸಿದಂತಿಲ್ಲ. ಅಷ್ಟೇ ಅಲ್ಲ, ನ್ಯೂಯಾರ್ಕಿನ ಮ್ಯಾಡಿಸನ್ ಚೌಕದಲ್ಲಿ ಚುನಾವಣೆಗಳಲ್ಲಿ ತಮಗೆ ಅಪಾರ ನೆರವು ನೀಡಿದ ಅಮೆರಿಕಾದಲ್ಲಿ ನೆಲೆಸಿದ ಭಾರತೀಯರನ್ನು ಉದ್ದೇಶಿಸಿ ಮಾತನಾಡಿದ ಸಭಾಂಗಣದಲ್ಲಿನ ಮೋದಿಯವರನ್ನು ಕುರಿತ ವಿಡಿಯೋ ಪ್ರದರ್ಶನದಲ್ಲಿ 'ಕಾರ್ಮಿಕ ಕಾನೂನುಗಳ ಸುಧಾರಣೆ'ಯ ಘೋಷಣೆಯೂ ಪ್ರಮುಖವಾಗಿ ಇತ್ತು. ಕಾರ್ಮಿಕ ಕಾನೂನುಗಳ ಸುಧಾರಣೆಯೆಂದರೆ ಮಾಲೀಕರ ಪರವಾದ ಬದಲಾವಣೆಗಳು ಎಂದು ಬೇರೆ ಹೇಳಬೇಕಾಗಿಲ್ಲ. 'ಜಗತ್ತಿಗೆ ಬೇಕಾದ ಕಾರ್ಮಿಕ ಶಕ್ತಿಯನ್ನು ಭಾರತ ಒದಗಿಸಬಲ್ಲದು' ಎಂಬುದು ತಮ್ಮ ಬೆಂಬಲಿಗರ ಮುಂದೆ ಅವರು ಉದುರಿಸಿದ ಅಣಿಮುತ್ತುಗಳಲ್ಲಿ ಒಂದು (ವಿಜಯ ಕರ್ನಾಟಕ, ಸಪ್ಟಂಬರ್ 29).

ಅರ್ಧ ಡಝನ್‌ನಷ್ಟು ದೊಡ್ಡ ಅಮೆರಿಕನ್ ಕಾರ್ಪೊರೇಟ್‌ಗಳು ಅವರನ್ನು ಭೇಟಿ ಮಾಡಿ 3ರಿಂದ 5 ಬಿಲಿಯನ್ ಡಾಲರುಗಳ(ಸುಮಾರು 18ರಿಂದ 30ಸಾವಿರ ಕೋಟಿರೂ.ಗಳ) ಮೌಲ್ಯದ ರಕ್ಷಣಾ ಮತ್ತು ವೈಮಾನಿಕ ಸಾಮಗ್ರಿಗಳನ್ನು ಭಾರತಕ್ಕೆ ಮಾರುವ ವ್ಯವಹಾರಗಳ ಮೇಲೆ ಕಣ್ಣಿಟ್ಟು ನಮ್ಮ ಪ್ರಧಾನ ಮಂತ್ರಿಗಳ ಭೇಟಿ ಕಾಲದಲ್ಲಿ ಅವರನ್ನು ಭೇಟಿ ಮಾಡಲಿವೆ ಎಂದು ಪಿಟಿಐ (ಸಪ್ಟಂಬರ್28) ವರದಿ ಮಾಡಿದೆ.

ಈ ಕೆಳಗಿನ ವ್ಯಂಗ್ಯಚಿತ್ರದಲ್ಲಿ ಹೇಳಿರುವಂತೆ 'ಎಲ್ಲವೂ ಸರಿ ಹೋದರೆ ಶಸ್ತ್ರಾಸ್ತ್ರ ವ್ಯಾಪಾರಿಗಳು 'ಭಾರತದಲ್ಲಿ ಮಾಡುವ' ಮೊತ್ತ ಎಷ್ಟಾಗಬಹುದು ಎಂದು ಯೋಚಿಸಿ'!




If all goes well, imagine the amounts arms merchants will 'make in India'.

ಕೃಪೆ: ನೈನನ್, ಟೈಮ್ಸ್ ಆಫ್ ಇಂಡಿಯಾ

ಆಟೋ ಪ್ರಯಾಣಕ್ಕಿಂತಲೂ ಅಗ್ಗದ ಮಂಗಳಯಾನ........

ಪುಟ 8 ರಿಂದ

ನಿಜ, ಪ್ರಧಾನ ಮಂತ್ರಿಗಳು ಆ ಭಾಷಣದಲ್ಲಿ ತಮಗೆ 120 ಕೋಟಿ ಭಾರತೀಯರ ಜನಾದೇಶ ಎಲ್ಲರಿಗೂ ಆಶ್ಚರ್ಯ ಉಂಟು ಮಾಡಿತು ಎಂದು ಬೆನ್ನು ತಟ್ಟಿಕೊಂಡರು. ಅದು ಭಾರತದ ಜನಸಂಖ್ಯೆ. ವಾಸ್ತವದಲ್ಲಿ ಒಟ್ಟು ಮತದಾರರ ಸಂಖ್ಯೆ 81.45ಕೋಟಿ, ಮತದಾನ ಮಾಡಿದವರ ಸಂಖ್ಯೆ 55.31 ಕೋಟಿ, ಅದರಲ್ಲಿ ಬಿಜೆಪಿಗೆ ಮತನೀಡಿದವರ ಸಂಖ್ಯೆ ಕೇವಲ 17.15 ಕೋಟಿ. ಎನ್‌ಡಿಎ ಒಟ್ಟಾಗಿ ಪಡೆದ ಮತಗಳ ಸಂಖ್ಯೆಯೂ 22 ಕೋಟಿ ದಾಟಿಲ್ಲ.. ಒಂದು ಚುನಾವಣಾ ಭಾಷಣದಲ್ಲಿ ಇವನ್ನೆಲ್ಲ ಯಾರೂ ಗಂಭೀರವಾಗಿ ತೆಗೆದುಕೊಳ್ಳಬೇಕಾಗಿಲ್ಲ!



ರೈಲು ಟಿಕೆಟ್ ಕೌಂಟರಿನಲ್ಲಿ

"ಗೊಣಗುವುದನ್ನು ನಿಲ್ಲಿಸಿ, ನಮ್ಮ ಪ್ರಯಾಣ ಈಗಲೂ ಅತಿ ಅಗ್ಗದ್ದು!

ಮಂಗಳಯಾನ: ಮಂಗಳಕ್ಕೆ ಅತಿ ಅಗ್ಗದ ಪ್ರಯಾಣ

ಕೃಪೆ: ಸತೀಶ ಆಚಾರ್ಯ

ಭಗತ್‌ಸಿಂಗ್.........

ಪುಟ 7 ರಿಂದ

ಬೆಂಗಳೂರು: 'ಸ್ವಾತಂತ್ರ್ಯ ಚಳುವಳಿಯಲ್ಲಿ ವಿದ್ಯಾರ್ಥಿಗಳು'- ವಿಚಾರ ಸಂಕಿರಣ

ಶಹೀದ್ ಭಗತ್‌ಸಿಂಗ್‌ರವರ 108ನೇ ಜನ್ಮದಿನಾಚರಣೆಯ ಅಂಗವಾಗಿ ಭಾರತ ವಿದ್ಯಾರ್ಥಿ ಫೆಡರೇಷನ್-ಎಸ್‌ಎಫ್‌ಐ ಬೆಂಗಳೂರು ಉತ್ತರ ಜಿಲ್ಲಾ ಸಮಿತಿಯು ಬೆಂಗಳೂರು ನಗರದ ಯುವಿಸಿಇ ಇಂಜಿನಿಯರಿಂಗ್ ಅಲ್ಯುಮ್ನಿ ಅಸೋಸಿಯೇಷನ್ ಸಭಾಂಗಣದಲ್ಲಿ 'ಸ್ವಾತಂತ್ರ್ಯ ಚಳುವಳಿಯಲ್ಲಿ ವಿದ್ಯಾರ್ಥಿಗಳು' ವಿಚಾರ ಸಂಕಿರಣವನ್ನು ಹಮ್ಮಿಕೊಂಡಿತ್ತು.

ವಿಚಾರಸಂಕಿರಣವನ್ನು ಖ್ಯಾತ ಚಲನಚಿತ್ರ ನಿರ್ದೇಶಕರಾದ ಬಿ. ಸುರೇಶ್ ಉದ್ಘಾಟಿಸಿ ಮಾತನಾಡಿದರು. ಅಧ್ಯಕ್ಷತೆಯನ್ನು ಎಸ್‌ಎಫ್‌ಐ ಜಿಲ್ಲಾ ಅಧ್ಯಕ್ಷರಾದ ಎಸ್.ಚಿಕ್ಕರಾಜು ವಹಿಸಿದ್ದರು.

ವಿಚಾರ ಸಂಕಿರಣದ ವಿಚಾರದಲ್ಲಿ ಪ್ರೊ.ಕೆ ಕೃಷ್ಣಪ್ಪ, ಸಂಯೋಜಕರು, ಕನ್ನಡ ಸ್ನಾತಕೋತ್ತರ ವಿಭಾಗ, ಸರ್ಕಾರಿ ಕಲಾ ಕಾಲೇಜು, ಹೆಚ್. ನರಸಿಂಹಯ್ಯ, ಜಿಲ್ಲಾ ಸಮಾಜಕಲ್ಯಾಣಾಧಿಕಾರಿಗಳು ಪ್ರೊ. ಮಂಜುಳಾ ಕಡಪಟ್ಟಿ, ಸಹಾಯಕ ಪ್ರಾಧ್ಯಾಪಕರು, ಎನ್.ಪ್ರತಾಪ್‌ಸಿಂಹ, ಕಾರ್ಮಿಕ ಮುಖಂಡರು, ವಿ. ಅಂಬರೀಶ್, ರಾಜ್ಯಾಧ್ಯಕ್ಷರು, ಎಸ್‌ಎಫ್‌ಐ ಮುಂತಾದವರು ವಿಷಯ ಮಂಡಿಸಿ ಮಾತನಾಡಿದರು.



ಕಾರ್ಯಕ್ರಮದ ಕುರಿತು ಪ್ರಾಸ್ತಾವಿಕವಾಗಿ ಯುವರಾಜ್.ಎಂ.ಪಿ, ಸಂಘಟನೆಯ ಜಿಲ್ಲಾ ಕಾರ್ಯದರ್ಶಿ ಮಾತನಾಡಿದರು. ಪ್ರಿಯ ಎಂ.ಕೆ, ಸುನಿಲ್, ಹನುಮಂತ್ ದುರ್ಗದ್, ವೇಣಾನಂದ್, ಮಾರುತಿಗೌಡ ಇನ್ನಿತರ ವಿದ್ಯಾರ್ಥಿ ಮುಖಂಡರುಗಳು ಉಪಸ್ಥಿತರಿದ್ದರು. ವಿಚಾರ ಸಂಕಿರಣದಲ್ಲಿ ವಿವಿಧ ಕಾಲೇಜಿನ ನೂರಾರು ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಸ್ಕಾಟ್ಲೆಂಡಿನಲ್ಲಿ ಸ್ವಾತಂತ್ರ್ಯದ ವಿರುದ್ಧ.....

ಪುಟ 16 ರಿಂದ

ಬರಿಯ ರಾಷ್ಟ್ರೀಯತೆ ಅಥವಾ ಸಾಂಸ್ಕೃತಿಕ ವಿಶಿಷ್ಟತೆಯ ಮೇಲೆ ಆಧಾರಿತವಾಗಿರಲಿಲ್ಲ, ಹಲವು ಪ್ರಮುಖ ಸಾಮಾಜಿಕ-ಆರ್ಥಿಕ-ರಾಜಕೀಯ ನೀತಿಗಳ ಮೇಲೆ ಆಧಾರಿತವಾಗಿತ್ತು. ಆದ್ದರಿಂದ ಪ್ರಜಾಸತ್ತಾತ್ಮಕವಾಗಿತ್ತು. ಸಾಮಾನ್ಯವಾಗಿ ಇಂತಹ ಸ್ವಾತಂತ್ರ್ಯ-ಪ್ರತ್ಯೇಕತಾ ಚಳುವಳಿಯ ನಾಯಕತ್ವ ವಹಿಸುವ ಬಂಡವಾಳಶಾಹಿ-ಪಾಳೆಯಗಾರಿ ಶಕ್ತಿಗಳು ಇಲ್ಲಿ ಅದಕ್ಕೆ ವಿರೋಧವಾಗಿದ್ದವು ಎಂದು ಗಮನಿಸಬೇಕು. ಸ್ಕಾಟ್ಲೆಂಡಿನ ಮುಕ್ಕಾಲು ಭಾಗದ ಭೂಒಡೆತನ ಹೊಂದಿರುವ 500 ಕುಟುಂಬಗಳು ಮತ್ತು ವಿಶ್ವವಿಖ್ಯಾತ ಸ್ಕಾಚ್ ವಿಸ್ಕಿಯ ತಯಾರಕರು ಸ್ವಾತಂತ್ರ್ಯಕ್ಕೆ ವಿರುದ್ಧವಾಗಿದ್ದರು. ಉಚಿತ ಶಿಕ್ಷಣ, ರಾಷ್ಟ್ರೀಯ ಆರೋಗ್ಯ ಸೇವೆಯನ್ನು ಪುನಃ ಜಾರಿಗೆ ತರುವ, ಕಲ್ಯಾಣ ಯೋಜನೆಗಳನ್ನು ವಿಸ್ತರಿಸಿ ಗಟ್ಟಿಗೊಳಿಸುವ, ಅಸಮಾನತೆಯನ್ನು ಕಡಿಮೆ ಮಾಡುವ ಆದಾಯ ತೆರಿಗೆ ನೀತಿ ಮುಂತಾದವು ಸ್ವತಂತ್ರ ಸ್ಕಾಟ್ಲೆಂಡಿನ ನೀತಿಗಳು ಎಂಬ ಒಮ್ಮತ ಮೂಡಿತ್ತು. ಸ್ವತಂತ್ರ ಸ್ಕಾಟ್ಲೆಂಡ್ ಅಣ್ವಸ್ತ್ರ-ಮುಕ್ತವಾಗಿರುತ್ತದೆ ಎಂದೂ ಘೋಷಿಸಲಾಗಿತ್ತು. ಅದರ ಬದಲಾಗಿ 'ಸಹಬಾಳುವೆ ಹಿತಕರ ಕೂಟ' ಪ್ರಚಾರ 300 ವರ್ಷಗಳ ಬ್ರಿಟಿಶ್ ರಾಷ್ಟ್ರೀಯತೆಯ ಬಗ್ಗೆ ಅಭಿಮಾನ, ಹೆಮ್ಮೆಗಳ ಮೇಲೆ ಆಧಾರಿತವಾಗಿತ್ತು. ಇದರ ಮಧ್ಯದಲ್ಲಿ ಸ್ಕಾಟ್ಲೆಂಡಿನ ಉತ್ತರ ಕರಾವಳಿಯಲ್ಲಿರುವ ತೈಲ ಮತ್ತು ಅಣ್ವಸ್ತ್ರಗಳು ಮತ್ತು ಅಣ್ವಸ್ತ್ರ-ಸಜ್ಜಿತ ಯುದ್ಧ ನೌಕೆಗಳು ಹಾಗೂ ಸಬ್ ಮೆರಿನುಗಳ, ನವ-ಉದಾರವಾದಿ ನೀತಿಗಳ ಭವಿಷ್ಯದ ಬಗ್ಗೆ ಲಂಡನ್ ಆಳುವವರ ಆತಂಕ ಸ್ಪಷ್ಟವಾಗಿ ಕಾಣುತ್ತಿತ್ತು. ಸ್ಕಾಟ್ಲೆಂಡಿನಲ್ಲಿ ಸ್ವಾತಂತ್ರ್ಯಕ್ಕೆ ಜನತೆಯ ಹಲವು ವಿಭಾಗಗಳ ಬೆಂಬಲ ಸಿಕ್ಕಿದ್ದೂ ಸ್ಪಷ್ಟವಿದೆ.

ಮುಂದಿನ ಪರಿಣಾಮಗಳು

ಸ್ಕಾಟ್ಲೆಂಡಿನ ಜನಮತ ಸಂಗ್ರಹದ ಫಲಿತಾಂಶದ ಮುಂದಿನ ಪರಿಣಾಮಗಳು ಬ್ರಿಟನಿನಲ್ಲೂ, ಯುರೋ-ಕೂಟದಲ್ಲೂ, ಜಗತ್ತಿನಲ್ಲೂ ಖಂಡಿತ ಇರುತ್ತವೆ. ಬ್ರಿಟನಿನ ಒಳಗೆ ವೇಲ್ಸ್, ಉತ್ತರ ಐರ್ಲೆಂಡ್, (ಇಂಗ್ಲೆಂಡಿನಲ್ಲಿ) ಸಹ ಇಂತಹ ಜನಮತ ಸಂಗ್ರಹಕ್ಕೆ ಒತ್ತಾಯ ಕೇಳಿ ಬಂದಿದೆ. ಇದು ಬ್ರಿಟನಿನ ರಾಜಕೀಯ ಸಂರಚನೆಗೆ ಅಪಾಯ ತರಬಹುದು. ಜನಮತ ಸಂಗ್ರಹ ಸ್ಕಾಟ್ಲೆಂಡಿನ ಜನತೆಯನ್ನು ಅಭೂತಪೂರ್ವ ರೀತಿಯಲ್ಲಿ ರಾಜಕೀಯಕರಣಗೊಳಿಸಿದೆ. ಸ್ವಾತಂತ್ರ್ಯ ಬೆಂಬಲಿಸಿದ ಎಲ್ಲಾ ರಾಜಕೀಯ ಪಕ್ಷಗಳ ಸದಸ್ಯತ್ವ 3-4 ಪಟ್ಟು ಹೆಚ್ಚಿದೆ. ಇದು ಸ್ಕಾಟ್ಲೆಂಡಿನ 60ರಲ್ಲಿ 40 ಬ್ರಿಟಿಶ್ ಪಾರ್ಲಿಮೆಂಟ್ ಸದಸ್ಯರನ್ನು ಹೊಂದಿರುವ ಲೇಬರ್ ಪಕ್ಷಕ್ಕೆ ಒಳ್ಳೆಯ ಸುದ್ದಿಯೇನಲ್ಲ. ಸ್ಕಾಟ್ಲೆಂಡ್ ಪಾರ್ಲಿಮೆಂಟಿಗೆ ಹೆಚ್ಚಿನ ಅಧಿಕಾರಗಳನ್ನು ಕೊಡುವ ಬ್ರಿಟಿಶ್ ಸರಕಾರದ ಭರವಸೆ ಬಗ್ಗೆ ಈಗಾಗಲೇ ಹಿಂಜರಿಕೆ ಕಾಣಬರುತ್ತಿದೆ. ಇಂಗ್ಲೆಂಡಿಗೂ ಇಂತಹ ಪ್ರಾದೇಶಿಕ ಪಾರ್ಲಿಮೆಂಟಿನ ರಚನೆಗೆ ಇದನ್ನು ಜೋಡಿಸಲಾಗಿದೆ.


ಇದಲ್ಲದೆ 2017ರಲ್ಲಿ ಯೂರೋ-ಕೂಟದಲ್ಲಿ ಮುಂದುವರೆಯಬೇಕೆ ಎಂಬ ಬಗ್ಗೆ ಜನಮತಸಂಗ್ರಹ ನಡೆಸುವ ಪ್ರಸ್ತಾವವಿದ್ದು ಇದು ಬ್ರಿಟಿಶ್ ರಾಜಕೀಯವನ್ನು ಆಮೂಲಾಗ್ರವಾಗಿ ಬದಲಾಯಿಸಬಹುದು. ಸ್ಪೈನಿನಲ್ಲಿ ಕಾಟಲುನ್ಯ, ಬೆಲ್ಜಿಯಮಿನ ಫ್ಲಾಮಿಶ್ ಪ್ರದೇಶ, ಉಕ್ರೇನಿನ ಪೂರ್ವ ಭಾಗ, ನಮ್ಮ ಕಾಶ್ಮೀರದಲ್ಲೂ ಇಂತಹ ಜನಮತ ಸಂಗ್ರಹಕ್ಕೆ ಒತ್ತಾಯ ಗಟ್ಟಿಯಾಗಬಹುದು. ಸ್ವಯಮಾಡಳಿತ ಮತ್ತು ಪ್ರಜಾಸತ್ತಾತ್ಮಕ ಕೊರತೆಗಳನ್ನು ಈಗಿರುವ ರಾಜಕೀಯ ಚೌಕಟ್ಟಿನ ಒಳಗೆ ಪರಿಹರಿಸಲು ಸೃಜನಶೀಲ ಪ್ರಾಮಾಣಿಕ ದಮನ-ರಹಿತ ಪ್ರಯತ್ನ ಮಾಡದಿದ್ದರೆ ಈ ಒತ್ತಾಯ ಅಹಿತಕಾರಿ ಪರಿಣಾಮಗಳಿಗೆ ಎಡೆಮಾಡಬಹುದು.

JANASHAKTHI KANNADA VARA PATRIKE OCT 12, 2014 Price : Rs. 10/- RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2013-15 Posted at MBC Bangalore GPO Licensed to Post without prepayment License No. WPP-283

ಜಗದಗಲ

ಶರತ್‌ಚಂದ್ರ

ಸ್ಕಾಟ್ಲೆಂಡಿನಲ್ಲಿ ಸ್ವಾತಂತ್ರ್ಯದ ವಿರುದ್ಧ ಜನಮತ



ಸ್ಕಾಟ್ಲೆಂಡ್ ಎಂಬುದು ಇಂಗ್ಲೆಂಡ್ ದೇಶದ ಒಂದು ಪ್ರಾಂತ. ಇತ್ತೀಚೆಗೆ ಬ್ರಿಟನಿನಿಂದ ಈ ಸ್ಕಾಟ್ಲೆಂಡ್ ಸ್ವತಂತ್ರವಾಗುವ ಬಗ್ಗೆ ಸಂಘಟಿಸಲಾಗಿದ್ದ ಜನಮತ ಸಂಗ್ರಹವನ್ನು ಇಡೀ ಜಗತ್ತೇ ಕುತೂಹಲದಿಂದ ನಿರೀಕ್ಷಿಸುತ್ತಿತ್ತು. ಮೊದಮೊದಲಿಗೆ ಸ್ಕಾಟ್ಲೆಂಡ್ ಸ್ವಾತಂತ್ರ್ಯದ ಪರವಾಗಿ ಮತ ನೀಡುವ ಸಾ ಧ್ಯತೆಯೇ ಹೆಚ್ಚು ಎಂದು ಕಂಡು ಬಂದಿತ್ತು. ಇದರ ಬಗ್ಗೆ ನಡೆದ ಸಮೀಕ್ಷೆಗಳಲ್ಲೂ (ಸ್ವಾಟ್ಲೆಂಡ್ ಸ್ವತಂತ್ರವಾಗಬೇಕೆ? ಎಂಬ ಜನಮತ ಸಂಗ್ರಹದ ಪ್ರಶ್ನೆಗೆ) 'ಹೌದು' ಎಂಬುದರ ಪರವಾಗಿ ಬಹುಮತ ಕಂಡು ಬಂದಿತ್ತು. ಆದರೆ ಕೊನೆಗೂ ಸೆಪ್ಟೆಂಬರ್ 17ರಂದು ನಡೆದ ಜನಮತ ಸಂಗ್ರಹದಲ್ಲಿ 'ಇಲ್ಲ' ಎಂಬುದರ ಪರವಾಗಿ ಶೇ.55 ಜನ ಮತ ನೀಡಿ ಸ್ಕಾಟ್ಲೆಂಡ್ ಬ್ರಿಟನಿನ ಭಾಗವಾಗಿ ಮುಂದುವರೆಯಬೇಕು ಎಂದು ಸ್ಕಾಟರು ಆಯ್ಕೆ ಮಾಡಿಕೊಂಡಿದ್ದಾರೆ.

ಸ್ಕಾಟ್ಲೆಂಡಿನ 32 ಮಂಡಳಿಗಳಲ್ಲಿ 28 ಮಂಡಲಗಳಲ್ಲಿ 'ಹೌದು' ಎಂಬುದರ ಪರವಾಗಿ ಬಹುಮತ ಸಿಕ್ಕಿದೆ. ಗ್ಲಾಸ್ಗೊ ಮತ್ತು ಅದರ ನೆರೆಯ ಕಾರ್ಮಿಕ ವರ್ಗ ಬಹು ಸಂಖ್ಯಾತರಾಗಿರುವ ಮತ್ತು ನಿರುದ್ಯೋಗ ಹೆಚ್ಚಿರುವ 4 ಮಂಡಲಗಳಲ್ಲಿ ಮಾತ್ರ 'ಹೌದು' ಪರವಾಗಿ ಬಹುಮತ ಬಂತು. ಆದರೆ ಸಾಂಪ್ರದಾಯಿಕ ಗ್ರಾಮೀಣ ಜನ ಮತ್ತು ಮಧ್ಯಮ ವರ್ಗಗಳು ಹೆಚ್ಚಿರುವ ಮಂಡಳಿಗಳಲ್ಲಿ 'ಇಲ್ಲ' ಎಂಬುದರ ಪರವಾಗಿ ಬಂದ ಭಾರೀ ಬಹುಮತ ಇಲ್ಲವಾಗಿಸುವಷ್ಟು ಪ್ರಮಾಣದಲ್ಲಿ ಇರಲಿಲ್ಲ. ರಾಜಧಾನಿ ಎಡಿನ್‌ಬರೊದಲ್ಲೂ 'ಇಲ್ಲ' ಪರವಾಗಿ ಶೇ.60 ಮತ ಬಂತು. ಸ್ಕಾಟ್ಲೆಂಡ್‌ನಲ್ಲಿ ವಾಸಿಸುವ 16 ವರ್ಷಕ್ಕಿಂತ ಮೇಲ್ಪಟ್ಟ (ಯುರೋಪಿಯನ್ ಒಕ್ಕೂಟದ ಮತ್ತು ಕಾಮನ್ ವೆಲ್ತ್ ದೇಶಗಳ ನಾಗರಿಕರು ಸೇರಿದಂತೆ) ಎಲ್ಲಾ ನಾಗರಿಕರಿಗೆ ಜನಮತ ಸಂಗ್ರಹದಲ್ಲಿ ಮತ ಚಲಾಯಿಸುವ ಅರ್ಹತೆ ಇದ್ದದ್ದು ಒಂದು ವಿಶೇಷವಾಗಿತ್ತು.

ಕೊನೆಗಳಿಗೆ 'ಭಯ'?

ಬಹುಸಂಖ್ಯಾತ ಸ್ಕಾಟರು ಸ್ಕಾಟ್ಲೆಂಡ್ ಸ್ವತಂತ್ರವಾಗುವ ಪರವಾಗಿ ಇದ್ದರೂ, 'ಇಲ್ಲ' ಪರ ಪ್ರಚಾರಕಾರರು ಕೊನೆಗಳಿಗೆಯಲ್ಲಿ ಸ್ಕಾಟರಲ್ಲಿ 'ಭಯ' ಉಂಟು ಮಾಡುವುದರಲ್ಲಿ ಸಫಲರಾಗಿದ್ದರಿಂದ ಈ ಫಲಿತಾಂಶ ಬಂದಿದೆ ಎಂದು ಕೆಲವು ವೀಕ್ಷಕರು ಅಭಿಪ್ರಾಯ ಪಟ್ಟಿದ್ದಾರೆ. ಪೆಂಶನಿನಲ್ಲಿ ಮತ್ತು ಉದ್ಯೋಗಗಳಲ್ಲಿ ಏರುಪೇರು/ಅನಿಶ್ಚಿತತೆ, ಬಂಡವಾಳದ/ಕಂಪನಿಗಳ ಪಲಾಯನ, ಪೌಂಡು ಸ್ಟರ್ಲಿಂಗು ನಾಣ್ಯ ಮುಂದುವರೆಯದೆ ಹೋಗುವುದು, ನಾಟೊ ಮತ್ತು ಯುರೋಪಿಯನ್ ಒಕ್ಕೂಟದ ಸದಸ್ಯತ್ವ ಸಿಗದೆ ಹೋಗುವ ಸಾಧ್ಯತೆ–ಇತ್ಯಾದಿಗಳು ತರಬಹುದಾದ ಅನಿಶ್ಚಿತತೆ ಸ್ಕಾಟರಲ್ಲಿ 'ಭಯ' ಹುಟ್ಟಿಸಿತು. ಅದರಲ್ಲೂ 'ಹೌದು' ಮತ್ತು 'ಇಲ್ಲ'ಗಳ ನಡುವೆ ಹೊಯ್ದಾಡುತ್ತಿದ್ದ ಮತ್ತು ತಟಸ್ಥರಾಗಿದ್ದ ಜನ 'ಇಲ್ಲ'ದ ಪರವಾಗಿ ಮತ ನೀಡುವಂತೆ ಮಾಡಿತು. 'ಇಲ್ಲ' ಪರವಾಗಿದ್ದ ಮೂರೂ ಪ್ರಮುಖ ಪಕ್ಷಗಳೂ (ಕನ್ಸರ್ವೇಟಿವ್, ಲಿಬರಲ್, ಲೇಬರ್) ಸೇರಿ ಈಗಾಗಲೇ ಇರುವ ಸ್ಕಾಟ್ಲೆಂಡ್ ಪಾರ್ಲಿಮೆಂಟಿಗೆ ಹೆಚ್ಚಿನ ಅಧಿಕಾರಗಳನ್ನು ಕೊಡುವ ಕೊನೆಗಳಿಗೆಯ ಭರವಸೆ ಸಹ ಅಂತಿಮ ಫಲಿತಾಂಶದ ಮೇಲೆ ಪರಿಣಾಮ ಬೀರಿದೆ ಎಂದು ಈ ವೀಕ್ಷಕರ ಅಭಿಪ್ರಾಯ.

ಸ್ಕಾಟ್ಲೆಂಡ್ ಸ್ವಾತಂತ್ರ್ಯದ ಪರವಾಗಿ ಸ್ಕಾಟ್ಲೆಂಡ್ ನೇಶನಲ್ ಪಾರ್ಟಿ (ಎಸ್.ಎನ್.ಪಿ.), ಸ್ಕಾಟ್ಲೆಂಡ್‌ಗ್ರೀನ್ ಪಾರ್ಟಿ, ಸ್ಕಾಟ್ಲೆಂಡ್ ಸೋಶಲಿಸ್ಟ್ ಪಾರ್ಟಿ ಸೇರಿದ್ದ 'ಹೌದುಕೂಟ' ಪ್ರಚಾರ ನಡೆಸಿತು. ಈ ಕೂಟ ಸ್ವತಂತ್ರ ಸ್ಕಾಟ್ಲೆಂಡ್ ಸಾಮಾಜಿಕ–ಆರ್ಥಿಕ–ರಾಜಕೀಯ ನೀತಿಗಳನ್ನು ಸ್ಪಷ್ಟಪಡಿಸುವ ವಿವರವಾದ ಪ್ರಣಾಳಿಕೆಯನ್ನು ಹೊರಡಿಸಿತ್ತು. ಸ್ಕಾಟಿಶ್ ಸರಕಾರದ ಮೊದಲ ಮಂತ್ರಿ ಅಲೆಕ್ಸ್ ಸಾಲ್ಮಂಡ್ ಈ ಕೂಟದ ನಾಯಕತ್ವ ವಹಿಸಿದ್ದರು. ಎಸ್.ಎನ್.ಪಿ.ಯ ಸ್ಕಾಟಿಶ್ ಸರಕಾರ ಇದಕ್ಕೆ ಪೂರ್ಣ ಬೆಂಬಲ ಕೊಟ್ಟಿತ್ತು. ಸ್ಕಾಟ್ಲೆಂಡ್ ಬ್ರಿಟಿಶ್ ಒಕ್ಕೂಟದಲ್ಲಿ ಮುಂದುವರೆಯಬೇಕೆಂದು ('ಇಲ್ಲ'ಮತದ ಪರ) 'ಸಹಬಾಳುವೆ ಹಿತಕರಕೂಟ' (ಬೆಟರ್ ಟುಗೆದರ್ ಅಲಾಯನ್ಸ್) ಪ್ರಚಾರ ನಡೆಸಿತ್ತು. ಈ ಕೂಟವನ್ನು ಬ್ರಿಟನಿನ ಮೂರೂ ಪ್ರಮುಖ ಪಕ್ಷಗಳೂ ಬೆಂಬಲಿಸಿದ್ದು, ಲೇಬರ್ ಪಕ್ಷದ ಅಲಿಸ್ಟರ್ ಡಾರ್ಲಿಂಗ್ ಅದರ ನಾಯಕತ್ವ ವಹಿಸಿದ್ದರು.

ಜನಮತ ಸಂಗ್ರಹಕ್ಕೆ ಹಿನ್ನೆಲೆ

ಸ್ಕಾಟ್ಲೆಂಡ್ ಬ್ರಿಟನಿನ ಉತ್ತರ ಭಾಗವನ್ನು ಆವರಿಸಿರುವ ಪ್ರದೇಶ. ಗ್ರೇಟ್ ಬ್ರಿಟನ್ ಅಥವಾ ಯುನೈಟೆಡ್ ಕಿಂಗ್‌ಡಮ್ ಚಾರಿತ್ರಿಕವಾಗಿ ಒಂದೇ ದೇಶವಾಗಿರಲಿಲ್ಲ. ಅದು ಇಂಗ್ಲೆಂಡ್, ಸ್ಕಾಟ್ಲೆಂಡ್, ವೇಲ್ಸ್, ಉತ್ತರ ಐರ್ಲೆಂಡ್ 'ದೇಶ'ಗಳು ಐಕ್ಯವಾಗಿ ರೂಪಿತವಾದ ಒಕ್ಕೂಟ. 17ನೇ ಶತಮಾನದಲ್ಲಷ್ಟೇ ಇಂಗ್ಲೆಂಡ್, ಸ್ಕಾಟ್ಲೆಂಡ್ ಒಂದಾಗಿದ್ದವು. ಅದಕ್ಕಿಂತ ಹಿಂದೆ ಇಂಗ್ಲೆಂಡ್ ಮತ್ತು ಸ್ಕಾಟ್ಲೆಂಡ್‌ಗಳ ನಡುವೆ ಹಲವು ಯುದ್ಧಗಳ ಚರಿತ್ರೆ ಇದೆ. 19ನೇ ಶತಮಾನದಲ್ಲಿ ಐರ್ಲೆಂಡೂ ಸೇರಿಕೊಂಡಿತ್ತು. ಆದರೆ 20ನೇ ಶತಮಾನದಲ್ಲಿ ದಕ್ಷಿಣ ಐರ್ಲೆಂಡು ಪುನಃ ಸ್ವತಂತ್ರವಾಯಿತು. ಆದರೆ ಈ ಒಕ್ಕೂಟದಲ್ಲಿ ಸಂಖ್ಯಾಬಲದಿಂದ ಮತ್ತು ಚಾರಿತ್ರಿಕ ಕಾರಣಗಳಿಂದ ಇಂಗ್ಲೆಂಡಿನವರದ್ದೇ ಯಜಮಾನಿಕೆ. ಎಲ್ಲಾ ರಾಜಕೀಯ ಅಧಿಕಾರ ಲಂಡನಿನಲ್ಲೇ ಕೇಂದ್ರೀಕೃತವಾಗಿತ್ತು.

ಇದರಿಂದಾಗಿ ಸ್ಕಾಟ್ಲೆಂಡಿನ ಜನರಲ್ಲಿ ಅತೃಪ್ತಿ ಇದ್ದೇ ಇತ್ತು. 1920ರಲ್ಲಿ ಲೇಬರ್ ಪಕ್ಷ ಸ್ಕಾಟ್ಲೆಂಡಿನ ಜನತೆಗೆ ಸ್ವಯಮಾಡಳಿತ ಕೊಡುವ ಭರವಸೆ ನೀಡಿತ್ತು. ಆದರೆ ಅದು ಮುಂದೆ ಅಧಿಕಾರಕ್ಕೆ ಬಂದಾಗ ಆ ಬಗ್ಗೆ ಏನೂ ಮಾಡಲಿಲ್ಲ. 1934ರಲ್ಲಿ ಸ್ಕಾಟ್ಲೆಂಡಿನ ಜನರ ಅತೃಪ್ತಿಗೆ ದನಿ ಕೊಡುವ ಸ್ಕಾಟ್ಲೆಂಡ್ ನೇಶನಲ್ ಪಾರ್ಟಿ (ಎಸ್.ಎನ್.ಪಿ.) ಹುಟ್ಟಿಕೊಂಡಿತು. ಆದರೆ 1970ರ ದಶಕದ ವರೆಗೆ ಚುನಾವಣಾ ಮತಗಳಿಕೆಯಲ್ಲಿ ಗಮನಾರ್ಹ ಪ್ರಗತಿ ಸಾಧಿಸುವವರೆಗೆ, ಎಸ್.ಎನ್.ಪಿ.ಯ ಸ್ವಯಮಾಡಳಿತದ ಬೇಡಿಕೆಯನ್ನು ನಿರ್ಲಕ್ಷಿಸಲಾಯಿತು. ಎಸ್.ಎನ್.ಪಿ. ಲೇಬರ್ ಪಕ್ಷಕ್ಕೆ ಚುನಾವಣೆಯಲ್ಲಿ ಸವಾಲು ಹಾಕಲಾರಂಭಿಸಿದಾಗ, 1979ರಲ್ಲಿ ಲೇಬರ್ ಸರಕಾರ ಸ್ಕಾಟಿಶ್ ವಿಧಾನಸಭೆ ರಚನೆಗೆ ಜನಮತ ಸಂಗ್ರಹ ನಡೆಸಿತು. ಜನಮತ ಸಂಗ್ರಹದಲ್ಲಿ ಸ್ಕಾಟಿಶ್ ವಿಧಾನಸಭೆ ರಚನೆಗೆ ಬಹುಮತ ಬೆಂಬಲ ವ್ಯಕ್ತವಾಯಿತು. ಆದರೆ 'ಹೌದು' ಮತಕೊಟ್ಟವರ ಸಂಖ್ಯೆ ಒಟ್ಟು ಮತದಾರರ ಕನಿಷ್ಟ ಶೇ.40 ಇರಬೇಕು ಎಂಬ ನಿಯಮದಿಂದಾಗಿ ತಿರಸ್ಕೃತವಾಯಿತು.



1997ರಲ್ಲಿ ಲೇಬರ್ ಸರಕಾರ ಸ್ಕಾಟಿಶ್ ಪಾರ್ಲಿಮೆಂಟು ಸ್ಥಾಪಿಸಬೇಕೆ ಎಂಬ ಬಗ್ಗೆ ಜನಮತಸಂಗ್ರಹ ನಡೆಸಿ ಅದರ ಪರವಾಗಿ ಬಹುಮತ ಬಂತು. 1999ರಲ್ಲಿ ಒಕ್ಕೂಟದ ಸರಕಾರಕ್ಕೆ ಮೀಸಲಾದ ಸಂಗತಿಗಳನ್ನು ಬಿಟ್ಟು ಸ್ಕಾಟ್ಲೆಂಡಿನ ಬಗ್ಗೆ ಎಲ್ಲಾ ವಿಷಯಗಳ ಬಗ್ಗೆ ಪರಮಾಧಿಕಾರ ಹೊಂದಿರುವ ಸ್ಕಾಟಿಶ್ ಪಾರ್ಲಿಮೆಂಟಿಗೆ ಮೊದಲ ಚುನಾವಣೆ ನಡೆಯಿತು. 2007ರಲ್ಲಿ ಸ್ಕಾಟಿಶ್ ಪಾರ್ಲಿಮೆಂಟಿನ ಚುನಾವಣೆ ಗೆದ್ದು ಸ್ಥಳೀಯ ಸರಕಾರ ನಡೆಸಲು ಆರಂಭಿಸಿದಾಗ ಎಸ್.ಎನ್.ಪಿ. ಪಕ್ಷ ಸ್ಕಾಟ್ಲೆಂಡ್ ಸ್ವತಂತ್ರ ದೇಶವಾಗುವ ಬಗ್ಗೆ ಜನಮತಸಂಗ್ರಹ ನಡೆಸಬೇಕೆಂಬ ಪ್ರಸ್ತಾವ ಮುಂದಿಟ್ಟಿತು. ಇದರ ಬಗ್ಗೆ ಒಕ್ಕೂಟ ಮತ್ತು ಸ್ಕಾಟಿಶ್ ಸರಕಾರದ ನಡುವೆ ಮಾತುಕತೆ ನಡೆದು 2012ರಲ್ಲಿ 'ಎಡಿನ್ ಬರೊಒಪ್ಪಂದ' ಆಗಿ, ಅದರ ಪ್ರಕಾರ 2014 ಕೊನೆಯ ಹೊತ್ತಿಗೆ ಜನಮತಸಂಗ್ರಹ ನಡೆಸಬೇಕೆಂದು ನಿರ್ಣಯಿಸಲಾಯಿತು. ಈ ನಡುವೆ ಸ್ಕಾಟಿಶ್ ಪಾರ್ಲಿಮೆಂಟು ಜೂನ್ 2013ರಲ್ಲಿ ಸ್ಕಾಟ್ಲೆಂಡ್ ಸ್ವಾತಂತ್ರ್ಯದ ಜನಮತಸಂಗ್ರಹದ ಬಗ್ಗೆ ಮಸೂದೆ ಪಾಸು ಮಾಡಿತು. ಇದೇ ಇತ್ತೀಚೆಗೆ ನಡೆದ ಜನಮತಸಂಗ್ರಹದ ಹಿನ್ನೆಲೆ.

ಪ್ರಜಾಸತ್ತಾತ್ಮಕ ಅಥವಾ ವಿಚ್ಛಿದ್ರಕಾರಿ ರಾಷ್ಟ್ರೀಯತೆ?

ಪಾಳೆಯಗಾರಿಕೆ ವ್ಯವಸ್ಥೆ ಪ್ರಧಾನವಾಗಿದ್ದ ಮಧ್ಯಯುಗದಲ್ಲಿ ಸಾಮಂತರು, ರಾಜರುಗಳ, ಸಾಮ್ರಾಟರ (ಯುದ್ಧ, ಆಕ್ರಮಣಗಳು, ಒಪ್ಪಂದಗಳು) ಮರ್ಜಿಯ ಆಧಾರದ ಮೇಲೆ ದೇಶಗಳು ರಚಿತವಾಗುತ್ತಿದ್ದವು, ಒಡೆಯುತ್ತಿದ್ದವು. ಅದಕ್ಕೆ ಜನತೆಯ ಒಪ್ಪಿಗೆ, ಪಾಲ್ಗೊಳ್ಳುವಿಕೆ ಇರಲಿಲ್ಲ. ಬಂಡವಾಳಶಾಹಿ ವ್ಯವಸ್ಥೆ ಪ್ರಧಾನವಾದ ಆಧುನಿಕಯುಗದಲ್ಲಿ ಭಾಷೆ, ಸಾಂಸ್ಕೃತಿಕ ಅನನ್ಯತೆ, ಬುಡಕಟ್ಟು ಮುಂತಾದವುಗಳ ಆ ಧಾರದ ಮೇಲೆ ಹೆಚ್ಚಾಗಿ ಜನತೆಯ ಸ್ವಲ್ಪವಾದರೂ ಒಪ್ಪಿಗೆ/ಪಾಲುಗೊಳ್ಳುವಿಕೆಯ ಆಧಾರದ ಮೇಲೆ ದೇಶಗಳು ರೂಪಿತವಾಗಿವೆ. ಆದರೆ ಇಲ್ಲೂ ರಾಷ್ಟ್ರೀಯ ಬಂಡವಾಳಿಗರ ಪ್ರಬಲ ವಿಭಾಗಗಳ ಹಿತಾಸಕ್ತಿಗಳೇ ಮರ್ಜಿಯೇ ಪ್ರಧಾನವಾಗಿತ್ತು. ಇಂತಹ ದೇಶಗಳ ಒಳಗೂ ಅಲ್ಪಸಂಖ್ಯಾತ ಭಾಷೆ, ಸಾಂಸ್ಕೃತಿಕ ಅನನ್ಯತೆಗಳ ಜನತೆಯ ದನಿಗೆ ಆದ್ಯತೆ ಮನ್ನಣೆ ದೊರಕಿಲ್ಲ. ಇದರಿಂದಾಗಿ ಹಲವು ದೇಶಗಳಲ್ಲಿ ಸ್ವಾತಂತ್ರ್ಯದ ಕೂಗು ಕೇಳಿ ಬಂದಿದೆ.

ಇನ್ನೊಂದು ಕಡೆ ಹಣಕಾಸು ಬಂಡವಾಳದ ಜಾಗತೀಕರಣದ ಹಂತದಲ್ಲಿ, ರಾಜಕೀಯ–ಆರ್ಥಿಕವಾಗಿ ದುರ್ಬಲವಾದ (ಅಥವಾ ಭಾರತದಂತಹ ಮೂರನೇ ಜಗತ್ತಿನ ಪ್ರಮುಖ) ದೇಶಗಳ ಒಳಗೆ ಪ್ರವೇಶಿಸಲು ಮುಕ್ತ ಅವಕಾಶ ಮಾಡಿಕೊಳ್ಳಲು ಅವುಗಳನ್ನು ಇನ್ನಷ್ಟು ದುರ್ಬಲಗೊಳಿಸಲು, ಅವುಗಳನ್ನು ಭಾಷೆ, ಸಾಂಸ್ಕೃತಿಕ ಅನನ್ಯತೆ, ಬುಡಕಟ್ಟುಗಳ ಆ ಧಾರದ ಮೇಲೆ ಒಡೆಯಲು ಹುನ್ನಾರ ನಡೆಸಿವೆ. ಚಾರಿತ್ರಿಕವಾಗಿ ನೆರೆ–ಹೊರೆಯ ಇಂತಹ ಜನತೆಗಳ ನಡುವೆ ಇದ್ದ ವೈಷಮ್ಯಗಳನ್ನು ಉಲ್ಬಣಗೊಳಿಸಲಾಗುತ್ತದೆ. ಯುಗೊಸ್ಲಾವಿಯವನ್ನು ಸಾಮ್ರಾಜ್ಯಶಾಹಿ ಈ ರೀತಿಯಲ್ಲಿ ಒಡೆದು ಹಾಕಿ ದುರ್ಬಲಗೊಳಿಸಿತ್ತು.

ರಾಷ್ಟ್ರೀಯತೆ ಮಾತ್ರವಲ್ಲ

ಸ್ಕಾಟ್ಲೆಂಡಿನಲ್ಲಿ ಸ್ವಾತಂತ್ರ್ಯದ ಕೂಗು ಇವೆರಡರಲ್ಲಿ ಯಾವ ರೀತಿಯದು? ಸ್ಕಾಟ್ಲೆಂಡಿನದ್ದು ಎರಡನೆಯ ರೀತಿಯದ್ದು ಖಂಡಿತ ಅಲ್ಲ. ಅದು

ಪುಟ 15 ಕ್ಕೆ

JANASHAKTHI KANNADA VARA PATRIKE: Printed by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086 Published by: **G.V.SRIRAMA REDDY** EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of / owned by **COMMUNIST PARTY OF INDIA (MARXIST)** and **Printed at : Kriya Prakashana**, No. 12, 18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, Mahalakshmi Layout, BANGALORE-560086 . Editor **NITHYANANDASWAMI** EMS Bhavana, No.37/A, 8th Cross, Mahalakshmi Layout, BANGALORE-560086 Editor : **NITHYANANDASWAMI**